
ಬ್ರಹ್ಮರ್ಷಿ ಪಿತಾಮಹ ಸುಭಾಷ್ ಪತ್ರೀಜಿ ಆಶೀರ್ವಾದಗಳೊಂದಿಗೆ

# ಸತ್ಯಮಾರ್ಗ

## ಬ್ರಹ್ಮರ್ಷಿ ತಟವರ್ತಿ ವೀರರಾಘವರಾವು

ಸತ್ಯಮಾರ್ಗ
ಬ್ರಹ್ಮರ್ಷಿ ತಟವರ್ತಿ ವೀರರಾಘವರಾವು



ಅನುವಾದ : ಕೆ.ಶೋಭಾಲತ

# ಸತ್ಯಮಾರ್ಗ

ತಟವರ್ತಿ ವೀರರಾಘವರಾವು



ಅನುವಾದಕರು:

**ಕೆ. ಶೋಭಾಲತ**


**ಶ್ರೀರಾಮ ಪಬ್ಲಿಕೇಶನ್ಸ್**

ಶ್ರೀ ರಾಮಧಾಮ ಪಿರಮಿಡ್ ಧ್ಯಾನಕೇಂದ್ರ,

ನಾರಾಯಣಪ್ಪಗಾರ್ಡನ್, ವೈಟ್‌ಫೀಲ್ಡ್, ಬೆಂಗಳೂರು – ೫೬೦ ೦೬೬

**ಪಿರಮಿಡ್ ವ್ಯಾಲಿ ಇಂಟರ್‌ನ್ಯಾಷನಲ್**

ಕೆಬ್ಬೆದೊಡ್ಡಿ ಗ್ರಾಮ, ಹಾರೋಹಳ್ಳಿ ಹೋಬಳಿ, ಕನಕಪುರ ರಸ್ತೆ, ಬೆಂಗಳೂರು

**Sathyamarga**

**Edited & Published by Srirama Publications,**

**Sri Ramadhama Pyaramid Dyanakendra, Narayanappa Garden, Whitefiled, Bangalore - 560 066.**

**M.: 9449695503, 8050082689**

| | | |
|---|---|---|
| ಮೊದಲನೇ ಮುದ್ರಣ | : | 2025 |
| ಹಕ್ಕುಗಳು | : | ಪ್ರಕಾಶಕರು |
| ಪ್ರಕಾಶಕರು | : | ಶ್ರೀರಾಮ ಪಬ್ಲಿಕೇಶನ್ಸ್<br>ಶ್ರೀ ರಾಮಧಾಮ ಪಿರಮಿಡ್ ಧ್ಯಾನಕೇಂದ್ರ,<br>ನಾರಾಯಣಪ್ಪಗಾರ್ಡನ್, ವೈಟ್‌ಫೀಲ್ಡ್,<br>ಬೆಂಗಳೂರು – 560 066<br>ಮೊ.: 9449695503 |
| ಬಳಸಿದ ಕಾಗದ | : | 70 ಜಿ.ಎಸ್.ಎಂ. ಮ್ಯಾಪಲಿಥೊ ಡೆಮಿ 1/8 |
| ಪ್ರತಿಗಳು | : | 1000 |
| ಬೆಲೆ | : | 80/– ರೂ |
| ಪುಟಗಳು | : | 80 |
| ಮುಖಪುಟ | : | ಚಂದ್ರಕಾಂತ ಪಟ್ಟಣ |
| ಅಕ್ಷರ ಜೋಡಣೆ | : | ನಿರಂತರ ಸಾಯಿ ಕಮ್ಯೂನಿಕೇಷನ್ ಪ್ರೈ .ಲಿ<br>ಮೊ: 96328 12541 |

ಮುದ್ರಣ :

ಪೂರ್ಣಾ ಗ್ರಾಫಿಕ್ಸ್,

ಬೆಂಗಳೂರು 9844167475

# ಸ್ವ–ಪರಿಚಯ

ನನ್ನ ಹೆಸರು ಎಚ್.ಎನ್.ಶ್ರೀನಿವಾಸ. ವೃತ್ತಿಯಲ್ಲಿ ಸಿವಿಲ್ ಇಂಜಿನಿಯರ್. ಪದವಿ ಪಡೆದ ಆರಂಭದಲ್ಲಿ, ಮೂರು ವರ್ಷಗಳ ಕಾಲ ಸರ್ಕಾರಿ ಉದ್ಯೋಗದಲ್ಲಿ ಕೆಲಸ ಮಾಡಿದ ನಂತರ, ಆ ಉದ್ಯೋಗದಲ್ಲಿ ನಿರಾಸಕ್ತಿ ಹೊಂದಿದ ನಾನು, 1990ರಲ್ಲಿ ನನ್ನ ಸ್ವಂತ ವ್ಯವಹಾರವನ್ನು ಪ್ರಾರಂಭಿಸಿದೆ. ನನ್ನ ಆಧ್ಯಾತ್ಮಿಕ ಪ್ರಯಾಣವು 1999ರಲ್ಲಿ ಎಸ್.ಎಸ್.ವೈ. ಅಂದರೆ, ಸಿದ್ಧಸಮಾಧಿ ಯೋಗ ಗುರೂಜಿಯವರಿಂದ ಪ್ರಾರಂಭವಾಯಿತು. 2004ರಲ್ಲಿ ವೀರಾಂಜನೇಯ ದೇವಾಲಯವನ್ನು ಬೆಂಗಳೂರಿನ ವೈಟ್‌ಫೀಲ್ಡ್‌ನಲ್ಲಿ ನಿರ್ಮಿಸಲಾಯಿತು. ಎಲ್ಲಾ ಆಚರಣೆಗಳು ದೇವಾಲಯದಲ್ಲಿ ನಿಯಮಿತವಾಗಿ ನಡೆಯುತ್ತಿದ್ದವು. ಆಧ್ಯಾತ್ಮದ ಬಗ್ಗೆ ನನಗೆ ಒಲವು ಹೆಚ್ಚಾದಂತೆ ನಾನು ಮತ್ತು ನನ್ನ ಪತ್ನಿ ಎಸ್.ಎನ್.ವಿಜಯಲಕ್ಷ್ಮಿ ಸೇರಿ 2008ರಲ್ಲಿ ನಾವು ದೇವಾಲಯದ ಪಕ್ಕದಲ್ಲಿ 'ಶ್ರೀ ರಾಮಧಾಮ ಧ್ಯಾನ ಮಂದಿರ' ಎಂಬ ಹೆಸರಿನ ಒಂದು ಧ್ಯಾನ ಮಂದಿರವನ್ನು ನಿರ್ಮಿಸಿದೆವು. ಇದನ್ನು ಸಿದ್ಧಸಮಾಧಿ ಯೋಗ ಸಂಸ್ಥಾಪಕರಾದ ಡಾ.ಋಷಿ ಪ್ರಭಾಕರ್ ಗುರೂಜಿಯವರು ಉದ್ಘಾಟಿಸಿದರು. ಅಲ್ಲಿ ಎಸ್.ಎಸ್.ವೈ. ಶಿಕ್ಷಕರಿಂದ ಸಾಮೂಹಿಕ ಧ್ಯಾನ ತರಬೇತಿಗಳನ್ನು ಆಯೋಜಿಸುತ್ತಿದ್ದೆವು. 2009ರಲ್ಲಿ ಬ್ರಹ್ಮರ್ಷಿ ಪಿತಾಮಹ ಡಾ.ಸುಭಾಷ್ ಪತ್ರೀಜಿಯವರು ಧ್ಯಾನ ಅಧಿವೇಶನಕ್ಕಾಗಿ ಶ್ರೀರಾಮಧಾಮ ಕೇಂದ್ರಕ್ಕೆ ಭೇಟಿ ನೀಡಿದಾಗ 'ಆನಾಪಾನಸತಿ ಧ್ಯಾನ ವಿಧಾನ'ವನ್ನು ಪರಿಚಯ ಮಾಡಿಸಿದರು. ಪತ್ರೀಜಿಯವರನ್ನು ಭೇಟಿಯಾದ ನಂತರ, ದಿನನಿತ್ಯದ ನನ್ನ ಆಧ್ಯಾತ್ಮಿಕ ಅಭ್ಯಾಸದ ಕಾಲಾವಧಿಯನ್ನು ಹೆಚ್ಚಿಸಿದೆ. ಪಿ.ಎಸ್.ಎಸ್.ಎಂ.ನ ತತ್ವಸಿದ್ಧಾಂತದಲ್ಲಿ ಗುರು–ಶಿಷ್ಯರ ಕುರಿತಾದ ಒಂದು ಪ್ರಮುಖವಾದ ಅಂಶವು ನನ್ನ ಗಮನ ಸೆಳೆಯಿತು. 'ಯಾರೂ ಶಾಶ್ವತವಾಗಿ ಗುರುಗಳಲ್ಲ, ಯಾರೂ ಶಾಶ್ವತವಾಗಿ ಶಿಷ್ಯರೂ ಅಲ್ಲ, ಅವರಿಗೆ ಅವರೇ ಗುರುಗಳು. ಮಾಸ್ಟರ್ ಆಗಿ ಬದುಕಲು ಕಲಿಯಿರಿ, ಎಂದಿಗೂ ಶಿಷ್ಯರಾಗಿಯೇ ಇರಬೇಡಿ' ಎಂಬ ಪತ್ರೀಜಿಯವರ ಮಾತುಗಳು ಆಧ್ಯಾತ್ಮದಲ್ಲಿ ನನ್ನ ಆಸಕ್ತಿಯನ್ನು ಹೆಚ್ಚಿಸಿತು. 2013ರಲ್ಲಿ ಪತ್ರೀಜಿಯವರು ನನಗೆ ಪಿರಮಿಡ್ ವ್ಯಾಲಿ ಇಂಟರ್‌ನ್ಯಾಷನಲ್ ಟ್ರಸ್ಟ್‌ನಲ್ಲಿ ಒಬ್ಬ ಟ್ರಸ್ಟಿಯಾಗಿ ಸೇವೆ ಮಾಡುವ ಸದವಕಾಶವನ್ನು ಒದಗಿಸಿದರು. ಇದರಲ್ಲಿ ನನಗೆ 'ನಿತ್ಯ ಅನ್ನದಾನ ಸೇವೆ'ಯ ಜವಾಬ್ದಾರಿಯನ್ನು ವಹಿಸಲಾಯಿತು. ಪ್ರತಿಯೊಬ್ಬ ಮಾನವನು ಮಾಧವನಾಗಬೇಕಾದರೆ ಪ್ರತಿನಿತ್ಯವೂ ಶ್ರದ್ಧೆ, ಆಸಕ್ತಿಯಿಂದ ಧ್ಯಾನಾಭ್ಯಾಸ ಮಾಡಬೇಕು. ಅದರ ಜೊತೆಯಲ್ಲಿ 'ಸಸ್ಯಾಹಾರ', 'ಸ್ವಾಧ್ಯಾಯ', 'ಸಜ್ಜನ–ಸಾಂಗತ್ಯ, ಅಂದರೆ, ಸತ್ಸಂಗ' ಹಾಗೂ 'ಪಿರಮಿಡ್ ಶಕ್ತಿ ಬಳಕೆ' ಅವಶ್ಯಕ ಎಂದು ಆಧ್ಯಾತ್ಮಶಾಸ್ತ್ರ ತಿಳಿಸುತ್ತದೆ. ನಿರಂತರ, ಸಾಧನೆಯಿಂದ ಶಾರೀರಿಕ ಆರೋಗ್ಯ, ಮಾನಸಿಕ ಪ್ರಶಾಂತತೆ, ಬುದ್ಧಿ–ವಿಕಾಸ, ಆನಂದದ ಜೀವನ, ಆತ್ಮಜ್ಞಾನ ಮುಂತಾದವುಗಳು ಲಭಿಸುವುದು. ಹೊಸ ಯುಗದ ಆಧ್ಯಾತ್ಮ ಸಾಹಿತ್ಯವನ್ನು ಸ್ವಾಧ್ಯಾಯಕ್ಕಾಗಿ ಪ್ರಕಟಿಸುವ ಹಿನ್ನೆಲೆಯಲ್ಲಿ 'ಶ್ರೀರಾಮ ಪಬ್ಲಿಕೇಶನ್ಸ್' ಹೆಸರಿನ ಪುಟ್ಟ ಪ್ರಕಾಶನ ಸಂಸ್ಥೆಯನ್ನು ಆರಂಭಿಸಲಾಯಿತು. ಪತ್ರೀಜಿಯವರ ಮತ್ತು ತಟವರ್ತಿ ವೀರರಾಘವರಾವ್ ರವರ ಆದೇಶದ ಮೇರೆಗೆ ನಮ್ಮ ಪ್ರಕಾಶನದ ವತಿಯಿಂದ ಕೆಲವು ಆಧ್ಯಾತ್ಮಿಕ ಪುಸ್ತಕಗಳನ್ನು ಪ್ರಕಟಿಸಲಾರಂಭಿಸಿದೆವು. ಕೆಲವು ಪುಸ್ತಕಗಳನ್ನು ಕನ್ನಡಕ್ಕೆ ಅನುವಾದಿಸಿ ಮುದ್ರಿಸಲಾಯಿತು. ಕೆಲವು ತೆಲುಗು ಪುಸ್ತಕಗಳನ್ನು ಮರುಮುದ್ರಣ ಮಾಡಲಾಯಿತು. ತೆಲುಗಿನ ಉತ್ತಮ ಪುಸ್ತಕಗಳು ಕನ್ನಡದ ಆಧ್ಯಾತ್ಮ ಸಾಧಕರಿಗೂ ದೊರಕಲೆಂದು ನಾವು ಇಂತಹ ಪ್ರಯತ್ನ ಮಾಡಿದ್ದೇವೆ.

ತಮ್ಮ ವಿಶ್ವಾಸಿಗಳು **ಎಚ್.ಎನ್.ಶ್ರೀನಿವಾಸ**<br>
ಮತ್ತು **ಎಸ್.ಎನ್.ವಿಜಯಲಕ್ಷ್ಮಿ**<br>
ಸಂಸ್ಥಾಪಕರು, ಶ್ರೀರಾಮಧಾಮ ಧ್ಯಾನಕೇಂದ್ರ

# ವಿಷಯ ಸೂಚಿ

1. "ಗುರುಗೀತೆ!"

2. "ಶ್ರೀಮದ್ ಉತ್ತರ ಗೀತಾ ಸಂದೇಶ!"

3. "ಯೋಗಿ ವೇಮನ ಸಂದೇಶ!"

4. "ಶ್ರೀ ವೀರ ಬ್ರಹ್ಮೇಂದ್ರಸ್ವಾಮಿಯವರ ಸಂದೇಶ!"

5. "ನಿಜವಾದ ಆರಾಧನೆ!"

6. "ದುಃಖ ನಿವಾರಣೆಗೆ ಯೋಗಿಗಳ ಸಂದೇಶ!"

7. "ಭಗವಂತನಿಗೆ ಏನನ್ನು ಸಮರ್ಪಿಸಬೇಕು?"

8. "ಪೂಜೆಯಲ್ಲಿ ಅಂತರ್ ಶುದ್ಧಿ ಮುಖ್ಯ!"

9. "ಪೂಜೆಗಳು, ವ್ರತಗಳು, ಆರಾಧನೆಗಳು ಆಧ್ಯಾತ್ಮಿಕತೆ ಅಲ್ಲ!"

10. "ನವವಿಧ ಭಕ್ತರು!"

11. "ಭಗವಂತನಿಗೆ ಸಮರ್ಪಿಸಬೇಕಾದ ಪುಷ್ಪಗಳು!"

12. "ಪೂಜೆಯಲ್ಲಿ ಸೇವೆ ಮುಖ್ಯ!"

13. "ಭಗವಂತನಿಗೆ ಏಕೆ ನಮಸ್ಕರಿಸಬೇಕು?"

14. "ದೈವ ಭೀತಿಯಲ್ಲ–ಪಾಪಭೀತಿ ಇರಬೇಕು?"

15. "ದೇವರು ಯಾರು?"

16. "ಕೆಳಮಟ್ಟಕ್ಕೆ ಇಳಿದು ವರ್ತಿಸಬೇಡ!"

17. "ಭಗವಂತನು ವಿಗ್ರಹದಲ್ಲಿಯೇ ಇದ್ದಾನಾ?"

18. ಒರಿಜಿನಲ್ ಡೂಪ್ಲಿಕೇಟ್

19. "ಗುರುವೆಂದರೆ?"

20. "ಗುರುಗಳಲ್ಲಿ ವಿಧಗಳು!"

21. "ಶಿಷ್ಯನೆಂದರೆ?"

22. "ಗುರುಕೃಪೆ ಇದ್ದರೆ!"

23. "ಗುರುಗಳ ಕೋಪ"

24. "ಧ್ಯಾನಕ್ಕೆ ಅಡ್ಡಿಗಳು"

25. "ಧ್ಯಾನ ಸಾಧನೆಯ ಮೂಲಕ ಮಾನವರಲ್ಲಾಗುವ ಪರಿವರ್ತನೆ!"

26. "ಮಾಂಸಾಹಾರ" ಕೆಲವು ಮಹಾಪುರುಷರ ಅಭಿಪ್ರಾಯಗಳು

# ಗುರು ಗೀತೆ



ಪಾರ್ವತಿದೇವಿ ಸಂದೇಹಗಳಿಗೆ
ಪರಮೇಶ್ವರನ ಉತ್ತರ

**ಪಾರ್ವತಿ ಉವಾಚ :**

**ಶ್ಲೋಕ॥ ಓಂ ನಮೋದೇವ! ದೇವೇಶ! ಜಗದ್ಗುರೋ!**
**ತ್ವಾಂ ನಮ ಸ್ಕುರ್ವತೇ ಭಕ್ತ್ಯಾ ಸುರಾಸುರನರಾ ಸ್ಸದಾ ॥**
**ಶ್ಲೋಕ॥ ವಿಧಿ ವಿಷ್ಣು ಮಹೇನ್ದ್ರಾದ್ಯೈರ್ವನ್ದ್ಯಂ ಖಲು ಸದಾ ಭವಾನ್**
**ನಮಸ್ಕರೊಷಿ ಕಸ್ಮೈತ್ವಂ ನಮಸ್ಕಾರಾಶ್ರಯಃಕಿಲ ॥**
**ಶ್ಲೋಕ॥ ದೃಷ್ಟ್ವಾ ಏತತ್ ಕರ್ಮ ವಿಪುಲಂ ಆಶ್ಚರ್ಯಂ ಪ್ರತಿಭಾತಿಮೇ**
**ಕಿಮೇ ತನ್ನ ವಿಜಾನೇಹಂ ಕೃಪಯಾ ವದಮೇ ಪ್ರಭೋ॥**

**ಪಾರ್ವತಿ ನುಡಿದಳು**

ಓ ದೇವಾ। ದೇವೇಶಾ। ಪರಾತ್ಪರಾ। ಜಗದ್ಗುರೋ। ದೇವತೆಗಳು, ರಾಕ್ಷಸರು, ಮನುಜರು ನಿರಂತರವೂ ಭಕ್ತಿಯಿಂದ ನಿನಗೆ ನಮಸ್ಕರಿಸುತ್ತಿದ್ದಾರೆ.

ಮಹೇಶ್ವರಾ! ನೀನು ಬ್ರಹ್ಮ, ವಿಷ್ಣು, ಮಹೇಂದ್ರರಿಂದ ಸದಾ ಸ್ತುತಿಸಲ್ಪಡುತ್ತಿರುವೆ. ಸರ್ವ ದೇವತೆಗಳು ನಿನಗೆ ನಮಸ್ಕರಿಸುತ್ತಿದ್ದಾರೆ. ಅಂತಹ ನೀನು ಯಾರಿಗೆ ನಮಸ್ಕರಿಸುತ್ತಿರುವೆ?

ನೀವು ನಮಸ್ಕರಿಸುವುದನ್ನು ನೋಡಿ ನಾನು ಅತೀವ ಆಶ್ಚರ್ಯವನ್ನು ಹೊಂದುತ್ತಿದ್ದೇನೆ. ಈ ನಮಸ್ಕಾರಕ್ಕೆ ಕಾರಣವೇನೆಂದು ನಾನು ತಿಳಿಯದಾಗಿದ್ದೇನೆ. ಆದ್ದರಿಂದ ಓ ಪ್ರಭೋ! ದಯಮಾಡಿ ಈ ವಿಷಯವನ್ನು ನನಗೆ ತಿಳಿಸಿರಿ.

**ಪರಮೇಶ್ವರನು :**

**ಶ್ಲೋಕ॥ ಅಜೋಹ ಮಜರಂ ನಿತ್ಯಮನಾದಿಂ ನಿತ್ಯತಾಂ ಗತಂ**
**ಅರ್ಜವಿಕಾರಂ ಚಿದಾನಂದಂ ಪ್ರಣವಾಂತಂ ಸ್ವರಾಮ್ಯಹಂ**

ದೇವಿ, ನಾನು ಹುಟ್ಟು ಸಾವಿಲ್ಲದವನು. ಜನ್ಮಬಂಧಗಳಿಲ್ಲದವನು. ಮೃತ್ಯುಂಜಯನು. ಆದರೂ. ನಾನು ನನ್ನ ಹೃದಯದಲ್ಲಿರುವ ಪರಬ್ರಹ್ಮನನ್ನು ನಿತ್ಯವೂ ಆರಾಧಿಸುತ್ತೇನೆ.

ಪರಬ್ರಹ್ಮ ಕಲಾತೀತನು, ನಿತ್ಯಚೈತನ್ಯ, ಬ್ರಹ್ಮನಿಗೆ ಮುಪ್ಪು, ಲಯ ಇಲ್ಲ. ಆತನು ಅನಂತನು, ಶಾಶ್ವತನು, ಆದಿ ಅಂತ್ಯವಿಲ್ಲದವನು. ಬದಲಾವಣೆ ಆಗದವನು. ಪರಬ್ರಹ್ಮನೆಂದರೆ ವಿಶ್ವಚೈತನ್ಯವೇ! ಸಚ್ಚಿದಾನಂದವನ್ನು ಮೀರಿದ ಬ್ರಹ್ಮಾನಂದ.

ನನ್ನಂತೆ ಪ್ರತಿಯೋಗಿ, ಪ್ರತಿಸಾಧಕನು ತನ್ನ ಹೃದಯದಲ್ಲಿ, ಚಿದಾಕಾಶದಲ್ಲಿ ಅಂಗುಷ್ಟ ಮಾತ್ರನಾಗಿ ಬೆಳಗುವ ಪುರುಷನ, ಜೀವಿಯ. ಜ್ಯೋತಿಯನ್ನು ಆರಾಧಿಸಬೇಕು. ಮನುಷ್ಯನಾಗಿ ಜನ್ಮಿಸಿದ ಜೀವಿಗೆ ಪರಂಜ್ಯೋತಿ ದರ್ಶನವೇ ಪ್ರಥಮ ಆಶಯವಾಗಬೇಕು.

**ಶ್ಲೋಕ॥ ಕೇನ ಮಾರ್ಗೇಣ ಲೋ ಸ್ವಾಮಿನ್ ದೇಹಿ ಬ್ರಹ್ಮಮಯೊಭವೇತ್**
**ತತ್ ಕೃಪಾಂ ಕುರುಮೇ ಸ್ವಾಮಿನ್ ನಮಾಮಿ ಚರಣೇತವ.**

"ಸ್ವಾಮಿ! ಯಾವ ತಪಸ್ಸು ಮಾಡಿದರೂ, ಬ್ರಹ್ಮಾನುಭೂತಿ ಮುಖ್ಯ ಅಲ್ಲವೇ? ಅಂತಹ ಬ್ರಹ್ಮಾನುಭೂತಿಯನ್ನು ಹೊಂದಬಲ್ಲ ಮಾರ್ಗ ಯಾವುದು? ಆ ಮಾರ್ಗವನ್ನು ನನಗೆ ಉಪದೇಶಿಸಿರಿ. ನಾನು ನಿಮಗೆ ಸಂಪೂರ್ಣವಾಗಿ ಶರಣಾಗತಳಾಗುತ್ತಿದ್ದೇನೆ. ತಮ್ಮನ್ನು ನನ್ನ ಗುರುವಾಗಿ ಭಾವಿಸುತ್ತಿದ್ದೇನೆ. ನನ್ನನ್ನು ಅನುಗ್ರಹಿಸಿರಿ ಮಹಾತ್ಮ"

**ಶ್ಲೋಕ॥ ಅಪೂರ್ವಾ ನಂದತಂ ನಿತ್ಯಂ ಸ್ವಯಂ ಜ್ಯೋತಿರ್ನಿವಾಮಯಂ**
**ವಿರಜಸ್ಕಂ ಪರಂಶಂಭುಂ ಆನಂದಂ ಪರಮ ವ್ಯಯಂ**

ಪರಬ್ರಹ್ಮನನ್ನು ಗುರುತಿಸುವುದು ಸುಲಭವಲ್ಲ. ಊಹಿಸಿದಷ್ಟು ಸರಳವಲ್ಲ. ಪರಬ್ರಹ್ಮನಿಗೆ ರೂಪ, ಗುಣಗಳಿಲ್ಲವಾದ್ದರಿಂದ ಇಂತಹ ರೂಪ, ಇಂತಹ ಗುಣವೆಂದು ಹೇಳಲಾರೆವು. ಕೆಲವು ಸಂಕೇತಗಳಿವೆ. ಅವು ಅನುಭೂತಿಗೆ ತಿಳಿಯುತ್ತವೆ. ಅಪೂರ್ವವಾದ ಆನಂದವನ್ನುಂಟು ಮಾಡುವ ಗುಣ ಪರಬ್ರಹ್ಮನದು. ಆ ಆನಂದವನ್ನು ವ್ಯಕ್ತಪಡಿಸಲು ಸಾಧ್ಯವಾಗದು. ಆದ್ದರಿಂದ ಅದು ಅವ್ಯಕ್ತಾನಂದವು. ಅದನ್ನು ಯೋಗಿ ಮಾತ್ರವೇ ಗ್ರಹಿಸಬಲ್ಲ, ಅನುಭವಿಸಬಲ್ಲ ಮಧುರಾನಂದ. ಅದು ಆಗಿಂದಾಗ್ಗೆ ಹೊಸದಾಗಿ ಅನಿಸುತ್ತದೆ. ಆದ್ದರಿಂದ ನಿತ್ಯ ನೂತನ. ಅದು ದಿವ್ಯ ಪರಿಮಳಭರಿತವು. ಅದು ಆತ್ಮಜ್ಯೋತಿ. ಹೃದಯದಲ್ಲಿ ತಂಪಾಗಿ, ನೆಮ್ಮದಿಯಾಗಿ ಬೆಳಗುತ್ತದೆ, ಪ್ರಕಾಶಿಸುತ್ತದೆ.

ಲೋಕದಲ್ಲಿಯ ಯಾವ ಸುಖದೊಂದಿಗಾಗಲಿ, ಸಂತೋಷದೊಂದಿಗಾಗಲಿ, ಬ್ರಹ್ಮಾನಂದವನ್ನು ಹೋಲಿಸಲಾರೆವು.

**ಶ್ಲೋಕ॥ ಅಗೋಚರಂ. ತಥಾಗಮ್ಯಂ ನಾಮರೂಪಾದಿ ವರ್ಜಿತಂ**
**ನಿಶ್ಶಬ್ದಂ ತಂ ವಿಜಾ ನಿಯಾತ್ ಸ್ವಭಾವಂ ಬ್ರಹ್ಮ ಪಾರ್ವತಿ**

ಪಾರ್ವತಿ! ಪರಬ್ರಹ್ಮ ಅಗೋಚರನು. ಎಲ್ಲಿಯೂ ಕಾಣಿಸದು. ಕಣ್ಣಿಗೆ ಇಂಪು ಮಾಡದು. ಮೇಲಾಗಿ ಅಗಮ್ಯ. ಅಂದರೆ ಈ ಮಾರ್ಗದಲ್ಲಿ ಹುಡುಕಿದರೆ ಸಿಗುತ್ತದೆ ಎಂದು ಹೇಳಲಾರೆವು. ಯಾವ ಮಾರ್ಗವೂ ತಿಳಿಯದು. ಬ್ರಹ್ಮನನ್ನು ಸೇರಬೇಕೆಂದರೆ ಅಸಲು ಮಾರ್ಗವೇ ಇಲ್ಲದ ಮಾರ್ಗದಲ್ಲಿ ಪ್ರಯಾಣವನ್ನು ಮಾಡಬೇಕು.

ಆ ಬ್ರಹ್ಮಕ್ಕೆ ರೂಪವಿಲ್ಲ, ಹೆಸರಿಲ್ಲ. ಆತನನ್ನು ಅನ್ವೇಷಿಸುವವರಿಗೆ ದೇಹಭಾವ ಇರಬಾರದು. ತನ್ನ ಊರು, ಹೆಸರು, ಗುರುತು ಮರೆತು ಹೋಗಬೇಕು. ಇನ್ನೊಂದು ಕಣ್ಣಿನಿಂದ ನೋಡಬೇಕು. ಅದೇ ಜ್ಞಾನ ನೇತ್ರ. ಜ್ಞಾನಿಗೆ ಮಾತ್ರವೇ ದೊರಕುವುದು ಪರಬ್ರಹ್ಮತತ್ವ. ಮಾನವರಿಗೆ, ಸಮಸ್ತ ಜೀವಜಾಲಕ್ಕೆ ಸುಖಗಳನ್ನು ಪ್ರಸಾದಿಸುತ್ತಿರುವುದು, ಮಾನವ ಜೀವಕ್ಕೆ ಸಹಕರಿಸುತ್ತಿರುವುದು ಪರಬ್ರಹ್ಮವೇ. ಆತನ ವಾಸ ನಿಶ್ಶಬ್ಧ, ಪ್ರಶಾಂತತೆ.

**ಶ್ಲೋಕ॥ ಯಥಾ ನಿಜ ಸ್ವಭಾವೇನ ಕರ್ಪೂರ ಕುಸುಮಾದಿಷಂ**
**ಶೀತೋಷ್ಣಾದಿ ಸ್ವಭಾವಶ್ಚ ತಥಾ ಬ್ರಹ್ಮಚ ಶಾಶ್ವತಂ**

ಮಾನವರನ್ನು ರೂಪ, ಗುಣ, ಸ್ವಭಾವಗಳನ್ನು ಆಧರಿಸಿ ಗುರುತಿಸಬಹುದು. ರೂಪ ಪ್ರಪಂಚದಲ್ಲಿ ಚರಾಚರಗಳೆಲ್ಲವುಗಳಿಗೆ ರೂಪವಿರುತ್ತದೆ. ಕೆಲವಕ್ಕೆ ಸ್ವಭಾವ ಪ್ರಧಾನ. (ಕರ್ಪೂರಕ್ಕೆ ಬಿಸಿ ಮಾಡುವ ಗುಣವಿರುವಂತೆ, ಹೂಗಳಿಗೆ ತಂಪನ್ನುಂಟು ಮಾಡುವ ಗುಣವಿರುವಂತೆ) ಪರಬ್ರಹ್ಮನಿಗೆ ಅನಂತತ್ವ ಗುಣ ಸ್ವಭಾವವಾದ್ದರಿಂದ ಶಾಶ್ವತವಾದ ಪರಬ್ರಹ್ಮನನ್ನು ತಾತ್ವಿಕವಾಗಿಯೇ ಗುರುತಿಸಬಲ್ಲೆವು. ಇತರವುಗಳಾದ ರೂಪ, ನಾಮ, ಗುಣ ಸ್ವಭಾವಗಳೊಂದಿಗೆ ಮಾತ್ರ ಸಾಧ್ಯವಿಲ್ಲ.

**ಶ್ಲೋಕ॥ ಅಂಕಿ ಮತ್ರ ಬಹುನೋಕ್ತೇನ ಶಾಸ್ತ ಕೋಟಿ ಶತೇ ನಚ**
**ದುರ್ಲಭ ಚಿತ್ತ ವಿಶ್ರಾಂತಿಃ ಸದ್ಗುರೋಃ ಕರುಣಂವಿನಾ!**

ಶಾಸ್ತ್ರಗಳಿಗೇನು ನೂರು, ಸಾವಿರಗಳಿವೆ, ಎಷ್ಟು ಶಾಸ್ತ್ರಗಳನ್ನು ಓದಿದರೂ, ಎಷ್ಟು ಶಾಸ್ತ್ರ ಪಾಂಡಿತ್ಯವನ್ನು ಗಳಿಸಿದರೂ. ಆತ್ಮಕ್ಕೆ ಶಾಂತಿ ಲಭಿಸುವುದಿಲ್ಲ. ಎಷ್ಟು ಹುಡುಕಿದರೂ ಶಾಸ್ತ್ರಗಳಲ್ಲಿ ಸರಿಯಾದ ಮುಕ್ತಿ ಮಾರ್ಗವು ಕಾಣಿಸದು. ಮನಶ್ಶಾಂತಿ ಕೊರತೆಯಾಗಿ, ಚಿತ್ತಚಾಂಚಲ್ಯದಿಂದ ತಡಬಡಿಸುವವನಿಗೆ ಸದ್ಗುರು ಲಭಿಸಿದರೆ ಶಾಸ್ತ್ರ ಪಾಂಡಿತ್ಯದೊಂದಿಗೆ ಕೆಲಸವಿರುವುದಿಲ್ಲ. ಸದ್ಗುರುವಿನ ಹೊರತು ಪರವಿದ್ಯೆಯನ್ನು

ಬೋಧಿಸಬಲ್ಲವರು ಯಾರೂ ಇರುವುದಿಲ್ಲ. ಯಾವ ಶಾಸ್ತ್ರವೂ ಗುರುವು ಮಾಡುವ ಕಾರ್ಯವನ್ನು ಮಾಡದು.

***

ಪರಮೇಶ್ವರನು ಇನ್ನೂ ಏನು ಹೇಳಿದ್ದಾರೆಂದರೆ! ನನ್ನಲ್ಲಿಯೇ ಅಲ್ಲ, ಸಕಲ ದೇವತೆಗಳಲ್ಲಿ, ಮಾನವರಲ್ಲಿ, ಸಮಸ್ತ ಜೀವಿಗಳಲ್ಲಿ ಜ್ಯೋತಿಯಂತೆ ಬೆಳಗುವ! ಕಾಣಿಸದ, ವ್ಯಕ್ತಪಡಿಸಲಾಗದ, ಪರಬ್ರಹ್ಮನನ್ನು ನಾನು ನಿತ್ಯವೂ ಧ್ಯಾನಿಸುತ್ತಿದ್ದೇನೆ. ಅಂತಹ ಶ್ರೇಷ್ಠನಾದ ಪರಬ್ರಹ್ಮನನ್ನು ರೂಪದೊಂದಿಗೆ, ನಾಮದೊಂದಿಗೆ, ಗುಣದೊಂದಿಗೆ ತಿಳಿದುಕೊಳ್ಳಲಾರೆವು. ಆತನನ್ನು ಈ ಕಣ್ಣುಗಳಿಂದ ನೋಡಲಾರೆವು. ಆ ತತ್ವವನ್ನು ಜ್ಞಾನ ನೇತ್ರದಿಂದಲೇ ದರ್ಶಿಸಬಲ್ಲೆವು. ದೇಹ ಸ್ಮೃತಿ ಮರೆಯಬೇಕು. ಅದನ್ನೇ ನಾನು ಮಾಡುತ್ತಿದ್ದೇನೆ. ನೀನೂ ಕೂಡಾ ಆತನನ್ನೇ ಧ್ಯಾನಿಸು ಎಂದು ಹೇಳಿದನು.

ಮಾನವನಾಗಿ ಜನಿಸಿದ ಪ್ರತಿಯೊಬ್ಬರೂ ತನ್ನ ಹೃದಯದಲ್ಲಿ ಬೆಳಗುವ ಪುರುಷನನ್ನು ಅಂದರೆ ಆತ್ಮನನ್ನು ಆರಾಧಿಸಬೇಕು. ಅದೇ ಪ್ರತಿಯೊಬ್ಬರ ಪ್ರಥಮ ಆಶಯವಾಗಬೆಕು, ಅಂದರೆ ಪರಬ್ರಹ್ಮದರ್ಶನವೇ ಜೀವನ ಲಕ್ಷ್ಯವಾಗಬೇಕೆಂದು ಪರಮೇಶ್ವರನು ಬೋಧಿಸಿದನು.

ಪರಮೇಶ್ವರನ ಮೇಲಿನ ಸಂದೇಶವನ್ನಾಧರಿಸಿ ಆ ಬ್ರಹ್ಮಾನೂಭೂತಿ ಹೊಂದಬೇಕೆಂದರೆ ದೇಹ ಸ್ಮೃತಿ ಇರಬಾರದು. ತನ್ನ ಊರು, ಹೆಸರು, ಗುರುತು ಮರೆತು ಹೋಗಬೇಕು ಎಂದು ತಿಳಿದುಕೊಳ್ಳಬೇಕು. ಮತ್ತೇ ದೇಹ ಸ್ಮೃತಿ ಅಂದರೆ ದೇಹಭಾವವು ಮನಸ್ಸಿನಿಂದ ಉಂಟಾಗುತ್ತದೆಯಾದ್ದರಿಂದ ಮನಸ್ಸನ್ನು ಶೂನ್ಯ ಮಾಡಿಕೊಳ್ಳಬೇಕು. ಆ ಮಾರ್ಗವೇ 'ಶ್ವಾಸದ ಮೇಲೆ ಗಮನ'ವಿಟ್ಟು ಧ್ಯಾನ ಮಾಡುವುದು.

ಹಾಗೇ ವಿಶೇಷವಾದ ಧ್ಯಾನವನ್ನು ಮಾಡುವುದರ ಮೂಲಕ 'ಜ್ಞಾನನೇತ್ರ'ವನ್ನು ಸಂಪಾದಿಸಿಕೊಳ್ಳಬಹುದು. ಬ್ರಹ್ಮಾನುಭೂತಿಯನ್ನು ಹೊಂದಬಹುದು. ಆದ್ದರಿಂದ ಪರಮೇಶ್ವರನು ಬೋಧಿಸಿದ ಪ್ರಕಾರ ನಾಮ, ರೂಪಗಳನ್ನು ಬಿಟ್ಟು ಬ್ರಹ್ಮರ್ಷಿ ಪತ್ರೀಜಿಯವರು ಬೋಧಿಸಿದ 'ಶ್ವಾಸದ ಮೇಲೆ ಗಮನ ಧ್ಯಾನ'ದ ಮೂಲಕ ಜೀವನವನ್ನು ಧನ್ಯವನ್ನಾಗಿಸಿಕೊಳ್ಳಬೇಕು.



# ಶ್ರೀಮದ್ ಉತ್ತರ ಗೀತಾ ಸಂದೇಶ

**ಶ್ಲೋಕ ॥ ದೇಹೋ ದೇವಾಲಯಃ ಪ್ರೋಕ್ತೋ ಜೀವೋದೇವಸ್ಸನಾತನಃ**
**ತ್ಯ ಜೇದಜ್ಞಾನ ನಿರ್ಮಾಲ್ಯಂಸೋ ಹಂ ಭಾವೇನ ಪೂಜಿಯೇತ್ ॥**

ಈ ದೇಹವನ್ನು ದೇವಾಲಯವೆಂದು ಹೇಳಲಾಗಿದೆ. ದೇಹದಲ್ಲಿರುವ ಜೀವನೇ ಸನಾತನನಾದ ಸಾಕ್ಷಾತ್ ದೇವರೆಂದು ತಿಳಿದುಕೊಳ್ಳಬೇಕು. ಅಂತಹ ದೇವನನ್ನು ಆತ್ಮನಾತ್ಮ ವಿವೇಕದ ಮೂಲಕ ಅಜ್ಞಾನವೆನ್ನುವ ನಿರ್ಮಾಲ್ಯವನ್ನು ಬಿಟ್ಟು 'ಅಹಂ ಬ್ರಹ್ಮಾಸ್ಮಿ' ಎಂಬ ಭಾವದಿಂದ ಅಂದರೆ ತನ್ನಲ್ಲಿರುವ ಆತ್ಮ ಸ್ವರೂಪನಾದ ಪರಬ್ರಹ್ಮನನ್ನು ಪೂಜಿಸಬೇಕೆಂದು ತಿಳಿದುಕೊಳ್ಳಬೇಕು.

ಇದನ್ನು ಆಧರಿಸಿ ಯಾರಾಗಲಿ ಸರಿ ಆತ್ಮನನ್ನು ಆರಾಧಿಸಬೇಕೆಂದು ತಿಳಿಯುತ್ತದೆ.

**ಶ್ಲೋಕ ॥ ಬಹಿರ್ತ್ಸ್ಥಾಯ್ಯತಿಯಃ ಕಶ್ಚತ್ಯಕ್ತ್ವಾ ದೇಹಸ್ಥ ಮೀಶ್ವರಂ।**
**ಸ್ವ ಗೃಹೋ ಪಾಯಸಂ ತ್ಯಕ್ತ್ವಾ ಭಿಕ್ಷಾಮಟತಿ ದುರ್ಮತಿ ॥**

ತನ್ನ ದೇಹದಲ್ಲಿರುವ ಈಶ್ವರನನ್ನು ಬಿಟ್ಟು ಹೊರಗೆ ಎಲ್ಲಿಯೋ ಈಶ್ವರ ಇದ್ದಾನೆಂದು ಭ್ರಮಿಸಿ ತಿರುಗುವವನು, ತನ್ನ ಮನೆಯಲ್ಲಿರುವ ಕ್ಷೀರಾನ್ನವನ್ನು (ಪಾಯಸ) ಬಿಟ್ಟು, ಪಕ್ಕದ ಮನೆಯ ಭಿಕ್ಷೆಯ ಕೂಳಿಗಾಗಿ ತಿರುಗುವ ಮೂರ್ಖನ ಸಮಾನನೆಂದು ತಿಳಿದುಕೊಳ್ಳಬೇಕು.

**ಶ್ಲೋಕ ॥ "ತೀರ್ಥಾನಿ ತೋಯ ರೂ ಪಾಣಿದೇವಾನ್ ಪಾಷಾಣ ಮೃಣ್ಮಯಾನ್ ।**
**ಯೋಗಿನೋ ನಪ್ರಪದ್ಯಂತೇ ಆತ್ಮಧ್ಯಾನ ಪರಾತಣಾಃ॥"**

ಆತ್ಮಧ್ಯಾನದ ಬಗ್ಗೆ ಆಸಕ್ತಿಯುಳ್ಳ ಯೋಗಿಗಳು, ತೀರ್ಥಗಳನ್ನು, ಕಲ್ಲುಗಳಿಂದ, ಮಣ್ಣಿನಿಂದ, ಮಾಡಲ್ಪಟ್ಟ ವಿಗ್ರಹ ರೂಪ ದೈವಗಳನ್ನು ಪೂಜಿಸುವುದಿಲ್ಲ, ಆರಾಧಿಸುವುದಿಲ್ಲ.

**ಶ್ಲೋಕ ॥ ಶಿಲಾಮೃದ್ದಾರು ಪಾತ್ರೇಷು ದೈವಬುದ್ಧಿಃ ಪ್ರಕಲ್ಪಿತಃ**
**ಅಕಲ್ಪಿತ ಸ್ವಯಂ ಜ್ಯೋತಿ ರಾತ್ಮಾನೋ ದೇವತಾ ನಶಾ॥**

ಶಿಲೆಗಳಿಂದ, ಮಣ್ಣಿನಿಂದ, ಕಟ್ಟಿಗೆಯಿಂದ ಮಾಡಲ್ಪಟ್ಟ ವಿಗ್ರಹಗಳಲ್ಲಿ ದೈವವೆಂಬ ಬುದ್ಧಿಯುಂಟಾಗುವುದು ಕಲ್ಪಿತವಾದದ್ದು. ಏಕೆಂದರೆ ಸ್ವಯಂ ಜ್ಯೋತಿಸ್ವರೂಪನಾದ ಆತ್ಮ ಅಕಲ್ಪಿತನು. ಅಂದರೆ ಯಾರಿಂದಲೂ ಕಲ್ಪಿಸಲ್ಪಡದ ಪರಬ್ರಹ್ಮವೆಂದು ತಿಳಿದುಕೊಳ್ಳಬೇಕು. ಆದ್ದರಿಂದ ಕಲ್ಪಿಸಲ್ಪಟ್ಟ ದೇವತೆಗಳೊಡನೆ ನಮಗೇನು ಕೆಲಸ? ಕಲ್ಪಿತ ವಿಗ್ರಹಗಳನ್ನು ಆರಾಧಿಸದೆ ಸ್ವಯಂ ಜ್ಯೋತಿ ಸ್ವರೂಪನಾದ ಅಕಲ್ಪಿತ 'ಆತ್ಮ' ಆರಾಧನೆ ಮಾಡಿ ಮೋಕ್ಷವನ್ನು ಹೊಂದಲು ಪ್ರಯತ್ನಿಸಬೇಕು.

**ಶ್ಲೋಕ ॥ ಪೂಜಾಕೋಟಿ ಸಮಂ ಸ್ತೋತ್ರಂ ಸ್ತೋತ್ರಕೋಟಿ ಸಮೋ ಜಪಃ ।**
**ಜಪಕೋಟಿ ಸಮಂಧ್ಯಾನಂ ಧ್ಯಾನಕೋಟಿ ಸಮೋಲಯಃ ॥**

ಕೋಟಿ ಪೂಜೆಗಳಿಗೆ ಸಮ ಒಂದು ಸ್ತೋತ್ರವೆಂದು, ಕೋಟಿ ಸ್ತೋತ್ರಗಳಿಗೆ ಸಮ ಒಂದು ಜಪವೆಂದು, ಕೋಟಿ ಜಪಗಳಿಗೆ ಸಮಾನ ಒಂದು ಧ್ಯಾನವೆಂದು, ಕೋಟಿ ಧ್ಯಾನಗಳಿಗೆ ಒಂದು ಲಯವೆಂದು ತಿಳಿದುಕೊಳ್ಳಬೇಕು.

**"ಮನೋಲಯವೇ ಮೋಕ್ಷ"**

**ಶ್ಲೋಕ ॥ ನಾಸ್ತಿ ಧ್ಯಾನ ಸಮಂ ತೀರ್ಥಂ, ನಾಸ್ತಿ ಧ್ಯಾನ ಸಮಂ ತಪಂ।**
**ನಾಸ್ತಿ ಧ್ಯಾನ ಸಮಂ ಯಜ್ಞಂ, ತಸ್ಮಾತ್ ಧ್ಯಾನಂ ಸಮಾಚರೇತ್ ॥**

ತೀರ್ಥಗಳಾಗಲಿ, ಜಪತಪಗಳಾಗಲಿ, ಯಜ್ಞಯಾಗಗಳಾಗಲಿ, ಯಾವು ಧ್ಯಾನಕ್ಕೆ ಸಮವಲ್ಲವೆಂದು ತಿಳಿದುಕೊಳ್ಳಬೇಕು.

**ಶ್ಲೋಕ ॥ "ಅಗ್ನಿರ್ದೇವೋ ದ್ವಿಜಾತಿನಾಂ, ಮುನಿನಾಂ ಹೃದಿದೈವತಮ್ ।**
**ಪ್ರತಿಮಾ ಸ್ವಲ್ಪ ಬುದ್ಧಿನಾಂ ಸರ್ವತ್ರ ಸಮದರ್ಶಿನಾಮ್ ॥**

ಬ್ರಾಹ್ಮಣರಿಗೆ ಅಗ್ನಿಯೇ ದೇವರು, ಮುನಿಗಳಿಗೆ ಹೃದಯದಲ್ಲಿರುವ ಚೈತನ್ಯವೇ ದೇವರು. ಅಜ್ಞರು, ಅಲ್ಪಬುದ್ಧಿಯವರಾದ ಮಂದಬುದ್ಧಿಯುಳ್ಳ ಮಾನವರಿಗೆ ಶಿಲಾಪ್ರತಿಮೆಗಳೇ ದೇವರು. ಆದರೆ ಸಮದೃಷ್ಟಿಯುಳ್ಳವರಿಗೆ (ಬ್ರಹ್ಮಜ್ಞಾನಿಗಳಿಗೆ) ಸರ್ವ ಪ್ರಪಂಚವೆಲ್ಲವೂ ದೇವರೇ ಆಗುತ್ತಾನೆ.

**ಶ್ಲೋಕ ॥ ಹೃದಯ ಕಮಲ ಮಧ್ಯೆ ದೀಪಪದ್ವೇವಸಾರಂ**
**ಪ್ರಣವಮಯ ಮತರ್ಕ್ಯಂ ಯೋಗಿ ಹೃದ್ಯಾನಗಮ್ಯಂ**

**ಅಜಹರಿ ಶಿವ ಯೋಗಂ ಸರ್ವ ಭೂತಸ್ಥಮೇಕಂ**
**ಸಕೃದಪಿ ಮನಸಾ ಮಾಂ ಧ್ಯಾಯತೇ ಯಸ್ಸ ಮುಕ್ತಃ॥**

ಹೃದಯ ಕಮಲ ಮಧ್ಯದಲ್ಲಿ ದೀಪದಂತೆ ಪ್ರಕಾಶಿಸುವವನು, ವೇದಗಳೆಲ್ಲವುಗಳ ಸಾರಸ್ವರೂಪನು, ಪ್ರಣವ ಸ್ವರೂಪನು, ತರ್ಕಗಳಿಂದ ಹೊಂದಲಾಗದವನು, ಯೋಗಿಗಳ ಹೃದಯದಲ್ಲಿ ದರ್ಶನ ಕೊಡುವವನು, ಬ್ರಹ್ಮ, ವಿಷ್ಣು, ಶಿವ ಸ್ವರೂಪನು, ಏಕರೂಪನಾಗಿ, ಸರ್ವಭೂತಗಳಲ್ಲಿ ಅಂತರ್ಯಾಮಿಯಾಗಿ, ಆತ್ಮ ಸ್ವರೂಪನಾಗಿರುವವ ನನ್ನನ್ನು ಯಾರು ಸನ್ಮಾರ್ಗದಿಂದ, ಮನಸ್ಫೂರ್ತಿಯಾಗಿ ವಿಶ್ವಾಸಿ ಧ್ಯಾನಿಸುತ್ತಿರುವನೋ ಅಂತಹವನು ಮುಕ್ತನಾಗುತ್ತಿದ್ದಾನೆ,

**ಶ್ಲೋಕ ॥ ಸರ್ವತ್ರಾ ವಸ್ಥಿಥಂ ಶಾಂತಂ ನಪ್ರಪಕೇ ಜ್ಜನಾರ್ಧನಮ್ ।**
**ಜ್ಞಾನ ಚಕ್ಷುರ್ವಿಹೀನತ್ವಾ ದಂಧ ಸೂರ್ಯ ಮಿವೋದಿತಮ್॥"**

ಕುರುಡನು ಸೂರ್ಯೋದಯವನ್ನು ನೋಡಲಾಗದಂತೆ 'ಜ್ಞಾನನೇತ್ರ' ಇಲ್ಲದವನು, ಸರ್ವತ್ರಾ ವ್ಯಾಪಿಸಿರುವ ಶಾಂತ ಸ್ವರೂಪನಾದ ಜನಾರ್ಧನನ್ನು ನೋಡಲಾರನು.

**ಶ್ಲೋಕ ॥ "ಧ್ಯಾನಾಖ್ಯ ಯೋಗಾರಣಿ ದೀಪಿತೇನ ಪಂಚಾತ್ಮಕಂ ಧರ್ಮ ಗುಣೇಂ ಧನೇನ ।**
**ಯೋಗಾಗ್ನಿನಾ ವಾಯು ಸಮನ್ವಿತೇನ ದಗ್ಧಂ ತೇನದಗ್ಧಂ ಯುಗಾಂತೇ ಖಿಲಂ ಕರ್ಮ ಬಂಧನಮ್ ॥"**

"ಧ್ಯಾನಯೋಗ"ವೆಂಬ ವನದಲ್ಲಿ ಪ್ರಜ್ವಲಿಸುತ್ತಿರುವ ಅಗ್ನಿಯಲ್ಲಿ ಧರ್ಮ ಗುಣಗಳೆಂಬ ಕಟ್ಟಿಗೆಗಳಿಂದ ಮನಸ್ಸನ್ನು ಮಥಿಸುವುದರಿಂದ ಯೋಗಾಗ್ನಿ ಉರಿದು, ಜ್ಞಾನಾಗ್ನಿ ಉತ್ಪತ್ತಿಯಾಗುತ್ತದೆ. ಇದರಿಂದ 'ಯುಗಾಂತ್ಯ'ದಲ್ಲಿ ಅಂದರೆ ಕೊನೆಯ ದೆಸೆಯಲ್ಲಿ ಸಮಸ್ತ ಕರ್ಮ ಬಂಧಗಳೂ ದಹಿಸಲ್ಪಟ್ಟು ಬ್ರಹ್ಮಸಾಕ್ಷಾತ್ಕಾರ ಸಿದ್ಧಿ...ಅಂದರೆ ನಿರ್ವಾಣವು ಲಭಿಸುತ್ತದೆ.

**ಶ್ಲೋಕ ॥ ಬ್ರಹ್ಮಹತ್ಯಾ ಸಹಸ್ರಾಣಿ ಭ್ರುಣ ಹತ್ಯಾ ಶತಾವಿಚ।**
**ಏಕೋಹಿ ಧ್ಯಾನ ಯೋಗಶ್ಚರ ಹತ್ಯಗ್ನಿರಿವಿಂಧನಮ್ ॥"**

ಸಾವಿರದಷ್ಟು ಬ್ರಹ್ಮಹತ್ಯೆಗಳಿಂದ, ನೂರರಷ್ಟು ಭ್ರೂಣ ಹತ್ಯಗಳಿಂದುಂಟಾಗುವ ಪಾಪಗಳನ್ನು ಒಂದು ಧ್ಯಾನಯೋಗ ಮಾತ್ರವೇ, ಕಟ್ಟಿಗೆಗಳನ್ನು ದಹಿಸಿದಂತೆ ದಹಿಸಿಬಿಡುತ್ತದೆ.

**ಶ್ಲೋಕ ॥ ಅಶ್ವಮೇಧ ಸಹಸ್ರಾಣಿ ರಾಜಪೇಯ ಶತಾವಿಚ ।**
**ಏಕಸ್ಯ ಧ್ಯಾನ ಯೋಗಸ್ಯ ಕಳಾಂ ವಾರ್ಥತಿ ಷೋಡಸೋಮ್ ॥"**

ಸಾವಿರದಷ್ಟು ಅಶ್ವಮೇಧ ಯಾಗಗಳನ್ನು ಮಾಡಿದರೂ, ನೂರರಷ್ಟು ಜಪ

ಯಜ್ಞಗಳನ್ನು ಮಾಡಿದರೂ ಕೂಡಾ, ಷೋಡಶ ಕಳಾ ಪ್ರಪೂರ್ಣನಾದ ಆತ್ಮಯೋಗಿಯೊಬ್ಬನ ಒಂದು ಭಾಗಕ್ಕೆ ಸಮಾನವಾಗುವುದಿಲ್ಲ.

**ಶ್ಲೋಕ ॥ 'ನಿಮಿಷಂ ನಿಮಿಷಾರ್ಥಂ ವಾ ಜ್ಞಾನಿನೋಧ್ಯಾನ ಚಿಂತಯಾ।**
**ಕ್ರತು ಕೋಟಿ ಸಹಸ್ರಾಣಾಂ ಧ್ಯಾನಮೇಕಂ ವಿಶಿಷ್ಯತೇ॥"**

"ಆತ್ಮಜ್ಞಾನಿಗಳು ನಿಮಿಷವಾಗಲಿ, ಅರೆ ನಿಮಿಷವಾಗಲಿ ಧ್ಯಾನದ ಮೂಲಕ "ಬ್ರಹ್ಮನಿಷ್ಠೆ" ಹೊಂದುವುದರಿಂದ ಸಾವಿರಕೋಟಿ ಸಂಕಲ್ಪಗಳು ಮಾಡಿದ ಫಲ ಬರುತ್ತದೆಯಾದ್ದರಿಂದ ಧ್ಯಾನ ಒಂದೇ ವಿಶಿಷ್ಟವಾದುದೆಂದು ಹೇಳಲಾಗಿದೆ."

**ಶ್ಲೋಕ ॥ ಬ್ರಹ್ಮಬೇಧೇ ನಜಾನಾತಿ ಮುಕ್ತಿಂ ನೈವ ಪ್ರಪದ್ಯತೇ ।**
**ಸಮಾಮಂ ಸರ್ವ ಜಂತೂನಾಂ ಬ್ರಹ್ಮಸೂತ್ರೇಣ ಕಥ್ಯತೇ"**

ಜೀವ ಬ್ರಹ್ಮಗಳಲ್ಲಿ ಅಂದರೆ ಜೀವಾತ್ಮ, ಪರಮಾತ್ಮರಲ್ಲಿ ಬೇಧವಿಲ್ಲವೆಂದು ತಿಳಿಯದವನು ಎಂದಿಗೂ ಮುಕ್ತಿಯನ್ನು ಹೊಂದಲಾರನು. ಸಮಸ್ತ ಪ್ರಾಣಿಗಳಲ್ಲಿಯೂ ಪರಬ್ರಹ್ಮನ ಚೈತನ್ಯಶಕ್ತಿ ಸಮಾನವಾಗಿ ಇರುವುದರಿಂದ ತಿಳಿದುಕೊಂಡವನಿಗೆ ಮುಕ್ತಿ ಲಭಿಸುತ್ತದೆ.

**ಶ್ಲೋಕ ॥ ಭೂತವಸ್ತು ನ್ಯಶೋಚಿತ್ವೇ ಸಿದ್ಧೇ ಚಾಗಾಮಿ ವಸ್ತುನಿ ।**
**ಸಿದ್ದೇಚ ನಿರಪೇಕ್ಷ ತ್ವೇ ಪುನರ್ಜನ್ಮ ನವಿದ್ಯತೇ॥"**

"ಯೋಗಿಯಾದವನಿಗೆ ಕಳೆದುಹೋದ ವಸ್ತುವಿನ ಕುರಿತಾಗಲಿ, ಮುಂದೆ ಬರುವ ವಸ್ತುವಿನ ಕುರಿತಾಗಲಿ ಆಸಕ್ತಿ ಇರುವುದಿಲ್ಲ. ಲಭಿಸಿದ ವಸ್ತುವಿನ ಬಗ್ಗೆಯು ಕೂಡಾ ನಿರಾಸಕ್ತನಾಗಿರುತ್ತಾನೆ. ಅಂತಹವನಿಗೆ ಇನ್ನು ಪುನರ್ಜನ್ಮ ಎಂಬುದು ಇರುವುದಿಲ್ಲ. ಅಂದರೆ ಅಂತಹವನಿಗೆ ಮುಕ್ತಿ ಲಭಿಸುತ್ತದೆ ಎಂದು ತಿಳಿದುಕೊಳ್ಳಬೇಕು". ಆತ್ಮಧ್ಯಾನಿಗಳು ವಿಗ್ರಹರಾಧನೆ ಮಾಡುವುದಿಲ್ಲ.

ಭಗವಂತನನ್ನು ಕೋರಿಕೊಳ್ಳುವವರಿಗೆ ಪ್ರಾರಂಭದ ದೆಶೆಯಲ್ಲಿ ಮನಸ್ಸು ಸ್ಥಿರವಾಗಿರುವುದಿಲ್ಲವಾದ್ದರಿಂದ ಮಣ್ಣಿನಿಂದ, ಕಲ್ಲಿನಿಂದ, ಕಟ್ಟಿಗೆಗಳಿಂದ ಮಾಡಿದ ವಿಗ್ರಹ ರೂಪದ ದೈವಗಳನ್ನು ಕಲ್ಪಿಸಿದರು. ಪುರಾಣಗಳಲ್ಲಿ ವಿಗ್ರಹಾರಾಧನೆ ಕುರಿತು "ಅಧಮಾ ಪ್ರತಿಮಾ ಪೂಜಾ" ಎಂದು ಹೇಳಲ್ಪಟ್ಟಿದೆ.

ಚಾಣಿಕ್ಯನು ತನ್ನ 'ನೀತಿಸಾರ'ದಲ್ಲಿ ಪ್ರತಿಮಾ ಅಲ್ಪಬುದ್ಧಿನಾಂ ಅಂದರೆ 'ಅಲ್ಪಬುದ್ಧಿಯುವರಿಗೇ ಪ್ರತಿಮಾ ಪೂಜೆಗಳೆಂದು, ಮೂರ್ತಿ ಪೂಜೆ ಮೂರ್ಖರಿಗಾಗಿಯೇ' ಎಂದು ತಿಳಿಸಿದ್ದಾರೆ. ಆದ್ದರಿಂದ ಆತ್ಮಜ್ಞಾನ ಪಾರಾಯಣಯರು

ಅಜ್ಞಾನರಂತೆ ತೀರ್ಥಗಳನ್ನು, ಮಾನವ ಕಲ್ಪಿತಗಳು, ಜಡಸ್ವರೂಪಗಳಾದ ವಿಗ್ರಹಗಳನ್ನು ಪೂಜಿಸರು.

ಹಾಗೆ ಯಾವ ವಿಧವಾಗಿ ಆಲೋಚಿಸಿದರೂ ತತ್ವ ಚಿಂತನೆ ಉತ್ತಮವೆಂದು, ಶಾಸ್ತ್ರ ಚಿಂತನೆ ಮಧ್ಯಮವೆಂದು, ಗುಡಿಗಳು, ಗೋಪುರಗಳು, ತೀರ್ಥ ಯಾತ್ರೆಗಳ ಚಿಂತನೆ ಅಧಮವೆಂದು, ಸಂಸಾರ ಚಿಂತನೆ ಅಧಮಾಧಮವೆಂದು ತಿಳಿಯುತ್ತದೆ.

# ಯೋಗಿ ವೇಮನರ ಸಂದೇಶ



**"ಬ್ರಹ್ಮಮನಂಗವೇರೆ ಪರದೇಶಮುನಲೇದು ।**
**ಬ್ರಹ್ಮಮನಗ ದಾನೇ ಬಟ್ಟ ಬಯಲು ।**
**ತನ್ನು ದಾನೆರಿಗಿನ ದಾನೇಪೋ ಬ್ರಹ್ಮಂಬು ।**
**ವಿಶ್ವದಾಭಿರಾಮ ವಿನುರವೇಮ ।"**

ಭಗವಂತನೆಂದರೆ ಬೇರೆ ಇತರ ಕ್ಷೇತ್ರಗಳಲ್ಲಿ ಇಲ್ಲ. ಮಾನವರು ಭಗವಂತನು ಎಲ್ಲಿಯೋ ಇದ್ದಾನೆಂದು ಹುಡುಕುತ್ತಿದ್ದಾರೆ. ಆದರೆ ತಾನೇ ಭಗವಂತನೆಂದು ತಿಳಿದುಕೊಳ್ಳಲಾರದೆ ಹೊಗುತ್ತಿದ್ದಾರೆ. ಅಸಲು ತಾನು ಯಾರೆಂದು ತಾನು ತಿಳಿದುಕೊಂಡರೆ ತಾನೆ ಭಗವಂತನೆಂದು ತಿಳಿಯುತ್ತದೆ ಎಂದು ವೇಮನ ಯೋಗೀಂದ್ರರು ಹೇಳುತ್ತಿದ್ದಾರೆ.

"ಅಹಂ ಬ್ರಹ್ಮಾಸ್ಮಿ" ಅಂದರೆ ನಾನು ಭಗವಂತನಾಗಿ ಇದ್ದೇನೆ ಎನ್ನುವ ವೇದವಾಕ್ಯವನ್ನೇ ಯೋಗಿವೇಮನ ತಿಳಿಸುತ್ತಿದ್ದಾರೆ.

**"ಶಿಲಲನು ಚೂಸಿ ಶಿವುಡನಿ ಭಾವಿಂತ್ರು ।**
**ಶಿಲಲು ಶಿಲಲೆ ಕಾನಿ ಶಿವುಡು ಕಾದು॥**
**ತನದುಲೋನಿ ಶಿವುನಿ ತಾನೇಲ ತೆಲಿಯಡೋ?!**
**ವಿಶ್ವದಾಭಿರಾಮ ವಿನರವೇಮ।"**

ಮಾನವರು ಕಲ್ಲಿನ ವಿಗ್ರಹಗಳನ್ನು ನೋಡಿ ಭಗವಂತನೆಂದುಕೊಳ್ಳುತ್ತಿದ್ದಾರೆ. ಕಲ್ಲು ಕಲ್ಲೇ ಆಗುತ್ತದೆಯಾಗಲಿ ಭಗವಂತನು ಹೇಗಾಗುತ್ತಾನೆ? ಅಸಲು ತನ್ನಲ್ಲಿರುವ ಭಗವಂತನನ್ನು ಮಾನವನು ಏಕೆ ತಿಳಿದುಕೊಳ್ಳಲಾರದೆ ಹೋಗುತ್ತಿದ್ದಾನೆ? ಎಂದು ವೇಮನ ಯೋಗೀಂದ್ರರು ಹೇಳುತ್ತಿದ್ದಾರೆ.

**"ಸಂಧ್ಯ ವಾರ್ವಗನೇಮಿ? ಜಪಮು ಚೇಯಗನೇಮಿ?**
**ವೇದ ಶಾಸ್ತ್ರಮುಲನು ತೆಲಿಯನೇಮಿ?**
**ಪರಮುಗನನಿ ವಾಡು ಬಾಪಡು ಕಾಡುರಾ**
**ವಿಶ್ವದಾಭಿರಾಮ ವಿನುರವೇಮ।"**

ಸಂಧ್ಯಾ ವಂದನೆಗಳು ಮಾಡಿದರೆ ಪ್ರಯೋಜನವೇನು? ಜಪಗಳನ್ನು ಮಾಡಿದರೆ ಪ್ರಯೋಜನವೇನು? ವೇದಶಾಸ್ತ್ರಗಳನ್ನೆಲ್ಲ ಓದಿದರೆ ಮಾತ್ರಕ್ಕೆ ಪ್ರಯೋಜನವೇನು? ಆ ಭಗವಂತನನ್ನು ತಿಳಿದುಕೊಳ್ಳಲಾರದವನು ಬ್ರಾಹ್ಮಣನಲ್ಲವೆಂದು ವೇಮನರು ತಿಳಿಸುತ್ತಿದ್ದಾರೆ.

**"ಕಲ್ಲಗುರುಡು ಕಟ್ಟು ಕರ್ಮ ಚಯಂಬುಲು।**
**ಮಧ್ಯ ಗುರಡು ಕಟ್ಟು ಮಂತ್ರಚಯಮು ॥**
**ವುತ್ತಮುಂಡು ಗಟ್ಟು ಯೊಗ ಸಾಮ್ರಾಜ್ಯಂಬು ।**
**ವಿಶ್ವದಾಭಿರಾಮ ವಿನರ ವೇಮ॥"**

ಮೋಸಗಾರನಾದ ಗುರುವು ವ್ಯರ್ಥವಾದ ಕರ್ಮಕಾಂಡಗಳನ್ನು ಮಾಡಿಸುತ್ತಾನೆ. ಸ್ವಲ್ಪ ಅರಿವು ಇರುವ ಗುರುವು ಮಂತ್ರ ಜಪಗಳನ್ನು ಮಾಡಿಸುತ್ತಾನೆ. ಆದರೆ ಉತ್ತಮನಾದ ಬೊಧಗುರುವು 'ಧ್ಯಾನ'ದ ಮೂಲಕ ಮಾನವನ ಲಕ್ಷ್ಯವಾದ ಮೋಕ್ಷವನ್ನು ಹೊಂದುವ ಅವಕಾಶವನ್ನು ಕಲ್ಪಿಸುತ್ತಾನೆ.

**"ಪೂಜ ಸೇಯ ಸೇಯ ಪುಜಾರಿ ತಾನಾಯೇ**
**ಪೂಜ್ಯ ವಸ್ತುವೆನ್ನ ಭುವಿನಿ ತಾನೇ ।**
**ಯಾಡ ಪೂಜ ಸೇಯು? ನೆಲ್ಲದಿಕ್ಕುಲತಾನೇ।**
**ತಾನೇ ನೇನು, ನೇನು ತಾನೇ ವೇಮ।"**

ಪೂಜೆ ಮಾಡಿದರೆ ಪೂಜಾರಿ ಆಗುತ್ತೇವೆ. ಅದಕ್ಕೂ ಮೀರಿ ಪ್ರಯೋಜನವಿರದು. ಭೂಮಿಯ ಮೇಲೆ ಪೂಜಿಸಲು ತಕ್ಕ ವಸ್ತುವು ತಾನೇ ಎಂದು ವೇಮನ ಯೋಗೀಂದ್ರರು ತಿಳಿಸುತ್ತಿದ್ದಾರೆ. ಎಲ್ಲಿ ಪೂಜೆ ಮಾಡುತ್ತೀಯಾ? ಎಲ್ಲಾ ದಿಕ್ಕುಗಳು ನಾವೇ ಅಲ್ಲವೇ? ಆ ಭಗವಂತನೇ ನಾವು, ನಾವೇ ಆ ಭಗವಂತನು ಎಂದು ವೇಮನು ಹೇಳುತ್ತಿದ್ದಾರೆ.

ಅಂದರೆ ನಾನೇ ಎಲ್ಲಾ, ಎಲ್ಲಾ ನಾನೇ ಎಂದು ಹೇಳುತ್ತಿದ್ದಾರೆ. ಆದ್ದರಿಂದ ನಮ್ಮನ್ನು ನಾವೇ ಪೂಜಿಸಿಕೊಳ್ಳಬೇಕು. ಅದನ್ನೆ ಭಕ್ತಿ ಎನ್ನುತ್ತಾರೆ. ಇದೇ ಉಪನಿಷತ್ತುಗಳಲ್ಲಿ ಕೂಡಾ ಹೇಳಲ್ಪಟ್ಟಿದೆ.

**"ಸ್ವಸ್ವರೂಪಾನುಸಂಧಾನಂ ಭಕ್ತಿ ರೀತ್ಯಭಿಧಿಯತೇ"**

ಅಂದರೆ ಧ್ಯಾನವನ್ನು ಮಾಡುವುದೇ ಭಕ್ತಿ ಎಂದು ತಿಳಿದುಕೊಳ್ಳಬೇಕು. ಇದೇ ವೇಮನರ ಸಂದೇಶವು ಕೂಡಾ!

# ಶ್ರೀ ವೀರ ಬ್ರಹ್ಮೇಂದ್ರ ಸ್ವಾಮಿಯವರ ಸಂದೇಶ!



**"ಮುಕ್ಕು ಮೊಗಮು ಚೆಕ್ಕಿ ಮೂರ್ತಿ ಪೂಜಲು ಚೇಯ**
**ತೊಲುತ ಚೇಯು ದೋಸಗು ತೊಗಲಬೋದು**
**ಮನಸು ನಿಲುಪ ಜನನ ಮರಣಾಲು ತೊಲಗುನು**
**ಕಾಳಿಕಾಂಬ! ಹಂಸ! ಕಾಳಿಕಾಂಬ!"**

ಕಲ್ಲುಗಳಿಗೆ, ಕಟ್ಟಿಗೆಗಳಿಗೆ ಮುಖ, ಮೂಗು ಕೆತ್ತಿ, ಶಿಲ್ಪವಾಗಿ ತಯಾರು ಮಾಡಿ ಅದಕ್ಕೆ ಬೊಟ್ಟುಗಳಿಟ್ಟು, ಬಟ್ಟೆಗಳನ್ನು ಸುತ್ತಿ, ಹೂವುಗಳನ್ನಿಟ್ಟು, ಊದಿನ ಕಡ್ಡಿಗಳನ್ನು ಬೆಳಗಿಸಿ, ಹಾರತಿ ಕೊಟ್ಟು, ಎಷ್ಟು ಪೂಜೆ ಮಾಡಿದರೂ ಮೊದಲು ಮಾಡಿದ ಪಾಪಗಳು ತೊಲಗುವುದಿಲ್ಲ ಎನ್ನುತ್ತಾರೆ. ವೀರಬ್ರಹ್ಮೇಂದ್ರ ಸ್ವಾಮಿಯವರು.

ದುಃಖ ಭೂಯಿಷ್ಟವಾದ ಜನನ, ಮರಣ ಎಂಬುವು, ಮನಸ್ಸನ್ನು ನಿಲ್ಲಿಸಿ ಧ್ಯಾನ ಮಾಡಿದರೇನೆ ತೊಲಗುತ್ತವೆಯೇ ಹೊರತು, ಪೂಜೆಗಳಿಂದ ಎಷ್ಟು ಮಾತ್ರವು ಲಾಭವಿಲ್ಲವೆಂದು ವೀರಬ್ರಹ್ಮೇಂದ್ರ ಸ್ವಾಮಿಯವರು ತಿಳಿಸುತ್ತಿದ್ದಾರೆ.

**ಸಾಟಿ ಮಾನವುನಕು ಸಾಯಮ್ಮ ಪಡಬೋಕ**
**ನಲ್ಲರಾಳ್ಳ ತೆಚ್ಚಿ ಗುಳ್ಳ ಕಟ್ಟಿ**
**ಮ್ರೊಕ್ಕುಲಿಡಿನ ಬ್ರತುಕು ಚಕ್ಕಪಡಂ ಬೋದು**
**ಕಾಳಿಕಾಂಬ! ಹಂಸ! ಕಾಳಿಕಾಂಬ!"**

ನಾವೇ ಗುಡಿಗಳನ್ನು ಕಟ್ಟಿ, ಕಲ್ಲು ತಂದು ಅದರಲ್ಲಿಟ್ಟು, ನಮ್ಮ ಕಷ್ಟಗಳನ್ನು ತೀರಿಸೆಂದು, ಕೋರಿಕೆಗಳನ್ನು ನೆರವೇರಿಸೆಂದು ಹರಕೆ ಹೊತ್ತರೆ ನಮ್ಮ ಬದುಕೇನಾದರೂ ಸರಿಹೋಗುತ್ತದೆಯೇ?

ನಮ್ಮ ಜೀವನವು ಚೆನ್ನಾಗಿರಬೇಕೆಂದರೆ ಸಹ ಮಾನವರಿಗೆ ಸಹಾಯ ಮಾಡಬೇಕು, ಅಂದರೆ ಒಳ್ಳೆಯದನ್ನು ಮಾಡಬೇಕೆಂದು ಬೋಧಿಸುತ್ತಿದ್ದಾರೆ ವೀರ ಬ್ರಹ್ಮೇಂದ್ರ ಸ್ವಾಮಿಯವರು.

**"ರೂಪ ರಹಿತುನಕು ರೂಪಮ್ಮು ಗಲ್ಪಿಂಚಿ**
**ಕರ್ಮಕಾಂಡ ಪೆಂಚಿ ಕಲುಷಮತುಲು**
**ಧರ್ಮ ಮಾರ್ಗಮುಲನು ಧ್ವಂಸಮ್ಮು ಚೇಸಿರಿ**
**ಕಾಳಿಕಾಂಬ! ಹಂಸ! ಕಾಳಿಕಾಂಬ!"**

ರೂಪವಿಲ್ಲದ ಭಗವಂತನಿಗೆ ರೂಪವನ್ನು ತಯಾರು ಮಾಡಿ, ಕರ್ಮಕಾಂಡ ಅಂದರೆ ನಿದ್ದೆ ಮಾಡದ ಭಗವಂತನಿಗೆ ಶಯನ ಸೇವೆಗಳನ್ನು ಮಾಡುತ್ತಾ, ಸುಪ್ರಭಾತವನ್ನು ಹಾಡಿ ನಿದ್ದೆಯಿಂದ ಎಬ್ಬಿಸುತ್ತಾ, ಮಲಿನ ಅಂಟದ ಭಗವಂತನಿಗೆ ಅಭಿಷೇಕಗಳನ್ನು ಮಾಡುತ್ತಾ, ಹುಟ್ಟು ಸಾವುಗಳು, ಹಸಿವು ಇಲ್ಲದ ಭಗವಂತನಿಗೆ ನೈವೇದ್ಯಗಳನ್ನು ಮಾಡುತ್ತಾ, ಕಲುಷಿತ ಮನಸ್ಕರಾದ ಸ್ವಾರ್ಥಿಗಳು ಭಗವಂತನನ್ನು ದರ್ಶಿಸುವ ಧರ್ಮವಾದ 'ಧ್ಯಾನ' ಮಾರ್ಗವನ್ನು ಧ್ವಂಸ ಮಾಡಿದರೆಂದು, ವೀರಬ್ರಹ್ಮೇಂದ್ರ ಸ್ವಾಮಿ ತಿಳಿಸುತ್ತಿದ್ದಾರೆ.

**"ಸ್ನಾನಮಂದು ಲೇದು, ಪಾನಮಂದು ಲೇದು**
**ಮಂತ್ರ ತಂತ್ರ ಮುಲನು ಮಹಿಮಲೇದು।**
**ಗುಣಮುಕುದಿರೆ ನೇನಿ ಘನ ಯೋಗಿತನೌನು**
**ಕಾಳಿಕಾಂಬ! ಹಂಸ! ಕಾಳಿಕಾಂಬ!"**

ಯಾವ ಗೋದಾವರಿ ಪುಷ್ಕರಗಳು, ಕೃಷ್ಣಾ ಪುಷ್ಕರಗಳು, ಗಂಗ ಪುಷ್ಕರಗಳು. ಎಲ್ಲಿ ಮುಳುಗಿ ಸ್ನಾನ ಮಾಡಿದರೂ ಲಾಭವಿಲ್ಲ. ಗಂಗಾ ತೀರ್ಥಾವನ್ನಾಗಲಿ, ಗುಡಿಗಳಲ್ಲಿಯ ತೀರ್ಥಗಳನ್ನಾಗಲಿ ಕುಡಿದರೂ ಲಾಭವಿಲ್ಲ.

ಹಾಗೆಯೇ ಮನಸ್ಸಿನಿಂದ ಜಪಿಸುವ ಮಂತ್ರಗಳಿಂದಾಗಲಿ, ದೇಹದಿಂದ ಮಾಡುವ ಪ್ರದಕ್ಷಿಣೆಗಳಾಗಲಿ, ಉರುಳು ಸೇವೆಗಳಾಗಲಿ, ಸಾಷ್ಟಾಂಗ ನಮಸ್ಕಾರಗಳಾಗಲಿ ಗುಂಜಿಗಳು, ಕಪಾಳಕ್ಕೆ ಹೊಡೆದುಕೊಳ್ಳುವುದು, ಇನ್ನೂ ವಿವಿಧ ರೀತಿಯಲ್ಲಿ ಶರೀರವನ್ನು ಹಿಂಸಿಸಿಕೊಳ್ಳುವುದರಲ್ಲಿ ಮಹಿಮೆ ಇಲ್ಲ. ಅಂದರೆ ದೇಹದಿಂದ ಏನು ಮಾಡಿದರೂ, ಮನಸ್ಸಿನಿಂದ ಏನು ಮಾಡಿದರೂ ದುಃಖದಿಂದ ಮುಕ್ತಿಯು ಲಭಿಸುವುದಿಲ್ಲ. ಕಾರಣ ಅವುಗಳಲ್ಲಿ ಮಹಿಮೆ ಇಲ್ಲವೆಂದು ವೀರ ಬ್ರಹ್ಮೇಂದ್ರ ಸ್ವಾಮಿಯವರು ತಿಳಿಸುತ್ತಿದ್ದಾರೆ.

ಮಂತ್ರವೆಂದರೆ "ಮನನಾತ್ ತ್ರಾಯತೇ ಇತಿ ಮಂತ್ರ" ಎಂದಿದ್ದಾರೆ. ಹಾಗೆ ತಂತ್ರವೆಂದರೆ "ತನುನಾತ್ ತ್ರಾಯತೇ ಇತಿ ತಂತ್ರಃ" ಎಂದಿದ್ದಾರೆ. ಅಂದರೆ ಮನಸ್ಸಿನಿಂದ ಮಾಡುವುದು ಮಂತ್ರ. ದೇಹದಿಂದ ಮಾಡುವುದು ತಂತ್ರವೆಂದು ಅರ್ಥ.

ಗುಣವು ಸರಿಹೋಗಿದೆ ಅಂದರೆ ಕೆಲಸಕ್ಕೆ ಬಾರದ ತಮೋಗುಣ ಹೋಗಬೇಕು. ಕೆಲಸಕ್ಕೆ ಬಾರದ ರಜೊಗುಣ ಹೋಗಬೇಕು. ಹಾಗೆಯೇ ಸಾತ್ವಿಕ ಗುಣವೂ ಕೂಡಾ ಹೋಗಬೇಕು. ನಿರ್ಗುಣನಾಗಬೇಕು. ಅವನೇ ಘನವಾದ ಯೋಗಿ. ಅವನೇ ದುಃಖವನ್ನು ಶಾಶ್ವತವಾಗಿ ನಿವಾರಿಸಿಕೊಂಡವನು, ಮೋಕ್ಷವನ್ನು ಹೊಂದಿದವನು ಎಂದು ವೀರ ಬ್ರಹ್ಮೇಂದ್ರ ಸ್ವಾಮಿ ಹೇಳಿದ್ದಾರೆ.

**ತೀರ್ಥಯಾತ್ರಲಂದು ದೇವುಡೊಕ್ಕಡೇ ಗದಾ**
**ಮಂಚಿ ತೀರ್ಥಮು ಮನ ಪಂಚನುಂಡೆ**
**ದಿವ್ಯ ತೀರ್ಥಮಿದಿಗೋ ದೇಹಮಂದುನ್ನದಿ**
**ಕಾಳಿಕಾಂಬ! ಹಂಸ! ಕಾಳಿಕಾಂಬ!"**

ಭದ್ರಾಚಲದಲ್ಲಿ ಒಬ್ಬ ದೇವರು, ತಿರುಪತಿಯಲ್ಲಿ ಒಬ್ಬ ದೇವರು, ಕಾಶಿಯಲ್ಲಿ ಒಬ್ಬ ದೇವರು ಇಲ್ಲ. ಸಕಲ ತೀರ್ಥ ಯಾತ್ರೆಗಳಲ್ಲಿಯೂ ಇರುವುದು ಒಂದೇ ದೈವತ್ವ. ಅಂತಹ ಒಳ್ಳೆಯ ತೀರ್ಥ ನಮ್ಮ ಬಳಿ ಇದೆ. ಆ ದಿವ್ಯ ತೀರ್ಥ ನಮ್ಮ ದೇಹದಲ್ಲಿ ಇದೆ. ಅಂದರೆ ನಮ್ಮ ದೇಹದಲ್ಲಿಯೇ ನಾವು ಹುಡುಕಿಕೊಳ್ಳಬೇಕು. ಅಂದರೆ ಧ್ಯಾನ ಮಾಡಬೇಕೆಂದು ವೀರ ಬ್ರಹ್ಮೇಂದ್ರ ಸ್ವಾಮಿಯವರು ತಿಳಿಸುತ್ತಿದ್ದಾರೆ.

**ವೆದಕಿ ವೆದಕಿ ವೆದಕಿ ವೇಸಾರಿ**
**ಅಚಟ ನಿಚಟ ಲೇಡಟಂಚು ನೆಂಚಿ**
**ತರಚಿ ತರಚಿ ತಾನು ತನ ಲೋನ ಗನುಗೊನೆ**
**ಕಾಳಿಕಾಂಬ! ಹಂಸ! ಕಾಳಿಕಾಂಬ!"**

ಭಗವಂತನಿಗಾಗಿ ಎಲ್ಲೆಲ್ಲಿಯೋ ತಿರುಗುತ್ತಿದ್ದಾನೆ ಮಾನವನು. ಎಷ್ಟು ದೇವಾಲಯಗಳಿಗೆ, ಎಷ್ಟು ತೀರ್ಥಗಳಿಗೆ, ಹಾಗೇ ಹುಡುಕಿ ಹುಡುಕಿ ಸೋತು ಹೋಗುತ್ತಿದ್ದಾನೆ. ಕೊನೆಗೆ ಅಲ್ಲಿ ಇಲ್ಲಿ ಎಲ್ಲಿಯೂ ಇಲ್ಲವೆಂದು, ತಿರುಗಿ ತಿರುಗಿ ಕೊನೆಗೆ 'ಧ್ಯಾನ' ಮಾಡಿ ತನ್ನಲ್ಲಿರುವನೆಂದು ತಿಳಿದುಕೊಳ್ಳುತ್ತಿದ್ದಾನೆ ಎಂದು ವೀರ ಬ್ರಹ್ಮೇಂದ್ರಸ್ವಾಮಿ ತಿಳಿಯಪಡಿಸುತ್ತಾರೆ.

**ದಿವ್ಯ ಮಂಗಳಮ್ಮು ದೇವತಾ ಬಿಂಬಮ್ಮು**
**ಉಲ್ಲ ಮಂದುನುನ್ನ ಉಪಮು ಗನಕ**
**ಯಾತ್ರಲೆಲ್ಲ ದಿರಿಗಿ ಯಾತನ ಪಡನೇಲಾ?**
**ಕಾಳಿಕಾಂಬ! ಹಂಸ! ಕಾಳಿಕಾಂಬ!**

ದಿವ್ಯವಾದ ದೇವತಾಬಿಂಬವೆಂದರೆ ಆತ್ಮ! ಈ ಶರೀರದಲ್ಲಿಯೇ ಇದ್ದರೆ, ಎಲ್ಲೆಲ್ಲಿಯೋ ಯಾತ್ರೆಗಳಿಗೆ ಹೋಗಿ, ತಿರುಗಿ, ಎಷ್ಟೋ ಯಾತನೆಗಳನ್ನು ಪಡುವುದು ಏತಕ್ಕೆ? ಯಾವ ಯಾತ್ರೆಗೆ ಹೋಗುವ ಅವಶ್ಯಕತೆ ಇಲ್ಲ. ನಮ್ಮ ಶರೀರವೇ ದಿವ್ಯ ಮಂಗಳವಾದ ಸರ್ವಕ್ಷೇತ್ರವೆಂದು ವೀರ ಬ್ರಹ್ಮೇಂದ್ರ ಸ್ವಾಮಿಯವರು ಹೇಳಿದ್ದಾರೆ.

**"ಬುಜಮು ಗಾಲ್ಚುಕೊನ್ನ ಬುಜಮುಪ್ಪೈ ಜಂದೆಪು**
**ಪೂಗು ವೇಸಿಕೊನ್ನ ಮುಕ್ತಿರಾದು**
**ನೇನು ಮೇನು ಲೋನ ನೇನೆರಿಂಗಿನ ಮುಕ್ತಿ**
**ಕಾಳಿಕಾಂಬ! ಹಂಸ! ಕಾಳಿಕಾಂಬ!"**

ಭುಜವನ್ನು ಸುಟ್ಟುಕೊಂಡರೆ, ಭುಜದ ಮೇಲೆ ಜನಿವಾರ ದಾರ ಹಾಕಿಕೊಂಡರೆ ಮುಕ್ತಿ ಬರುತ್ತದೆಂದು ಅಂದುಕೊಳ್ಳುತ್ತಾರೆ ಈ ಅಜ್ಞಾನಿಗಳು.

ಈ ಮೇನುವಿನಲ್ಲಿ ಒಂದು "ನಾನು" ಇದೆ. 'ನಾನು'ವಿನಲ್ಲಿ ಮತ್ತೊಂದು 'ನಾನು' ಇದೆ. ಅದನ್ನು ತಿಳಿದುಕೊಂಡಾಗಲೇ ಸಮಸ್ತ ದುಃಖಗಳಿಂದ ಮುಕ್ತಿ. ಮೇನುವಿನೊಳಗೆ 'ಅಹಂಕಾರ'ವೆಂಬ ಜೀವನು, ಒಳಗೆ 'ಸರ್ವಾತ್ಮ' ಎಂಬ ಮತ್ತೊಂದು 'ನಾನು' ಇದೆ. ಆ ನಾನುವನ್ನು ತಿಳಿದುಕೊಂಡರೇನೇ 'ಮುಕ್ತಿ' ಬರುತ್ತದೆಂದು ತಿಳಿದುಕೊಳ್ಳಬೇಕು.

**ದೃಷ್ಟಿ ನಿಲಿಪೆನೇನಿ ದೇವುಡು ದಿಗಿ ವಚ್ಚು**
**ದೃಷ್ಟಿ ನಿಲುಪಡೇನಿ ನಷ್ಟಪಡುನು**
**ದೃಷ್ಟಿಲೋನ ಸರ್ವ ಸೃಷ್ಟಿ ಪುಷ್ಪಮೌನು**
**ಕಾಳಿಕಾಂಬ! ಹಂಸ! ಕಾಳಿಕಾಂಬ!**

ಆದ್ದರಿಂದ ದೃಷ್ಟಿ ನಿಲ್ಲಿಸಿ ಧ್ಯಾನ ಮಾಡಿದರೆ, ಆ ದೇವರೇ ಕೆಳಗಿಳಿದು ಬರುತ್ತಾನೆ. ದೃಷ್ಟಿ ನಿಲ್ಲಿಸದಿದ್ದರೆ, ಅಂದರೆ ಧ್ಯಾನ ಮಾಡದಿದ್ದರೆ ಎಲ್ಲಾ ಕಷ್ಟಗಳೇ. ಅನಾರೋಗ್ಯ, ಅಶಾಂತಿ, ಭಯ, ದುಃಖ, ನಿರುತ್ಸಾಹ, ಕೋಪಗಳಂತಹವು ಎಷ್ಟೋ, ಆದರೆ ದೃಷ್ಟಿಯಲ್ಲಿ ಅಂದರೆ ಧ್ಯಾನದಲ್ಲಿ ಸಕಲ ಸೃಷ್ಟಿ ಕುರಿತು ತಿಳಿದುಕೊಳ್ಳಬಲ್ಲೆವು.

**ಆಟವಿಕುಲಕೆಲ್ಲ ಆಧ್ಯಾತ್ಮ ತತ್ವಮ್ಮು**
**ಬೋಧ ಚೇಸಿ ಪೂರ್ಣ ಪುರುಷಲಗನು**
**ತೀರ್ಚಿ ದಿದ್ದು ವಾರೇ ದೇವತಾಮೂರ್ತುಲು**
**ಕಾಳಿಕಾಂಬ! ಹಂಸ! ಕಾಳಿಕಾಂಬ!**

ನಾಗರಿಕತೆ ಇಲ್ಲದ ಅಜ್ಞಾನಿಗಳಿಗೆ ಭಗವಂತನ ತತ್ವವನ್ನು ಬೋಧಿಸಿ ಅವರನ್ನು ಸರಿಯಾದ 'ಸತ್ಯ ಮಾರ್ಗ'ದಲ್ಲಿ ನಡೆಸುವವರನ್ನು ಕೂಡಾ ಪೂರ್ಣ ಪುರುಷರಾಗಿ ಅಂದರೆ ಜ್ಞಾನಿಗಳಾಗಿ ತಿದ್ದಿ ತೀಡುವವರೇ ದೇವತಾ ಸ್ವರೂಪರು ಎಂದು ಶ್ರೀ ವೀರಬ್ರಹ್ಮೇಂದ್ರ ಸ್ವಾಮಿ ತಿಳಿಸುತ್ತಿದ್ದಾರೆ.

ಭಗವಂತನು ಯಾರು? ಎಲ್ಲಿರುತ್ತಾನೋ ತಿಳಿಯದೆ? ಪೂರ್ವದಿಂದ ಆಚಾರವಾಗಿ ಬರುತ್ತಿದೆ ಎಂದು ವಿಗ್ರಹಗಳನ್ನು ಮಾಡುತ್ತಾ, ಹೊರಗೆ ಹುಡುಕುವವರಿಗೆ, ಯಾರಾದರೆ ಸತ್ಯವಾದ 'ಧ್ಯಾನ ಮಾರ್ಗವನ್ನು' ಬೋಧಿಸುತ್ತಾರೋ ಅವರೇ ದೇವತಾ ಸ್ವರೂಪರೆಂದು ಶ್ರೀ ವೀರಬ್ರಹ್ಮೇಂದ್ರ ಸ್ವಾಮಿ ತಿಳಿಸುತ್ತಿದ್ದಾರೆ.

ಆದ್ದರಿಂದ ಪ್ರತಿಯೊಬ್ಬರೂ ದೈವ ಬೇರೆ ಎಲ್ಲೋ ಇಲ್ಲವೆಂದು ತಿಳಿದುಕೊಳ್ಳಬೇಕು. 'ಧ್ಯಾನ ಸಾಧನೆ' ಮೂಲಕ ತಾವೇ ದೈವ ಸ್ವರೂಪರೆಂಬ ಸತ್ಯವನ್ನು ಗ್ರಹಿಸಬೇಕು. ಇದೇ ಸತ್ಯವನ್ನು ಎಲ್ಲರಿಗೂ ಬೋಧಿಸಬೇಕು.

## ನಿಜವಾದ ಆರಾಧನೆ

ಶ್ರೀಮತ್ ಭಗವತಂ (29–21, 22)

"ನಾನು ಎಲ್ಲಾ ಜೀವಿಗಳಲ್ಲೂ ಸದಾ ಆತ್ಮರೂಪದಲ್ಲಿ ಸ್ಥಿತವಾಗಿ ಇದ್ದೇನೆ. ಅಂತಹ ನನ್ನನ್ನು ನಿರ್ಲಕ್ಷಿಸಿ ಮಾನವರು ನನ್ನ ಪ್ರತಿಮೆಗಳಿಗೆ ಪೂಜೆಗಳನ್ನು ಮಾಡಲು ಪ್ರಾರಂಭಿಸಿದ್ದಾರೆ."

***

"ಸರ್ವ ಜೀವಿಗಳಲ್ಲೂ, ಆತ್ಮರೂಪದಲ್ಲಿ, ಈಶ್ವರನಾಗಿರುವ ನನ್ನ ಇರುವಿಕೆಯ ಗುರುತು ತಿಳಿಯದೇ ಯಾರು ನನ್ನನ್ನು ಪ್ರತಿಮೆಗಳ ರೂಪದಲ್ಲಿ ಪೂಜಿಸುತ್ತಾರೊ, ಅಂತಹವರ ಪೂಜೆ ಬೂದಿಯಲ್ಲಿ ಹಾಕಿದ ಯಜ್ಞದ್ರವ್ಯಗಳಂತೆ ನಿಷ್ಪ್ರಯೋಜನ."

**ಲಾಹಿರಿ ಮಹಾಶಯರು**



ಪ್ರಶ್ನೆ : ಶಿವ, ವಿಷ್ಣು, ಕಾಳಿ ಈ ದೇವತೆಗಳಲ್ಲಿ ನೀವು ಯಾರನ್ನು ಧ್ಯಾನಿಸುತ್ತೀರಿ?

ಉತ್ತರ : ಶಿವನಲ್ಲಿ, ವಿಷ್ಣುವಿನಲ್ಲಿ, ಕಾಳಿಯಲ್ಲಿ ನಿನ್ನಲ್ಲಿ, ನನ್ನಲ್ಲಿ, ಎಲ್ಲರಲ್ಲೂ ಇರುವವನನ್ನೇ ಧ್ಯಾನಿಸುತ್ತಾನೆ.

ಸ್ವಾಮಿ ವಿವೇಕಾನಂದ



ಆರಾಧಿಸಬಲ್ಲ ಒಬ್ಬನೇ ಭಗವಂತನು
ಮಾನವನ ದೇಹದಲ್ಲಿರುವ 'ಆತ್ಮ'.
ಮಾನವನ ದೇಹದಲ್ಲಿ ಅಲ್ಲದೆ ಬೇರೆ
ಎಲ್ಲಿ ಆರಾಧಿಸಿದರೂ ಅದು ವ್ಯರ್ಥವೇ.

ಯಾವ ಕ್ಷಣದಲ್ಲಾದರೇ ಮಾನವನ
ದೇಹವೆಂಬ ದೇವಾಲಯದಲ್ಲಿ ಭಗವಂತನನ್ನು
ದರ್ಶಿಸಬಲ್ಲವರಾಗುತ್ತೇವೋ, ಪ್ರತಿ ಒಬ್ಬರಲ್ಲಿ
ಭಗವಂತನನ್ನು ನೋಡಬಲ್ಲೆವೋ, ಆಕ್ಷಣದಲ್ಲಿ
ವಿಮುಕ್ತರಾಗುತ್ತೇವೆ.

# ದುಃಖ ನಿವಾರಣೆಗೆ ಯೋಗಿಗಳ ಸಂದೇಶ!

ಪ್ರಸ್ತುತ ಮಾನವರು ಅನೇಕ ರೀತಿಯ ದುಃಖಗಳಿಂದ ಬಳಲುತ್ತಿದ್ದಾರೆ. ಅವುಗಳಿಂದ ಹೊರಬರಲು ಅನೇಕ ಪ್ರಯತ್ನಗಳನ್ನು ಕೂಡಾ ಮಾಡುತ್ತಿದ್ದಾರೆ. ಪೂಜೆಗಳು, ಪ್ರಾರ್ಥನೆಗಳು, ನಮಾಜುಗಳನ್ನು ಮಾಡುತ್ತಿದ್ದಾರೆ. ತೀರ್ಥ ಯಾತ್ರೆಗಳನ್ನು ಮಾಡುತ್ತಿದ್ದಾರೆ. ಗುರುಗಳನ್ನು, ಸ್ವಾಮೀಜಿಗಳನ್ನು ಆಶ್ರಯಿಸುತ್ತಿದ್ದಾರೆ. ದೇವರುಗಳನ್ನು ಬದಲಾಯಿಸುತ್ತಿದ್ದಾರೆ. ಇನ್ನು ಮತಗಳನ್ನು ಕೂಡಾ ಬದಲಾಯಿಸುತ್ತಿದ್ದಾರೆ. ಆದರೆ ಎಷ್ಟು ಪ್ರಯತ್ನಗಳನ್ನು ಮಾಡಿದರೂ ದುಃಖದಿಂದ ಹೊರ ಬದಲಾಗುತ್ತಿಲ್ಲ.

ಆದರೆ ಮಾನವರು ದುಃಖದಿಂದ ತಾತ್ಕಾಲಿಕವಾಗಿಯಲ್ಲದೆ, ಶಾಶ್ವತವಾಗಿ ಹೊರಬೀಳುವ ಮಾರ್ಗವನ್ನು ಎಷ್ಟೋ ಮಂದಿ ಯೋಗಿಗಳು ಬೋಧಿಸಿದ್ದಾರೆ, ಬೋಧಿಸುತ್ತಿದ್ದಾರೆ ಕೂಡಾ. ಅವರೆಲ್ಲಾ ಮಾಡಿದ ಬೋಧನೆ, ತಿಳಿಸಿದ ಮಾರ್ಗ ಒಂದೇ, ಅದೇ 'ಧ್ಯಾನ'. ಧ್ಯಾನದ ಮೂಲಕ ಯಾರಾಗಲಿ ದುಃಖದಿಂದ ಶಾಶ್ವತವಾಗಿ ಹೊರಬರಬಹುದು. ಅವರೆಲ್ಲಾ ಏನು ಹೇಳಿದ್ದಾರೋ ತಿಳಿದುಕೊಳ್ಳೋಣ.

**ಯೋಗಿ ವೇಮನ :**



**"ತನಲೋ ಸರ್ವಬುಂಡಗ**
**ತನಲೋಪಲ ವೆದುಕ ಲೇಕ ಧರ ವೆದಕೆಡಿ ಈ**
**ತನುವುಲ ಮೋಸೆಡಿ ಯೆದ್ದುಲ**
**ಮನಮುಲ ದೆಲ್ಪಂಗ ವಶಮೇ ಮಹಿಲೋ ವೇಮ!"**

ಸಮಸ್ತ ಅಂದರೆ ತನಗೆ ಬೇಕಾದ ಆರೋಗ್ಯ, ಶಾಂತಿ, ಆನಂದ, ಜ್ಞಾನ ಇನ್ನು ಎಲ್ಲಾ ತನ್ನಲ್ಲಿಯೇ ಇದ್ದರೆ ಮಾನವರು, ತನ್ನಲ್ಲಿ ಹುಡುಕದೇ, ಹೊರಗೆ ಹುಡುಕುತ್ತಿದ್ದಾರೆ. ಭಾರ ಹೊರುತ್ತಿರುವ ಎತ್ತುಗಳಂತೆ, ಈ ಜೀವನವನ್ನು ಭಾರವಾಗಿ ಮಾಡಿಕೊಳ್ಳುತ್ತಿರುವ ಈ ಮಾನವರ ಆಲೋಚನೆಗಳನ್ನು ಯಾರಾದರೂ ಹೇಳಬಲ್ಲರೇ? ಎಂದು ವೇಮನ ಯೋಗೀಂದ್ರರು ಹೇಳುತ್ತಿದ್ದಾರೆ.

**"ಯಾತ್ರ ಪೋಯಿ ನಾತಡೆನ್ನಾಳ್ಳು ತಿರಿಗಿನ**
**ಭದ್ರಮೈನ ಮುಕ್ತಿ ಪದವಿ ಗನಡು!**
**ಮನಸು ನಿಲ್ಪುನತಡು ಮಹನೀಯ ಮೂರ್ತಿರಾ.....**
**ವಿಶ್ವಧಾಭಿರಾಮ ವಿನುರ ವೇಮ"**

ಎಷ್ಟೋ ಖರ್ಚು, ಆಯಾಸ, ಕಷ್ಟ, ನಷ್ಟಗಳನ್ನು ಹೊಂದಿ, ಎಷ್ಟು ಯಾತ್ರೆಗಳನ್ನು ಮಾಡಿದರೂ, ಎಷ್ಟು ದಿನಾ ತಿರುಗಿದರೂ ಮಾನವನು ಬಯಸುವ ದುಃಖದಿಂದ ಹೊರಬರಲಾರ. ಆದರೆ ಎಲ್ಲಿಗೂ ಹೋಗಬೇಕಾದ ಅವಸರವಿಲ್ಲದೆ, ಮನಸ್ಸನ್ನು ನಿಲ್ಲಿಸಿ, ಧ್ಯಾನ ಮಾಡಿದರೆ ಅಂದರೆ "ಶ್ವಾಸದ ಮೇಲೆ ಧ್ಯಾನ"ವಿಟ್ಟರೆ, ಅವನು ಸಮಸ್ತ ಸಮಸ್ಯೆಗಳಿಂದ ತಾತ್ಕಾಲಿಕವಾಗಿಯೇ ಅಲ್ಲದೆ ಶಾಶ್ವತವಾಗಿ ಹೊರಬೀಳುತ್ತಾನೆ. ಯೋಗಿಗಳಂತೆ ಮಹನೀಯನಾಗುತ್ತಾನೆಂದು ವೇಮನು ತಿಳಿಸುತ್ತಿದ್ದಾರೆ.

ಮಾನವರಿಗೆ ಅನಾರೋಗ್ಯ, ಅಶಾಂತಿ, ದುಃಖಗಳಿಂದ ಮುಕ್ತಿ ಬೇಕು..... ಕುಟುಂಬ, ಆರ್ಥಿಕ ಸಮಸ್ಯೆಗಳಿಂದ ಮುಕ್ತಿ ಬೇಕು. ಭಯದಿಂದ, ಮುದಿತನದ ಬಾಧೆಗಳಿಂದ ಮುಕ್ತಿ ಬೇಕು. ಅಸಲು ಇವೆಲ್ಲವುಗಳಿಂದ ಶಾಶ್ವತವಾಗಿ ವಿಮುಕ್ತಿ ಲಭಿಸಬೇಕು. ಆದರೆ ಮಾನವನು ಮಾಡುವ ಪ್ರಯತ್ನಗಳಿಂದ ಶಾಶ್ವತದ ಮಾತು ಹಾಗಿರಲಿ, ತಾತ್ಕಾಲಿಕವಾಗಿಯಾದರೂ ಹೊರ ಬರಲಾರದೆ ಇದ್ದಾನೆ. ಇದಕ್ಕೆ ಕಾರಣ ವೇಮನ ಯೋಗೀಂದ್ರರು ಈ ಪದ್ಯದ ಮೂಲಕ ತಿಳಿಸಿದ್ದಾರೆ.


**"ಮನಸು ಲೋನಿ ಮುಕ್ತಿ ಮರಿಯೊಕ್ಕ ಚೋಟನು**
**ವೆದುಕ ಬೋವುವಾಡು ವೆರ್ರಿವಾಡು!**
**ಗುರ್ರೆ ಜಂಕನೆಟ್ಟಿ ಗೊಲ್ಲ ವೆದಕುರೀತಿ**
**ವಿಶ್ವದಾಭಿರಾಮ ವಿನುರ ವೇಮ!"**

ಮಾನವರು ಕೋರಿಕೊಳ್ಳುವ, ಸಮಸ್ತ ಸಮಸ್ಯೆಗಳಿಂದ ಹೊರ ಬರುವ ಮುಕ್ತಿ ಮಾರ್ಗವು, ಮನಸ್ಸಿನಲ್ಲಿರುವಾಗ ಬೇರೆ ಬೇರೆ ಪ್ರದೇಶಗಳಲ್ಲಿ ಹುಡುಕುವವನು ಮೂರ್ಖನು ಅಲ್ಲದೆ ಮತ್ತೇ ಇನ್ನೇನಾಗುತ್ತಾನೆ. ಯಾರಾದರು ಕುರಿಮರಿಯನ್ನು ಸೊಂಟದಲ್ಲಿಟ್ಟುಕೊಂಡು, ಎಲ್ಲಾ ಕಡೆ ಹುಡುಕುವ ಗೊಲ್ಲನಂತೆ ವರ್ತಿಸುತ್ತಾರಾ? ಹಾಗೆ ವರ್ತಿಸಿದರೆ ಅವನು ಮೂರ್ಖನ ಕೆಳಗೆ ಲೆಕ್ಕವೆಂದು ವೇಮನ ಯೋಗೀಂದ್ರರು ಹೇಳುತ್ತಿದ್ದಾರೆ.

**"ಮನಸೇ ಮಾಯಾ ಮೃಗಮೌ**
**ಮನಸೇ ಮಿಟಿ ಪೈಕಿ ಮರಿಪೋನಿಕ**
**ಮನಸುನು ಮನಸುನ ಜಂಪಿನ**
**ಮನಸಂದೇ ಮುಕ್ತಿ ಮಹಿಲೋ ವೇಮಾ!"**

ಮಾಯಾ ಮೃಗವು ಸೀತಾದೇವಿಯನ್ನು ಹೇಗೆ ಕಷ್ಟಗಳ ಪಾಲು ಮಾಡಿತೋ, ಮಾನವರ ಮನಸ್ಸು ಕೂಡಾ ಮಾನವರನ್ನು ವಿವಿಧ ರಿತಿಯ ಕಷ್ಟಗಳಿಗೆ ಗುರಿ ಮಾಡುತ್ತದೆ.

ಅಂತಹ ಮನಸ್ಸನ್ನು ಪ್ರಾಪಂಚಿಕ ವಿಷಯದ ಮೇಲೆ ಹೋಗದಂತೆ ಅಂದರೆ ಆಲೋಚನೆಗಳು ಇಲ್ಲದಂತೆ ಮಾಡಿಕೊಂಡರೆ, ಅಂದರೆ ಸಾಯಿಸಿದರೆ (ಆಲೋಚನೆಗಳು ಇದ್ದರೆ ಮನಸ್ಸು ಇದ್ದಂತೆ, ಆಲೋಚನೆಗಳು ಇಲ್ಲದಿದ್ದರೆ ಮನಸ್ಸು ಶೂನ್ಯವಾದಂತೆ ಅಲ್ಲವೇ?) ಸಮಸ್ತ ದುಃಖಗಳಿಂದ ವಿಮುಕ್ತಿ ಲಭಿಸುತ್ತದೆಂದು ವೇಮನ ಯೋಗೀಂದ್ರರು ಹೇಳುತ್ತಿದ್ದಾರೆ.



**ಶೃತಿ ವಾಕ್ಯ :**
**"ಮನಯೇವ ಮನುಷ್ಯಾಣಾಂಕಾರಣ ಬಂಧ ಮೋಕ್ಷಂ!"**

** ** **

ಮಾನವರ ಬಂಧಗಳು ಎಂದರೆ ದುಃಖಕ್ಕೆ, ಮೋಕ್ಷ ಅಂದರೆ ಆನಂದಕ್ಕೆ ಮನಸೇ ಕಾರಣವೆಂದು ಶೃತಿ ವಾಕ್ಯವನ್ನು ಆಧರಿಸಿ ಅರ್ಥ ಮಾಡಿಕೊಳ್ಳಬಹುದು.

ಮನಸ್ಸಿಲ್ಲದ ಗಾಢ ನಿದ್ರಾಸ್ಥಿತಿಯಲ್ಲಿ ನಾವು ಎಷ್ಟೋ ಆನಂದವನ್ನು ಹೊಂದುತ್ತಿದ್ದೇವೆ. ಎಚ್ಚರದಲ್ಲಿ ಮನಸ್ಸು ಇರುತ್ತದೆ, ಆದ್ದರಿಂದ ಎಚ್ಚರವಾದಾಗ ದುಃಖವನ್ನು ಅನುಭವಿಸುತ್ತಿದ್ದೇವೆ. ಆದ್ದರಿಂದ ಮನಸ್ಸು ಇದ್ದರೆ ದುಃಖ, ಮನಸ್ಸಿಲ್ಲದಿದ್ದರೆ ಆನಂದ. ಮತ್ತೆ ದುಃಖದಿಂದ ಹೊರ ಬರಬೇಕೆಂದರೆ ವೇಮನು ಹೇಳಿದಂತೆ, ಮನಸ್ಸನ್ನು ಸಾಯಿಸಬೇಕು ಅಂದರೆ ಮನಸ್ಸಿನ ಪ್ರಾಮುಖ್ಯತೆ ಪೂರ್ತಿಯಾಗಿ


ತೊಲಗಿಸಬೇಕು. ಆ ಮಾರ್ಗವೇ "ಶ್ವಾಸದ ಮೇಲೆ ಗಮನ ಧ್ಯಾನ."

**ಯೋಗಾನಂದ ಪರಮ ಹಂಸ :**



"ಕ್ರಿಯಾಯೋಗದ ಮೂಲಕ ಅಂತರ್ ನಿಶ್ಶಬ್ದವನ್ನು ಸಾಧಿಸಿದರೆ ಮುಕ್ತಿಯನ್ನು ಹೊಂದಬಹುದು."

ಕ್ರಿಯೆ ಅಂದರೆ ಶ್ವಾಸಕ್ರಿಯೆ, ಯೋಗ ಅಂದರೆ ಸೇರುವಿಕೆ. ಶ್ವಾಸದೊಂದಿಗೆ ಸೇರುವುದು ಅಂದರೆ "ಶ್ವಾಸದ ಮೇಲೆ ಗಮನವಿಡುವುದರ ಮೂಲಕ ಮನಸ್ಸನ್ನು ಶೂನ್ಯ ಮಾಡಿಕೊಂಡು ಅಂತರ್ ನಿಶ್ಶಬ್ದವನ್ನು ಅಂದರೆ ಆಲೋಚನೆಗಳು ಇಲ್ಲದ ಸ್ಥಿತಿ, ಮನಸ್ಸನ್ನು ಸಾಯಿಸಿದ ಸ್ಥಿತಿಯನ್ನು ಹೊಂದಿದರೆ ದುಃಖದಿಂದ ಮುಕ್ತಿ ಹೊಂದಬಹುದು."




**ಬ್ರಹ್ಮರ್ಷಿ ಪತ್ರೀಜಿ :**

**"ಧ್ಯಾನದಿಂದ ಜ್ಞಾನ, ಜ್ಞಾನದಿಂದ ಮುಕ್ತಿ"**

ಧ್ಯಾನವೆಂದರೆ "ಶ್ವಾಸದ ಮೇಲೆ ಗಮನ ಇಡುವುದರ" ಮೂಲಕ, ಆಲೋಚನಾರಹಿತ ಸ್ಥಿತಿ ಅಂದರೆ ಮನಸ್ಸು ಶೂನ್ಯವಾದ ಸ್ಥಿತಿ ಹೊಂದುವುದರ ಮೂಲಕ, ವಿಶ್ವದಲ್ಲಿಯ ಪ್ರಾಣಶಕ್ತಿಯ ಆವಾಹನೆಯ ಮೂಲಕ, ನಾಡಿಮಂಡಲ ಶುದ್ಧಿ ಆಗುವುದರ ಮೂಲಕ ದಿವ್ಯ ಚಕ್ಷುವನ್ನು ಉತ್ತೇಜನಗೊಳಿಸಿಕೊಳ್ಳುವುದರ ಮೂಲಕ, ಜ್ಞಾನವನ್ನು ಹೊಂದಿ ಕರ್ಮಗಳನ್ನು ದಗ್ಧ ಮಾಡಿಕೊಳ್ಳುವುದರ ಮೂಲಕ ಅನುಭವಿಸಬೇಕಾದ ರೋಗಗಳು, ಅಶಾಂತಿ, ಸಮಸ್ಯೆಗಳು, ಕಷ್ಟಗಳಂತಹವುಗಳ ದುಃಖದಿಂದ ಶಾಶ್ವತವಾಗಿ ಮುಕ್ತಿ ಹೊಂದಬಹುದೆಂದು ಬ್ರಹ್ಮರ್ಷಿ ಪತ್ರೀಜಿಯವರು ಬೋಧಿಸುತ್ತಿದ್ದಾರೆ.

**ಅವತಾರ್ ಮೆಹರ್ ಬಾಬಾ :**



The real things that are given & received only in silence.

***

ಮನವನಿಗೆ ಬೇಕಾದ ನಿಜವಾದವು ಅಂದರೆ ಶಾಂತಿ, ಆನಂದ, ಧರ್ಮ, ಪ್ರೇಮ, ಕರುಣ, ಜ್ಞಾನ ಎಲ್ಲವನ್ನು ನಿಶ್ಶಬ್ಧದಲ್ಲಿಯೇ ಲಭಿಸುತ್ತವೆ ಎಂದು ಮೆಹರ್ ಬಾಬಾ ತಿಳಿಸಿದ್ದಾರೆ.

'ನಿಶ್ಶಬ್ಧ' ಅಂದರೆ 'ಅಂತರ್ ನಿಶ್ಶಬ್ಧ' ಅಂದರೆ ಮನಸ್ಸು ಇಲ್ಲದ ಧ್ಯಾನಸ್ಥಿತಿಯಲ್ಲಿ ಮಾನವರಿಗೆ ಬೇಕಾದವು ಎಲ್ಲವು ಲಭಿಸುತ್ತವೆ, ಮುಖ್ಯವಾದ ಮುಕ್ತಿ ಕೂಡಾ ಲಭಿಸುತ್ತದೆ.

**ಆದಿ ಶಂಕರಾಚಾರ್ಯರು :**



**ಸತ್ಸಂಗತ್ವೇ ನಿಸ್ಸಂಗತ್ವಂ**
**ನಿಸ್ಸಂಗತ್ವೇ ನಿರ್ಮೋಹತ್ವಂ**
**ನಿರ್ಮೋಹತ್ವೇ ನಿಶ್ಚಲ ಚಿತ್ತಂ**
**ನಿಶ್ಚಲ ಚಿತ್ತೇ ಜೀವನ್ಮುಕ್ತಿ**

***

ಚಿತ್ತವೆಂದರೆ ಮನಸ್ಸು ನಿಶ್ಚಲವಾದಾಗ ಮುಕ್ತಿ ಲಭಿಸುತ್ತದೆಂದು ಶಂಕರಾಚಾರ್ಯರ ಸಂದೇಶ. ಜೀವನ್ಮುಕ್ತಿ ಅಂದರೆ ಜೀವಿಸಿರುವಾಗಲೇ ಮುಕ್ತಿ. ಯಾವುದರಿಂದ ಎಂದರೆ ಅನಾರೋಗ್ಯ, ಅಶಾಂತಿ, ದುಃಖ, ಬಾಧೆಗಳು, ಕಷ್ಟಗಳಿಂದ ಜೀವಿಸಿರುವಾಗಲೇ ಮುಕ್ತಿ ಹೊಂದಬಹುದು. ಆದ್ದರಿಂದ "ಶ್ವಾಸದ ಮೇಲೆ ಗಮನ" ಇಡುವುದರ ಮೂಲಕ ಚಿತ್ತ ಅಂದರೆ ಮನಸ್ಸು ನಿಶ್ಚಲ ಮಾಡಿಕೊಳ್ಳಬೇಕು.



**ಪತಂಜಲಿ ಮಹರ್ಷಿ :**

**"ಯೋಗಃ ಚಿತ್ತವೃತ್ತಿ ನಿರೋಧಃ"**

***

"ಚಿತ್ತವೃತ್ತಿಗಳನ್ನು ನಿರೋಧಿಸುವುದೇ ಯೋಗ" ಎಂದು ಪತಂಜಲಿ ಮಹರ್ಷಿಗಳು ತಿಳಿಸಿದ್ದಾರೆ. ಅಂದರೆ ಯೋಗ ಸ್ಥಿತಿಯನ್ನು ಹೊಂದಬೇಕೆಂದರೆ ಚಿತ್ತದಲ್ಲಿಯ ವೃತ್ತಿಗಳು ಅಂದರೆ ಆಲೋಚನೆಗಳನ್ನು ನಿರೋಧಿಸಬೇಕು. ಅಂದರೆ ಮನಸ್ಸು ಶೂನ್ಯ ಮಾಡಬೇಕು. ಅದರ ಮಾರ್ಗವೇ "ಶ್ವಾಸದ ಮೇಲೆ ಗಮನ" ಹಾಗೆ ಯೋಗ ಸ್ಥಿತಿಯನ್ನು ಹೊಂದಿದರೆ ಅವರು ದುಃಖದಿಂದ ಹೊರಬರುತ್ತಾರೆ.

**ಶ್ರೀ ಕೃಷ್ಣ ಪರಮಾತ್ಮ :**



**"ಯೋಗೋ ಭವತಿ ದುಃಖಃ"**

***


ಯೋಗಿಯಾದವನಿಗೆ ದುಃಖವಿರುವುದಿಲ್ಲ.

"ತ್ರೈಗುಣ್ಯಾ ವಿಷಯಾ ವೇದಾ ನಿಸ್ತ್ರೈಗುಣ್ಯೋ ಭವಾರ್ಜುನಾ"

***

"ಅರ್ಜುನಾ, ತ್ರಿಗುಣಗಳಿಗೂ ಅತೀತವಾದ ನಿರ್ಗುಣನಾಗು!" ಎಂದಿದ್ದಾರೆ ಶ್ರೀ ಕೃಷ್ಣ ಪರಮಾತ್ಮ. ಮನಸ್ಸನ್ನು ನಿರ್ಮಲ ಮಾಡಿಕೊಂಡರೆ ನಿರ್ಗುಣನಾಗಬಹುದು. ಸತ್ವ, ರಜ, ತಮೋಗುಣಗಳಿಗೆ ಅತೀತನಾಗಬಹುದು. ಆ ಮಾರ್ಗವೇ "ಶ್ವಾಸದ ಮೇಲೆ ಗಮನ ಧ್ಯಾನ"

**ಶ್ರೀ ವೀರ ಬ್ರಹ್ಮೇಂದ್ರ ಸ್ವಾಮಿ :**



**ಸ್ನಾನಮಂದು ಲೇದು, ಪಾನಮಂದು ಲೇದು**
**ಮಂತ್ರ ತಂತ್ರಮುಲಂದು ಮಹಿಮ ಲೇದು**
**ಮನಸು ಕುದಿರೆ ನೇನಿ ಘನಯೋಗಿ ತಾನೌನು**
**ಕಾಳಿಕಾಂಬ! ಹಂಸ! ಕಾಳಿಕಾಂಬ!**

***

ನದಿ ಸ್ನಾನಗಳು, ಸಮುದ್ರ ಸ್ನಾನಗಳಲ್ಲಿ ಏನೂ ಇಲ್ಲ, ಆಲಯಗಳಲ್ಲಿ ತೆಗೆದುಕೊಳ್ಳುವ ತೀರ್ಥ. ಗಂಗಾ ತೀರ್ಥವನ್ನು ಕುಡಿದರೂ ಏನು ಫಲವಿರುವುದಿಲ್ಲ. ಮಂತ್ರ ತಂತ್ರಗಳಿಂದ ಕೂಡಾ ಏನೂ ಇಲ್ಲ. ಮನಸ್ಸನ್ನು ಧ್ಯಾನದಲ್ಲಿ ನಿರ್ಗುಣ ಸ್ಥಿತಿಗೆ ಸೇರಿಸದರೇನೆ ಯೋಗಿಯಾಗಬಲ್ಲನು. ದುಃಖದಿಂದ ಹೊರಬರಬಲ್ಲನು. ಅದೇ ಮುಕ್ತಿ.



**ರಮಣ ಮಹರ್ಷಿ :**

"ಮನಸ್ಸನ್ನು ಆತ್ಮದಲ್ಲಿ ಲಯ ಮಾಡಬೇಕು"

***

ಅಂದರೆ ಮನಸ್ಸು ನಿರ್ಗುಣ ಸ್ಥಿತಿಗೆ ಸೇರಿದರೆ ಆತ್ಮದಲ್ಲಿ ಲಯವಾದಂತೆಯೇ, ಅದೇ ಮುಕ್ತಸ್ಥಿತಿ. "ಶ್ವಾಸದ ಮೇಲೆ ಗಮನ"ದ ಮೂಲಕ ಸುಲಭವಾಗಿ ಸಾಧಿಸಬಹುದು. ದುಃಖದಿಂದ ಹೊರಬರಬಹುದು.

**ಕಲ್ಕಿ ಭಗವಾನ :**



"ಮನಸ್ಸಿನ ಬಂಧನದಲ್ಲಿರುವ ಇಂದ್ರಿಯಗಳನ್ನು
ಮನಸ್ಸಿನ ಬಂಧನದಿಂದ ಬಿಡಿಸುವುದೇ ಮುಕ್ತಿ"

***

ಮಾನವನ ಜ್ಞಾನೇಂದ್ರಯಗಳು, ಕರ್ಮೇಂದ್ರಿಗಳು, ಮನಸ್ಸು ಹೇಗೆ ಹೇಳಿದರೆ ಹಾಗೆ ಕೆಲಸ ಮಾಡುತ್ತವೆ. ಆದ್ದರಿಂದ ಅವು ಮನಸ್ಸಿನ ಬಂಧನದಲ್ಲಿದ್ದಂತೆ. ಹಾಗೇ

ಮನಸ್ಸಿನ ಬಂಧನದಲ್ಲಿ ಇಂದ್ರಿಯಗಳು ಇದ್ದರೆ ಮಾನವನ ಜೀವನವು ದುಃಖಮಯವಾಗುತ್ತದೆ. ಆದ್ದರಿಂದ ಅವುಗಳನ್ನು ಮನಸ್ಸಿನ ಬಂಧನದಿಂದ ಬಿಡಿಸಬೇಕು. ಮನಸ್ಸು ಇದ್ದರೆ ಇಂದ್ರಿಯಗಳು ಮನಸ್ಸಿನ ಬಂಧನದಲ್ಲಿದ್ದಂತೆ ಮನಸ್ಸನ್ನು ಸಾಯಿಸಿದರೇನೆ ಇಂದ್ರಿಯಗಳಿಗೆ ಸ್ವೇಚ್ಛೆ ಲಭಿಸುತ್ತದೆ. ಮಾನವರಿಗೆ ದುಃಖದಿಂದ ವಿಮುಕ್ತಿ ಲಭಿಸುತ್ತದೆ. ಮತ್ತೆ ಆ ಮನಸ್ಸನ್ನು ವೇಮನ ಹೇಳಿದಂತೆ ಮನಸ್ಸನ್ನು ಅಲ್ಲಿಯೇ ಸಾಯಿಸಬೇಕು.

ಮನಸ್ಸನ್ನು ನಿರ್ವೀರ್ಯ ಮಾಡುವ ಮಾರ್ಗವೇ "ಶ್ವಾಸದ ಮೇಲೆ ಗಮನ" ಧ್ಯಾನ.



**ಸತ್ಯ ಸಾಯಿಬಾಬಾ :**

**"ದೇಹಭಾವವನ್ನು ಬಿಟ್ಟರೇನೇ ದೈವಭಾವ ಉಂಟಾಗುತ್ತದೆ"**

***

ಮಾನವನಿಗೆ ದೇಹಭಾವವು ಇರುವವರೆಗೂ ಎಲ್ಲಾ ರೀತಿಯ ದುಃಖಗಳು ತಪ್ಪುವುದಿಲ್ಲ. ದೇಹಭಾವಕ್ಕೆ ಕಾರಣ ಮನಸ್ಸು. ಮನಸ್ಸನ್ನು ಸಾಯಿಸಿದ ತಕ್ಷಣವೇ ದೈವಭಾವ ಉಂಟಾಗುತ್ತದೆ. ದುಃಖದಿಂದ ವಿಮುಕ್ತರಾಗುತ್ತಾರೆ. ಆನಂದದಿಂದ ಇರುತ್ತಾರೆ. ಅದರ ಮಾರ್ಗವೇ "ಶ್ವಾಸದ ಮೇಲೆ ಗಮನ ಧ್ಯಾನ".

**ಜೀಸಸ್ ಕ್ರೈಸ್ಟ್ :**



**'For Forty days and Forty nights he ate nothing**

"ನಲವತ್ತು ದಿನಗಳು ಜೀಸಸ್ ಏನು ತಿನ್ನಲಿಲ್ಲ", ಅಂದರೆ ಮನಸ್ಸಿನಿಂದ ತಿನ್ನದಂತೆ ಅಂದರೆ ಆಲೋಚಿಸದೆ, ಚಿತ್ತವೃತ್ತಿಗಳನ್ನು ನಿರೋಧಿಸಿ, ಅಂತರ ನಿಶ್ಶಬ್ದದಿಂದ 40 ದಿನಗಳು ಧ್ಯಾನ ಮುದ್ರೆಯಲ್ಲಿದ್ದು, ದಿವ್ಯತ್ವವನ್ನು ಹೊಂದಿದರು. ನಿರ್ವಿಕಲ್ಪ ಸಮಾಧಿ ಹೊಂದಿದರು.

**ಗೌತಮ ಬುದ್ಧನು :**



ಮಾನವನು 'ನಿರ್ವಾಣವನ್ನು' ಅಂದರೆ ಸಮಸ್ತ ದುಃಖಗಳಿಂದ ಶಾಶ್ವತವಾಗಿ ಹೊರ ಬರಬೇಕೆಂದರೆ "ಆನಾಪಾನಸತಿ" ಧ್ಯಾನವನ್ನು ಮಾಡಬೇಕೆಂದು ಬೋಧಿಸಿದರು. "ಆನಾಪಾನಸತಿ" ಅಂದರೆ "ಶ್ವಾಸದ ಮೇಲೆ ಗಮನ"

ಇಡುವುದರ ಮೂಲಕ, ಚಿತ್ತವೃತ್ತಿ ನಿರೋಧದ ಮೂಲಕ ವಿಶ್ವ ಶಕ್ತಿ ಆವಾಹನೆ ಮೂಲಕ, ಕರ್ಮ ರಾಹಿತ್ಯದ ಮೂಲಕ, ದಿವ್ಯ ಚಕ್ಷುವು ಉತ್ತೇಜನಗೊಳ್ಳುವುದರ ಮೂಲಕ ಸಮಸ್ತ ದುಃಖಗಳಿಂದ ಹೊರಬರಬಹುದು.

**ಬ್ರಹ್ಮರ್ಷಿ ಪತ್ರೀಜಿ :**

"ಆಧ್ಯಾತ್ಮಿಕ ಶಾಸ್ತ್ರ ವಿಜ್ಞಾನ ಅನುಭವದ ಪ್ರಕಾರವಾಗಿ ಒಬ್ಬ ಗುರುವು ಹೇಳಿದ್ದು, ಮತ್ತೊಬ್ಬ ಗುರುವು ಹೇಳಿದ್ದಕ್ಕಿಂತಲೂ ವಿಭಿನ್ನವಾಗಿ ಎಂದಿಗೂ ಇರುವುದಿಲ್ಲ. ಯಾವ ಲೋಕದಲ್ಲಿಯಾದರೂ, ಯಾವ ಕಾಲದಲ್ಲಾದರೂ "ಶಾಸ್ತ್ರಜ್ಞಾನ" ಎನ್ನುವುದು ಒಂದೇ ಆಗಿರುತ್ತದೆ. "ಏಕಂ ಸತ್! ಎಂದಿದ್ದಾರಲ್ಲವೇ?"

***

ಆದ್ದರಿಂದ ದುಃಖನಿವಾರಣೆಗೆ ಯೋಗಿಗಳೆಲ್ಲರೂ ಹೇಳಿರುವುದು ಒಂದೇ ಎಂದು ತಿಳಿದುಕೊಳ್ಳಬೇಕು. ಅವರೆಲ್ಲಾ ತೋರಿಸುವುದು ಒಂದೇ ಮಾರ್ಗ. ಅದೇ "ಸತ್ಯಮಾರ್ಗ" ಎಂದು ತಿಳಿದುಕೊಂಡು "ಶ್ವಾಸದ ಮೇಲೆ ಗಮನ" ಇಟ್ಟು ಧ್ಯಾನ ಮಾಡಿದರೆ, ತಾತ್ಕಾಲಿಕವಾಗಿ ಅಲ್ಲ, ಶಾಶ್ವತವಾಗಿ ದುಃಖದಿಂದ ಹೊರ ಬರಬಹುದು.

ಯೋಗಿಗಳು ಹೇಳಿರುವ ಮೇಲಿನ ವಿಷಯಗಳನ್ನು ಗಮನಿಸಿದರೆ ಮಾನವನ ದುಃಖಗಳಿಗೆ ಕಾರಣ ಮನಸ್ಸಿನಲ್ಲಿದೆಯೆಂದು ತಿಳಿಯುತ್ತದೆ. ಮನಸ್ಸಿದ್ದರೆ ದುಃಖ. ಮನಸ್ಸನ್ನು ಜಯಿಸಿ ಶೂನ್ಯ ಮಾಡಿಕೊಂಡರೆ ಮುಕ್ತಿ ಎಂದು ತಿಳಿಯುತ್ತದೆ.

**ಏನು ಮಾಡುತ್ತೇವೋ ಅದೇ ನಮ್ಮ ಕೂಡಾ ಬರುತ್ತದೆ.**
**ಏನೂ ಮಾಡದಿದ್ದರೆ ಏನು ಬಾರದು–ಬ್ರಹ್ಮರ್ಷಿ ಪತ್ರೀಜಿ.**

**ಇತರರ ಚರಣಗಳನ್ನು ಬಿಟ್ಟು**
**ಆಚರಣೆಯನ್ನು ಪ್ರಾರಂಭಿಸೋಣ– ಬ್ರಹ್ಮರ್ಷಿ ಪತ್ರೀಜಿ**



# ಭಗವಂತನಿಗೆ ಏನನ್ನು ಸಮರ್ಪಿಸಬೇಕು?

**ಶ್ಲೋಕ॥ ಪತ್ರಂ ಪುಷ್ಪಂ ಫಲಂ ತೋಯಂ, ಯೋಮೇ ಭಕ್ತ್ಯಾ ಪ್ರಯಚ್ಛತಿ**
**ತದಹಾಂ ಭಕ್ತ್ಯ ಪ್ರಹೃತಮಶ್ನಾಮಿ ಪ್ರಯತಾತ್ಮನಃ (ಭ.ಗಿ. 9–26)**

ತಾತ್ಪರ್ಯ : ಯಾರು ನನಗೆ ಭಕ್ತಿಯಿಂದ ಎಲೆಯನ್ನಾಗಲಿ, ಪುಷ್ಪವನ್ನಾಗಲಿ, ಹಣ್ಣನ್ನಾಗಲಿ, ನೀರನ್ನಾಗಲಿ ಸಮರ್ಪಿಸುತ್ತಿದ್ದಾನೋ ಅಂತಹ ಪರಿಶುದ್ಧವಾದಂತಹವನಿಂದ ಭಕ್ತಿ ಪೂರ್ವಕವಾಗಿ ಕೊಡಲ್ಪಟ್ಟ ಆ ಪತ್ರ ಪುಷ್ಪಾದಿಗಳನ್ನು ನಾನು ಪ್ರೀತಿಯಿಂದ ಸ್ವೀಕರಿಸುತ್ತಿದ್ದೇನೆ.

ಬಹಳ ಜನ ಗೀತೆಯಲ್ಲಿರುವ ಮೇಲಿನ ಶ್ಲೋಕವನ್ನು ಉದಾಹರಿಸುತ್ತಾ ಭಗವಂತನು ಪತ್ರಿ, ಪುಷ್ಪ, ಫಲ, ಜಲಸಮರ್ಪಿಸು ಎಂದಿದ್ದಾನೆಂದರೆ, ಪೂಜೆ ಮಾಡಬೇಕೆಂದೇ ಅಲ್ಲವೇ ಅರ್ಥ! ನಾವು ಪೂಜೆಯಲ್ಲಿ ಸಮರ್ಪಿಸುವುದು ಅವೇ ಅಲ್ಲವೇ? ಅವುಗಳಿಂದಲೇ ಅಲ್ಲವೇ ನಾವು ಪೂಜೆ ಮಾಡುವುದು. ಆತನು ಪ್ರೀತಿಯಿಂದ ಕೂಡಾ ಸ್ವೀಕರಿಸುತ್ತೇನೆಂದು ತಿಳಿಸಿದ್ದಾನೆ. ಆದ್ದರಿಂದ ಪೂಜೆ ಮಾಡುತ್ತೇವೆಂದು ಹೇಳುತ್ತಾ ಇರುತ್ತಾರೆ.

ಆದರೆ ಗೀತೆಯಲ್ಲಿ ಭಗವಂತನು ಹೇಳಿದವುಗಳಿಗೆ ನಾವು ಸಾಮಾನ್ಯವಾದ ಬಾಹ್ಯಾರ್ಥ ಮಾತ್ರವೇ ತೆಗೆದುಕೊಳ್ಳುತ್ತೇವೆ. ಆದರೆ ಅದರಲ್ಲಿಯ ಅಂತರಾರ್ಥವನ್ನು ತೆಗೆದುಕೊಳ್ಳುತ್ತಿಲ್ಲ. ಭಗವಂತನು ಹೇಳಿದ ಅಂತರಾರ್ಥವನ್ನು ಗ್ರಹಿಸಿ ಆಚರಿಸಿದವನೇ ಭಗವಂತನ ಅನುಗ್ರಹವನ್ನು ಹೊಂದಿ ಧನ್ಯನಾಗಬಲ್ಲನು. ಅಷ್ಟೇ ಹೊರತು ತನಗೆ ತಿಳಿದ ಅರ್ಥವನ್ನು ತೆಗೆದುಕೊಂಡು, ತನಗೆ ತಿಳಿದ ರೀತಿಯಲ್ಲಿ ವರ್ತಿಸಿದರೆ ಭಗವಂತನು ಮೆಚ್ಚಬೇಕಲ್ಲವೇ?

ಇಲ್ಲಿ ಸಮರ್ಪಿಸು ಎಂದಿದ್ದಾನಾಗಲಿ, ಸಮರ್ಪಿಸುವವುಗಳಿಗಿಂತ ಸಮರ್ಪಿಸುವ ಭಾವ ಪ್ರಧಾನವೆಂದು ಗ್ರಹಿಸಬೇಕು. ಅಂದರೆ ಸಮರ್ಪಿಸುವ ವಸ್ತುಗಳಿಗಿಂತ ಸಮರ್ಪಿಸುವವನ ಭಕ್ತಿ, ಚಿತ್ತಶುದ್ಧಿ ಎರಡೂ ಪ್ರಧಾನವೇ! ಅಂದರೆ ಕೊಡುವವುಗಳನ್ನು

ನಿರ್ಮಲಭಕ್ತಿಯಿಂದ ಕೋರಿಕೆಗಳು ಇಲ್ಲದಂತೆ ಕೊಡಬೇಕು. ಕೊಡುವವನ ಚಿತ್ತ ಶುದ್ಧವಾಗಿರಬೇಕು. ಇವೇ ಪ್ರಧಾನ.

ಇನ್ನು ಸಮರ್ಪಿಸು ಎಂದಿರುವಂತಹುದು ಪತ್ರ, ಪುಷ್ಪಗಳಲ್ಲ. ಗಂಟೆಯಲ್ಲಿ ಬಾಡಿ ಹೋಗುವಂತವುಗಳಿಂದ ಭಗವಂತನಿಗೆ ಏನು ಪ್ರಯೋಜನ? ಭಗವಂತನು ಕೋರಿರುವುದು ಬಾಹ್ಯವಾದ ಪತ್ರಿಗಳು, ಪುಷ್ಪಗಳು, ಫಲಗಳು ಜಲಗಳನ್ನಲ್ಲ. ಅಂತರಂಗದಲ್ಲಿರುವ ಮನಸ್ಸು, ಬುದ್ಧಿ, ಚಿತ್ತ, ಅಹಂಕಾರಗಳನ್ನು ಮಾತ್ರವೇ. ಇವುಗಳನ್ನೇ ಭಗವಂತನು ಸಮರ್ಪಿಸು ಎಂದಿದ್ದಾನೆ.

ಎಲೆಗಳು ಅಲುಗಾಡುತ್ತಿರುತ್ತವೆ, ಹಾಗೆಯೇ ಮನಸ್ಸು ಕೂಡಾ ಚಂಚಲವಾಗಿರುತ್ತದೆ. ಹಾಗೆ ನಿರಂತರವಾಗಿ ಚಂಚಲವಾಗಿರುವ ಮನಸ್ಸು ನಮಗೆ, ಇತರರಿಗೆ, ಲೋಕಕ್ಕೆ ಎಷ್ಟೋ ಕೇಡನ್ನು ಮಾಡುತ್ತದೆ. ಚಂಚಲತ್ವವಿಲ್ಲದ "ನಿಶ್ಚಲ ಮನಸ್ಸು" ಇದ್ದವನು, ಒಂದು ಬಾರಿ ಒಂದು ಮಾತು ಇನ್ನೊಂದು ಬಾರಿ ಇನ್ನೊಂದನ್ನು ಮಾತನಾಡುವುದಿಲ್ಲ. ಮಾತನ್ನು ಉಳಿಸಿಕೊಳ್ಳುತ್ತಾನೆ. ಅಂತಹವನಿಂದ ಎಲ್ಲರಿಗೆ ಒಳ್ಳೆಯದು ಆಗುತ್ತದೆ. ಅಂತಹ ಚಂಚಲ ಮನಸ್ಸನ್ನು ಸಮರ್ಪಿಸು ಎಂದಿದ್ದಾನೆ. ಆದ್ದರಿಂದ ಮನಸ್ಸೇ ಪತ್ರಿಯು.

ಹೂ ಅರಳುತ್ತದೆ. ಹೂವಿನಂತೆ ಅರಳಿದ ಬುದ್ಧಿ ಇರುವವನು ಲೋಕಕ್ಕೆ ಉಪಕಾರವನ್ನು ಮಾಡುತ್ತಾನೆ. ಅಪಕಾರವನ್ನು ಮಾಡುವುದಿಲ್ಲ. ಅಂತಹ ಬುದ್ಧಿಯನ್ನು ಸಮರ್ಪಿಸು ಎಂದಿದ್ದಾನೆ. ಆದ್ದರಿಂದ ಬುದ್ಧಿಯೇ ಪುಷ್ಪ.

ನಾರಿಕೇಳ ಫಲ ಎಂದರೆ ತೆಂಗಿನಕಾಯಿ. ಒಡೆಯುವುದು ಜ್ಞಾನಬೋಧೆ ಎನ್ನುವ ಪೆಟ್ಟುಗಳಿಂದ ಒಡೆಯುವುದು ಅಹಂಕಾರ. ಅಹಂಕಾರ ರಹಿತರು ಜ್ಞಾನವನ್ನು ಹೊಂದಿ ಭಗವಂತನ ತತ್ವವನ್ನು ಆತನ ಸತ್ಯರೂಪವನ್ನು ಗ್ರಹಿಸಬಲ್ಲರು. ಅಂತಹ ಅಹಂಕಾರ ಫಲವನ್ನು ಸಮರ್ಪಿಸು ಎಂದಿದ್ದಾನೆ. ಆದ್ದರಿಂದ ಅಹಂಕಾರವೇ ಫಲವು.

ನೀರು ನಿರ್ಮಲವಾಗಿರುತ್ತದೆ. ಅಂತಹ ನಿರ್ಮಲ ಚಿತ್ತ ಏನು ಕೋರದು. ದುಃಖವನ್ನುಂಟು ಮಾಡುವುದಿಲ್ಲ. ಅಂತಹ ಚಿತ್ತವನ್ನು ಸಮರ್ಪಿಸು ಎಂದಿದ್ದಾನೆ. ಆದ್ದರಿಂದ ಚಿತ್ತವೇ ಕಾಯಿ.

ಅಂತಹ ಮನಸ್ಸು, ಬುದ್ಧಿ, ಚಿತ್ತ, ಅಹಂಕಾರಗಳೇ, ಪತ್ರಿ, ಪುಷ್ಪ, ಫಲ, ಕಾಯಿಗಳೆಂದು ತಿಳಿದುಕೊಳ್ಳಬೇಕು. ಅವುಗಳನ್ನು ಸಮರ್ಪಿಸಬೇಕು. ಅವು ಧ್ಯಾನದಿಂದಲೇ ಸಾಧ್ಯ. "ಶ್ವಾಸದ ಮೇಲೆ ಗಮನ"ವಿಟ್ಟಾಗ ಮನಸ್ಸಿನ ಚಂಚಲತ್ವ ಹೋಗುತ್ತದೆ. ಆಗ ಲಭಿಸುವ ಪ್ರಾಣಶಕ್ತಿಯಿಂದ ಬುದ್ಧಿ ವಿಕಸಿಸುತ್ತದೆ. ಬುದ್ಧನಂತೆ

ಬದಲಾಗುತ್ತಾನೆ. ನಾನು ಎನ್ನುವ ಅಹಂಕಾರ ತೊಲಗುತ್ತದೆ. ಒಳಗಿರುವ ಕೆಟ್ಟ ಆಲೋಚನೆಗಳೆಲ್ಲಾ ಹೋಗಿ ಚಿತ್ತವು ನಿರ್ಮಲವಾಗುತ್ತದೆ. ಅಂತಹವರು ಪರಿಶುದ್ಧ ಮನಸ್ಕನಾಗುತ್ತಾರೆ. ಲೋಕಕ್ಕೆ ಒಳ್ಳೆಯದು ಮಾಡುತ್ತಾರೆ. ಆದ್ದರಿಂದ ಅವುಗಳನ್ನೇ ಭಗವಂತನು ಕೋರುತ್ತಾನೆ. ಅಂತಹವರೇ ಆತನಿಗೆ ಪ್ರೀತಿ ಪಾತ್ರರಾಗುತ್ತಾರೆ.

ಅಷ್ಟೇ ಹೊರತು, ಪತ್ರಿಗಳನ್ನು, ಪುಷ್ಪಗಳನ್ನು, ಫಲಗಳನ್ನು, ಉದಕವನ್ನು ಭಕ್ತಿಯಿಂದ ಕೊಟ್ಟವರು ಯಾರಾದರೂ ಇದ್ದಾರೆಯೇ? ಅವುಗಳನ್ನು ದೇವರಿಗೆ ಅರ್ಪಿಸಿದಂತೆ ಯಾರನ್ನಾದರೂ ನೋಡಿದ್ದೀರಾ? ವಿವೇಕವನ್ನು ಉಪಯೋಗಿಸದೇ, ಯಥಾರ್ಥವನ್ನು ಗ್ರಹಿಸಲಾರದೆ, ಆಚಾರವಾಗಿ ಬರುತ್ತಿದೆ ಎಂದು ಆಚರಿಸುತ್ತಿದ್ದಾರಾಗಲಿ, ಭಗವದ್ಗೀತೆ, ಉಪನಿಷತ್ತಿನ ಸಾರವನ್ನು ಗ್ರಹಿಸಿ ಧ್ಯಾನದ ಮೂಲಕ ನಿಜವಾದ ಪತ್ರಿ, ಪುಷ್ಪ, ಫಲ, ಕಾಯಿಗಳನ್ನು ಸಮರ್ಪಿಸಿ ಜೀವನವನ್ನು ಧನ್ಯ ಮಾಡಿಕೊಳ್ಳಬೇಕು.

## ಪೂಜೆಯಲ್ಲ ಅಂತರ್ಶುದ್ಧಿ ಮುಖ್ಯ!



ಮನುಷ್ಯನ ಮನಸ್ಸು ಪರಿಶುದ್ಧವಾಗದ ಹೊರತು ದೇವಾಲಯಕ್ಕೆ ಬರುವುದರಿಂದ, ಶಿವನನ್ನು ಪೂಜಿಸುವುದರಿಂದ ಫಲಿತವು ಲಭಿಸುವುದಿಲ್ಲ. ಪರಿಶುದ್ಧವಾದ ಮನಸ್ಸಿನಿಂದ ಮಾಡಿದ ಪ್ರಾರ್ಥನೆಗಳಿಗೆ ಶಿವನು ಪ್ರತಿ ಫಲವನ್ನು ಕೊಡುತ್ತಾನೆ. ತಾವು ಅಪವಿತ್ರವಾಗಿದ್ದು, ಇತರರಿಗೆ ಧರ್ಮಬೋಧೆ ಮಾಡುವುದು ವ್ಯರ್ಥ. **ಅಂತರಂಗಶುದ್ಧಿ ಇಲ್ಲದಿದ್ದರೆ ಬಾಹ್ಯ ನಿರರ್ಥಕ.**


ಕಲಿಯುಗದಲ್ಲಿ ಜನರು ತಾವು ಏನು ಮಾಡಿದರೂ ಸರಿ, ಒಂದು ಪುಣ್ಯಕ್ಷೇತ್ರಕ್ಕೆ ಹೋದರೆ, ತಮ್ಮ ಪಾಪಗಳೆಲ್ಲಾ ಹೋಗುತ್ತವೆಂದು ನಂಬುವಷ್ಟು ಅಧೋಗತಿಯಲ್ಲಿ ಬಿದ್ದು ಹೋಗಿದ್ದಾರೆ. ಕಲ್ಮಶ ಹೃದಯದಿಂದ ದೇವಾಲಯದಲ್ಲಿ ಕಾಲಿಟ್ಟವನ ಪಾಪಗಳು ಬೆಳೆದು, ಮತ್ತಷ್ಟು ಪಾಪಿ ಆಗುತ್ತಾನೆ.

ತೀರ್ಥವೆಂದರೆ ಪವಿತ್ರ ವಿಷಯಗಳಿಂದ, ಪವಿತ್ರ ಪುರುಷರಿಂದ ತುಂಬಿದ ಸ್ಥಳವೆಂದು ಅರ್ಥ. ಆದರೆ ಪವಿತ್ರ ಜನರಿರುವ ಸ್ಥಳದಲ್ಲಿ ದೇವಾಲಯವಿಲ್ಲದಿದ್ದರೂ ತೀರ್ಥವೇ ಆಗುತ್ತದೆ. ನೂರು ದೇವಾಲಯಗಳಿರುವ ಸ್ಥಳಕ್ಕೆ ದುಷ್ಟರು ಸೇರಿದರೆ ಅಲ್ಲಿಯ ಪವಿತ್ರತೆ ಅದೃಶ್ಯವಾಗುತ್ತದೆ. **"ತೀರ್ಥ ಕ್ಷೇತ್ರದಲ್ಲಿ, ಮಾಡಿದ ಪಾಪಗಳನ್ನು ತೊಲಗಿಸಿಕೊಳ್ಳಲಾರೆವು."**

ಪರೋಪಕಾರ ಮಾಡುವುದೇ ಪೂಜೆಗಳೆಲ್ಲವುಗಳ ಸಾರ, ದರಿದ್ರನಲ್ಲಿ, ದೀನನಲ್ಲಿ, ರೋಗಿಯಲ್ಲಿ ಶಿವನನ್ನು ನೋಡಬಲ್ಲವನು ನಿಜವಾದ ಶಿವಾರಾಧಕನು. ವಿಗ್ರಹದಲ್ಲಿ ಮಾತ್ರವೇ ಶಿವನನ್ನು ನೋಡುವವನ ಪೂಜೆ, ಪ್ರಾರಂಭ ದೆಸೆಯಲ್ಲಿಯದು ಒಬ್ಬ ದರಿದ್ರನಲ್ಲಿ–ಅವನ ಜಾತಿ, ಮತ, ಕುಲವನ್ನು ನೋಡದೆ–ಶಿವನನ್ನು ನೋಡಿ, ಆತನಿಗೆ ಸಹಾಯಮಾಡಿ. ಉಪಚಾರಗಳನ್ನು ಮಾಡಿದರೆ, ಅವನ ಮೇಲೆಯೇ ಶಿವನಿಗೆ ಹೆಚ್ಚು ಪ್ರೀತಿ ಇರುತ್ತದೆ. ತನ್ನನ್ನು ದೇವಾಲಯದಲ್ಲಿ ಮಾತ್ರವೇ ನೋಡಬಲ್ಲ ಮನುಷ್ಯನ ಮೇಲೆ ದೇವನಿಗೆ ಪ್ರೀತಿ ಇರುವುದಿಲ್ಲ.

**–ಸ್ವಾಮಿ ವಿವೇಕಾನಂದ**

## ಪೂಜೆಗಳು, ವ್ರತಗಳು, ಆರಾಧನೆಗಳು ಆಧ್ಯಾತ್ಮಿಕವಲ್ಲ



ಭಗವಂತನನ್ನು ಪೂಜಿಸುವುದು ಎಂದರೆ ಏನು? ನನಗೆ ಅದು ಬೇಕು! ಇದು ಬೇಕು! ಎಂದು ಕೋರುವುದಲ್ಲ. ಭಗವಂತನನ್ನು ನಾವು ಯಾವ ಕೋರಿಕೆಗಳಿಂದಲೂ ಆರಾಧಿಸಬಾರದು.

**ದೈವತ್ವವೆನ್ನುವುದು ಕೇವಲ ಪೂಜೆಗಳು, ವ್ರತಗಳು, ಆರಾಧನೆಗಳಿಂದ ಲಭಿಸುವುದಿಲ್ಲ. ಯೋಗಗಳು, ಜಪಗಳು, ತಪಗಳು–ಇವೆಲ್ಲವು ಸತ್ಕರ್ಮಗಳು ಮಾತ್ರವೇ. ಇದು ಆಧ್ಯಾತ್ಮಿಕವಲ್ಲ. ಯಾವುದು ಆಧ್ಯಾತ್ಮಿಕತೆ? ಆತ್ಮದೊಡನೆ ಸಂಬಂಧವೇ ನಿಜವಾದ ಆಧ್ಯಾತ್ಮಿಕತೆ.** ಅದನ್ನು ಬಿಟ್ಟು, ತಾತ್ಕಾಲಿಕವಾದ ಜಪಗಳನ್ನು ಯೋಗಗಳನ್ನು ಮಾಡುತ್ತಿದ್ದರೆ ತಾತ್ಕಾಲಿಕವಾದ ಫಲಗಳನ್ನು ಕೊಡುತ್ತಿರುತ್ತವೆ. 'ಆತ್ಮ' ಒಂದೇ ಸತ್ಯವಾದದ್ದು, ನಿತ್ಯವಾದದ್ದು. ಅಂತಹ ಸತ್ಯವಾದ, ನಿತ್ಯವಾದ ಆತ್ಮನನ್ನು "ಧ್ಯಾನಿಸಿದಾಗಲೇ ಸತ್ಯವಾದ, ಶಾಶ್ವತವಾದ ಫಲಗಳು ದೊರೆಯುತ್ತವೆ."

**ಈ ದಿನ ಭಜನೆಗಳನ್ನು ಮಾಡುತ್ತಿದ್ದಾರೆ. ಎಷ್ಟೋ ರಾಗಗಳನ್ನು ಬದಲಾಯಿಸುತ್ತಾ ಇದ್ದಾರೆ. ಆದರೆ ಭಾವವನ್ನೇನಾದರೂ ಬದಲಾಯಿಸಿಕೊಳ್ಳುತ್ತಿದ್ದಾರಾ? ಭಾವವು ಬದಲಾಗದ ಭಜನೆಗಳು ಯಾವುದಕ್ಕಾಗಿ? ಒಳಗೆ ನೋಡಿದರೆ ಪಶುವಿನ ಗುಣಗಳು,** ಮೃಗದ ಗುಣಗಳು, ದುಷ್ಟ ಭಾವಗಳಾಗಲಿ, ಹೊರಗೆ ನೋಡಿದರೆ ನಾಮಸ್ಮರಣೆಗಳು,

ಒಳಗಿನ ಭಾವಗಳು ಎಷ್ಟು ಮಾತ್ರವೂ ಬದಲಾಗುತ್ತಿಲ್ಲ. ಭಾವ ಬದಲಾದಗಲೇ ಭಜನೆಗಳು ಮಾಡಿದ್ದಕ್ಕೆ ಸಾರ್ಥಕತೆ.

ಮನುಷ್ಯರು ಬದಲಾದರೆ ಪ್ರಯೋಜನವಿಲ್ಲ, ಮನಸ್ಸುಗಳು ಬದಲಾಗಬೇಕು. ಮನಸ್ಸುಗಳು ಬದಲಾದಾಗಲೇ 'ಮಾನವತ್ವ'ವೆನ್ನುವುದು ನಮ್ಮಲ್ಲಿ ಅವಿರ್ಭವಿಸುತ್ತದೆ. ನಾವು ಮಾಡುವ ಭಜನೆಗಳು ಕೇವಲ ಬಾಹ್ಯವಾದಂತಹ ರಾಗ, ತಾಳ ಭಾವಗಳಿಂದ ಕೂಡಿಕೊಂಡಿವೆಯಾಗಲಿ, ನಿಜವಾದಂತಹ ಹೃದಯಕ್ಕೆ ಸೇರುತ್ತಿಲ್ಲ. ಈ ವಿಧವಾದ ಭಜನೆಗಳನ್ನು ಎಷ್ಟು ವರ್ಷಗಳು ಮಾಡಿದರೂ ಸಹ ಅದು ಟೇಪು ರಿಕಾರ್ಡ್‌ನಂತೆಯೇ ಇರುತ್ತದೆ.

ಹೃದಯದಲ್ಲಿ ಬದಲಾವಣೆ ಆಗಬೇಕು. ಹೃದಯವು ಪವಿತ್ರವಾದ ಭಾವಗಳಿಂದ ತುಂಬಬೇಕು. ದುಷ್ಟಬಾವಗಳು, ದುಷ್ಟ ಚಿಂತನೆಗಳನ್ನು ಒಳಗೆ ಬರಗೊಡಬಾರದು. ಪವಿತ್ರವಾದ ಭಾವಗಳಿಗೆ ಅವಕಾಶ ಕೊಡಬೇಕು. ಆದ್ದರಿಂದ ಭಜನೆಗಳನ್ನು ಮಾಡುವಂತವರು ಭಾವಗಳನ್ನು ಬದಲಾಯಿಸಿಕೊಳ್ಳಿ.

**ಭಾವಗಳನ್ನು ಬದಲಾಯಿಸಿಕೊಳ್ಳದಂತೆ ಕೇವಲ ಭಜನೆಗಳನ್ನು ಮಾಡುತ್ತಾ ಹೋದರೆ ಎಲ್ಲವೂ ಕೃತಕವಾಗಿಯೇ ಕಾಣಿಸುತ್ತಾ ಇರುತ್ತದೆ.**

ಭಗವಂತನು ಪ್ರೀತಿಗೆ ಮಾತ್ರವೇ ವಶವಾಗುತ್ತಾನೆ. ಅಂತ ಪ್ರೀತಿಯಿಲ್ಲದೆ ಎಷ್ಟು ದಾನಗಳನ್ನು ಮಾಡಿದರೂ ಏನು ಪ್ರಯೋಜನ? ಎಷ್ಟು ಪೂಜೆಗಳನ್ನು ಮಾಡಿದರೂ ಏನು ಪ್ರಯೋಜನ? **"ದೇವರನ್ನು ಪೂಜಿಸುವುದು, ಜೀವಿಗಳನ್ನು ಹಿಂಸಿಸುವುದು ಇದು ಭಕ್ತಿ ಎನಿಸಿಕೊಳ್ಳುವುದಿಲ್ಲ, ಎಲ್ಲಕ್ಕಿಂತಲೂ ಪ್ರೇಮವೇ ಪ್ರಾಣ"** ವಾದ್ದರಿಂದ ಆ ಪ್ರಾಣ ಸ್ವರೂಪವಾದ ಪ್ರೀತಿಯನ್ನು ನಾವು ಹೆಚ್ಚಿಸಿಕೊಳ್ಳಬೇಕು.

ಯಾರನ್ನು ದೂಷಿಸಿದರೂ ಭಗವಂತನನ್ನು ದೂಷಿಸಿದಂತೆಯೇ ಎಂದು ಭಾವಿಸಬೇಕು. ಇದುವೇ ನಿಜವಾದಂತ ಸಾಧುತ್ವವು. ಸಾಧುಗಳು ಅಂದರೆ ಕಾಷಾಯ ವಸ್ತ್ರಗಳನ್ನು ಧರಿಸಿದವರಾ? ಅಲ್ಲ......ಅಲ್ಲ....

ಸಾಧುತ್ವ ಹೊಂದಿದವರೇ ಸಾಧುಗಳು. ಪವಿತ್ರವಾದ ಹರದಯವನ್ನು ಹೊಂದಿರುವಂತಹವರೇ ಸಾಧುಗಳು. ಬಟ್ಟೆಗಳನ್ನು ಬದಲಾಯಿಸಿಕೊಂಡ ಮಾತ್ರಕ್ಕೇ ಸಾಲದು. ಗುಣಗಳನ್ನು ಬದಲಾಯಿಸಿಕೊಳ್ಳಬೇಕು. ಯಾರನ್ನು ಪ್ರೀತಿಸಿದರೂ ಭಗವಂತನನ್ನು ಪ್ರೇಮಿಸಿದಂತೆಯೇ ಎಂದು ಭಾವಿಸಬೇಕು. ಅದೇ ನಿಜವಾದಂತ ಸಾಧುತ್ವವು.

**ಆನಂದವನ್ನು ಕೊಡಬಲ್ಲಂತವನು ಒಬ್ಬ ದೈವ ಮಾತ್ರವೇ. ಅಂತಹ ದೈವ ನಿನ್ನಲ್ಲಿದ್ದರೂ ಕೂಡಾ ಗುರುತಿಸಲಾರದೇ ಹೋಗುತ್ತಿರುವೆ.** ದೇವರು ಸರ್ವತ್ರಾ ಇದ್ದಾನೆ. ಎಲ್ಲಿ ನೋಡಿದರೂ ಇದ್ದಾನೆ. ಭಗವಂತನು ಇಲ್ಲದ ಸ್ಥಾನವಿಲ್ಲ. ಆದ್ದರಿಂದ "Body is the Temple of God" ಎಂದಿದ್ದಾರೆ. ದೈವವೇ ದೇಹವನ್ನು ನಡೆಸುವಂತಹ ಡ್ರೈವರ್. ಅಂತಹ ದೈವವನ್ನು ನಿರ್ಲಕ್ಷಿಸಿ, ದೇಹವೇ ಪ್ರಧಾನವೆಂದು ಭಾವಿಸಿದರೆ ನೀನು ಎಲ್ಲಿಗೆ ಹೋಗಬಲ್ಲೆ?

ನಿಮ್ಮ ಹಿಂದೆ, ಜೊತೆಗೆ, ಮನೆಯಲ್ಲಿ, ಕಣ್ಣಿಗೆ ಇದ್ದು ಕಾಪಾಡುವುದು ದೈವ ಒಂದೇ. ಕಾಪಾಡುವುದು ಬಂಧುಗಳಲ್ಲ. ಅವರು ಬಂದು ಹೋಗುವ ಬಂಧುಗಳು. ಇರುವಷ್ಟು ಕಾಲ ಕಿತ್ತು ತಿನ್ನುತ್ತಾರೆ. ಆದರೆ ದೈವ ಹಾಗಲ್ಲ. ಯಾವಾಗಲೂ ನಿನ್ನಲ್ಲಿ, ನಿನ್ನ ಜೊತೆ ಇರುತ್ತಾ, ನಿನ್ನನ್ನು ಕಾಪಾಡುತ್ತಲೇ ಇರುತ್ತಾನೆ.

ಪಶುಗಳು ಬೆಳೆಯನ್ನು ನೋಡಿದರೆ ಸಾಕು ಅಲ್ಲಿಗೆ ಹೋಗಿ ತಿನ್ನುತ್ತವೆ. ಮನೆಗೆ ಹೋದ ಮೇಲೆ ಜಗಿದು, ತಿರುವಿ ಹಾಕಿ ಜೀರ್ಣಿಸಿಕೊಳ್ಳುತ್ತವೆ. ಅದೇ ವಿಧವಾಗಿ ಅವಕಾಶ ಬಂದಾಗಲೆಲ್ಲಾ "ಪವಿತ್ರವಾದ ವಿಷಯಗಳನ್ನು" ಮೊದಲು ಕೇಳಿಸಿಕೊಳ್ಳಬೇಕು. ಆಮೇಲೆ ಮನೆಗೆ ಹೋಗಿ, ಕೇಳಿದ ವಿಷಯಗಳನ್ನು ಮನನ ಮಾಡಿಕೊಳ್ಳಬೇಕು. ನಂತರ ಆಚರಣೆಯಲ್ಲಿಟ್ಟುಕೊಳ್ಳಬೇಕು. ಆಚರಣೆ ಬಹಳ ಅತ್ಯವಶ್ಯಕ.

**ಶ್ರೀ ಸತ್ಯ ಸಾಯಿಬಾಬಾರವರು (ದಿ. 28–8–1997)**

# ನವವಿಧ ಭಕ್ತರು



ಈ ಕೆಳಗಿನವುಗಳನ್ನು ನವವಿಧ ಭಕ್ತರು ಎಂದು ಹೆಸರಿಸಿದ್ದಾರೆ. ಅವು 1. ಶ್ರವಣ 2. ಮನನ 3. ಕೀರ್ತನೆ 4. ಪಾದ ಸೇವೆ 5. ಅರ್ಚನೆ 6. ವಂದನೆ 7. ದಾಸ್ಯ 8. ಸಖ್ಯ 9. ಆತ್ಮ ನಿವೇದನೆ.

ಮೇಲಿನವುಗಳಲ್ಲಿ ಅತ್ಯಂತ ಮುಖ್ಯವಾದದ್ದು, ಭಗವಂತನಿಗೆ ಪ್ರೀತಿಕರವಾದದ್ದು, ಕೊನೆಯದಾದ 'ಆತ್ಮನಿವೇದನೆ'. ಆತ್ಮನಿವೇದನೆ ಅಂದರೆ 'ತನ್ನನ್ನು ತಾನು ಸಮರ್ಪಿಸಿಕೊಳ್ಳುವುದು.' ಆತ್ಮನಿವೇದನೆಯೇ ಭಗವಂತನನ್ನು ತೃಪ್ತಿಪಡಿಸುವುದು. ಉಳಿದ 8 ರೀತಿಯ ಭಕ್ತರೂ ಕೂಡಾ ಕೊನೆಯದಾದ ಆತ್ಮನಿವೇದನೆಗೆ ಮಾರ್ಗವನ್ನು ತೋರಿಸುವ ಪ್ರಾಥಮಿಕ ಕ್ರಿಯೆಗಳೇ. ಅವು ಮಾಡುವವನಿಗೆ ಮಾತ್ರವೇ ತೃಪ್ತಿಯನ್ನು ಕೊಡುತ್ತವೆ.

ಗಮನಿಸಿದರೆ ಮೊದಲ 8 ರೀತಿಯ ಭಕ್ತರಲ್ಲಿ ಯಾವುದೋ ಒಂದು ಮಾಡುವುದು ಕಾಣಿಸುತ್ತದೆ. ಆದರೆ ಅಸಲು ಏನೂ ಮಾಡದೇ ಇರುವುದೇ ಆತ್ಮನಿವೇದನೆ. ಅದನ್ನೇ ಶಿರಡಿಬಾಬಾರವರು ಕೋರಿಕೊಂಡರು. ಆತನ ಆಲಯಗಳಲ್ಲಿ ನಡೆಯುವ ಕಾರ್ಯಕ್ರಮಗಳ ಅಂತರಾರ್ಥ ಕೂಡಾ ಇದೆ.

ಗಮನಿಸಿದರೆ ಷಿರಡಿಬಾಬಾ ಆಲಯಕ್ಕೆ ಹೋದಾಗ ಮೊಟ್ಟ ಮೊದಲು ಧುನಿಯಲ್ಲಿ ಕೆಲವು ಸಮಿಧೆಗಳನ್ನು ಹಾಕಿ ಉರಿಸುತ್ತಾರೆ. ಆನಂತರ ಆತನ ವಿಗ್ರಹವನ್ನು ದರ್ಶನ ಮಾಡಿಕೊಳ್ಳುತ್ತಾರೆ. ದರ್ಶನದ ನಂತರ, ವಿಭೂತಿಯನ್ನು ಧರಿಸುತ್ತೇವೆ. ಇದು ಬಾಹ್ಯವಾಗಿ ನಮಗೆ ಕಾಣಿಸುವ ಕ್ರಿಯೆಗಳು. ಆದರೆ ಇವೆಲ್ಲಕ್ಕೂ ಅಂತರಾರ್ಥವಿದೆ. ಈ ಕ್ರಿಯೆಗಳಿಂದ ನಮಗೆ ಬಾಬಾ ವಿಗ್ರಹ ದರ್ಶನ, ಮಾಮೂಲು ವಿಭೂತಿ ಮಾತ್ರವೇ ಲಭಿಸುತ್ತದೆ.

ಆದರೆ ಇವುಗಳ ಅಂತರಾರ್ಥವನ್ನು ಗ್ರಹಿಸಿ ಆಚರಿಸಿದವರಿಗೆ ಬಾಬಾ ಅಂದರೆ ಭಗವಂತನ ನಿದರ್ಶನ ಆಗುವುದೇ ಅಲ್ಲದೆ, ನಿಜವಾದ ವಿಭೂತಿ ಜೀವನದಲ್ಲಿ ಲಭಿಸುತ್ತದೆ. ಅದಕ್ಕೆ ಬಾಬಾ ಆತ್ಮ ನಿವೇದನೆಯನ್ನು ಕೋರಿಕೊಂಡಿದ್ದಾರೆ.

ಆತ್ಮನಿವೇದನೆ ಎಂದರೇನು ಎಂದು ತಿಳಿದುಕೊಳ್ಳೋಣ. ಹೂಗಳೂ, ಹಣ್ಣುಗಳಂತಹವು ಯಾವನ್ನು ನಿವೇದಿಸಿದರೂ. ಅವು ಆತ್ಮನಿವೇದನೆಯ ಕೆಳಗೆ ಬಾರದು. ಹಾಗೆಯೇ ಕಣ್ಣು ಮುಚ್ಚಿಕೊಂಡು ಬಾಹ್ಯವನ್ನು ಬಿಟ್ಟರೂ, ಮನಸ್ಸಿನಲ್ಲಿ ಈ ಬಾಹ್ಯ ವಿಷಯಗಳೇ ಕದಲುತ್ತಾ ಇರುತ್ತವೆ. ಮನೆ, ಹೆಂಡತಿ, ಗಂಡ, ಮಕ್ಕಳು, ಸಂಪಾದನೆ, ಧನ, ಪದವಿಗಳು, ಭೋಗ ಭಾಗ್ಯಗಳು, ಸಮಸ್ಯೆಗಳು, ಕೋರಿಕೆಗಳಂತವು ಯಾವುವು ಮನಸ್ಸಿನಲ್ಲಿರುವವು ಮಾತ್ರವೇ ನಿವೇದಿಸಿದಂತಾಗುತ್ತದೆ. ಆದರೆ ಆತ್ಮನನ್ನು ನಿವೇದಿಸಿದಂತಾಗದು.

ಆತ್ಮನನ್ನು ನಿವೇದಿಸಬೇಕೆಂದರೆ ಮನಸ್ಸಿನಲ್ಲಿ ಏನೂ ಇರಬಾರದು. ಮುಖ್ಯವಾಗಿ ಮನಸ್ಸಿನ ಗುಣಗಳಾದ ತಮೋಗುಣ, ರಜೋಗುಣ, ಸಾತ್ವಿಕ ಗುಣಗಳನ್ನು ದಗ್ಧ (ಸುಡುವುದು) ಮಾಡಬೇಕು.

**ಧ್ಯಾನದ ಮೂಲಕ ಆವುಗಳನ್ನು ದಗ್ಧ ಮಾಡಬೇಕೆಂದರೆ ಮೊದಲು ಮನಸ್ಸನ್ನು ನಿಶ್ಚಲ ಮಾಡಿಕೊಳ್ಳಬೇಕು. ನಂತರ ನಿರ್ಮಲ ಮಾಡಿಕೊಳ್ಳಬೇಕು. ಆ ನಂತರ ಮನಸ್ಸು ಶೂನ್ಯವಾಗುತ್ತದೆ.** ಆಗ ಇನ್ನು ಇರುವುದು ಆತ್ಮವೇ. ಅಂತಹ ಸ್ಥಿತಿಯಲ್ಲಿ, ಇರುವುದು ಆತ್ಮವೇ ಆದ್ದರಿಂದ ಆತ್ಮನನ್ನೇ ನಿವೇದಿಸಿದಂತಾಗುತ್ತದೆ. ಅದೇ ಆತ್ಮ ಸಾಕ್ಷಾತ್ಕಾರ, ಭಗವತ್ ಸಾಕ್ಷಾತ್ಕಾರ ಎನ್ನುತ್ತಾರೆ. ಹಾಗೆ ಭಗವಂತನ ನಿಜ ಸಾಕ್ಷಾತ್ಕಾರವನ್ನು ಹೊಂದಿದವರಿಗೆ ನಿಜವಾದ ವಿಭೂತಿ ಲಭಿಸುತ್ತದೆ.

ಭೂತಿ ಅಂದರೆ ಆನಂದ, ವಿಭೂತಿ ಅಂದರೆ ವಿಶೇಷವಾದ ಆನಂದ. ಹಾಗೆ ಭಗವಂತನ ನಿಜದರ್ಶನ ಮಾಡಿಕೊಂಡವರಿಗೆ ಸಮಸ್ತ ದುಃಖಗಳು ನಶಿಸಿ ಜೀವನದಲ್ಲಿ ವಿಶೇಷವಾದ ಆನಂದ ಲಭಿಸುತ್ತದೆ. ಅವರನ್ನೇ ಜೀವನ್ಮುಕ್ತರು ಎನ್ನುತ್ತಾರೆ. ಅಂದರೆ ಜೀವಿಸಿರುವಾಗಲೇ ಸಮಸ್ತ ದುಃಖಗಳಿಂದ ಮುಕ್ತಿಯನ್ನು ಹೊಂದಿದವರು.

ಪರಮ ಶಿವನನ್ನು ವಿಭೂತಿಧಾರಿ ಎನ್ನುತ್ತಾರೆ. ಕಾರಣ ಆತನು ಯಾವಾಗಲೂ ಆನಂದದಲ್ಲಿ ಇರುತ್ತಾನಾದ್ದರಿಂದ.

ಅಷ್ಟೇ ಹೊರತು ವಿಭೂತಿ ಬಳಿದುಕೊಂಡವನು ವಿಭೂತಿಧಾರಿ ಆಗುವುದಿಲ್ಲ. ವಿಶೇಷವಾದ ಆನಂದದಲ್ಲಿ ಇರುವವನೇ ನಿಜವಾದ ವಿಭೂತಿಧಾರಿ. ಆದ್ದರಿಂದ ಬಾಬಾ ಕೋರಿದ ಆತ್ಮನಿವೇದನೆ ಮಾಡಿ ವಿಭೂತಿಯನ್ನು ಅಂದರೆ ವಿಶೇಷವಾದ **ಆನಂದವನ್ನು ಹೊಂದೋಣ. ವಿಭೂತಿಧಾರಿಗಳಾಗೋಣ. ಧ್ಯಾನವನ್ನು ಮಾಡೋಣ. ಷಿರಿಡಿ ಬಾಬಾ ಆಲಯಗಳಲ್ಲಿ ಧ್ಯಾನ ಮಂದಿರಗಳು ಇರುವುದಕ್ಕೆ ಕಾರಣ ಇದೇ.**

ದಗ್ಧ ಮಾಡಬೇಕಾಗಿರುವುದು ಧುನಿಯಲ್ಲಿನ ಸಮಿಧೆಗಳನಲ್ಲ. ಧುನಿಯಲ್ಲಿನ ಸಮಿಧೆಗಳನ್ನು ದಗ್ಧ ಮಾಡಿದರೆ ವಿಗ್ರಹ ದರ್ಶನ ಮಾತ್ರವೇ ಉಂಟಾಗುತ್ತದೆ. ಮಾಮೂಲು ವಿಭೂತಿ ಲಭಿಸುತ್ತದೆ. ಆದರೆ 'ಧ್ಯಾನಧುನಿಯಲ್ಲಿ' ಭಗವಂತನ ನಿಜದರ್ಶನವು ಲಭಿಸುತ್ತದೆ. ನಿಜವಾದ ವಿಭೂತಿ ಅಂದರೆ ವಿಶೇಷವಾದ ಆನಂದ ಲಭಿಸುತ್ತದೆ.

ಏಕೆಂದರೆ ನಮ್ಮ ಗುಣಗಳು ತೊಲಗಿದರೇನೇ ಭಗವಂತನಿಗೆ ಆನಂದ. ಕಾರಣ ಸ್ವಾರ್ಥಗುಣಗಳು ಇಲ್ಲದವನು ಲೋಕಕ್ಕೆ ಉಪಕಾರವನ್ನು ಮಾಡುತ್ತಾನೆ. ಸ್ವಾರ್ಥ ಗುಣಗಳು ಇರುವವನು ಲೋಕಕ್ಕೆ ಅಪಕಾರವನ್ನು ಮಾಡುತ್ತಾನೆ. ಷಿರಿಡಿ ಬಾಬಾ ಕೋರಿಕೊಳ್ಳುವುದು ನಮ್ಮಿಂದ ಲೋಕಕ್ಕೆ ಉಪಕಾರ ಆಗಬೇಕೆಂದೇ. ಆತನು ಯಾವಾಗಲೂ ಎಲ್ಲರಿಗೂ ಎಷ್ಟೋ ರೀತಿಯಲ್ಲಿ ಉಪಕಾರವನ್ನು ಮಾಡುತ್ತಿದ್ದರು. ನಾವೂ ಕೂಡಾ ಹಾಗೇ ಮಾಡಬೇಕೆಂದೇ ಆತನ ಬಯಕೆ. ಎಲ್ಲರಲ್ಲೂ ಸಮಸ್ತ

ಜೀವಿಗಳಲ್ಲೂ ಆತನನ್ನು ನೋಡಬೇಕೆಂಬುದೇ ಆತನ ಬಯಕೆ. ಅದೇ ಆತನಿಗೆ ಆನಂದ.

ಇದೇ ಭಗವದ್ಗೀತೆಯಲ್ಲಿ ಶ್ರೀ ಕೃಷ್ಣ ಭಗವಾನನು ಬೋಧಿಸಿದ್ದು ಕೂಡಾ!

**"ತ್ರೈಗುಣ್ಯಾ ವಿಷಯಾ ವೇದಾ! ನಿಸ್ತ್ರೈಗುಣ್ಯೋ ಭವಾರ್ಜುನ!"**

**(ಭ.ಗೀ. 2-45)**

ತಾತ್ಪರ್ಯ : ಅರ್ಜುನ, ತ್ರಿಗುಣಗಳಿಗೆ ಆತೀತವಾದ ನಿರ್ಗುಣಿಯಾಗು. ಆದ್ದರಿಂದ ಧ್ಯಾನ ಮಾಡಿ ಗುಣಗಳನ್ನು ತೊಲಗಿಸಿಕೊಂಡು ನಿರ್ಗುಣಿಗಳಾಗಿ ಬಾಬಾರವರು ಕೋರಿಕೊಂಡ ಆತ್ಮನಿವೇದನೆ ಮಾಡೋಣ.



ಪೂಜೆ ಮೆಟ್ಟಿಲಲ್ಲ, ಕಂದಕ

**–ಸ್ವಾಮಿ ದಯಾನಂದ ಸರಸ್ವತಿ**

# ಭಗವಂತನಿಗೆ ಸಮರ್ಪಿಸಬೇಕಾದ ಪುಷ್ಪಗಳು!

ಸಾಧಾರಣವಾಗಿ ಎಲ್ಲರೂ ಪೂಜೆಯ ಮೂಲಕ ಭಗವಂತನಿಗೆ ಹೂಗಳನ್ನು ಹಣ್ಣುಗಳನ್ನು ಸಮರ್ಪಿಸುತ್ತಾರೆ. ಆದರೆ ಭಗವಂತನಿಗೆ ಪೂಜೆಯ ಮೂಲಕವೇ ಅಲ್ಲ, ಯಾವ ವಿಧವಾಗಿಯಾದರೂ ಸಮರ್ಪಿಸಬಹುದು. ಕಾರಣ ಭಗವಂತನು ಸರ್ವಾಂತರ್ಯಾಮಿ. ಆತನು ಎಲ್ಲೆಲ್ಲೂ ಇದ್ದಾನೆ. ಎಲ್ಲದರಲ್ಲೂ ಇದ್ದಾನೆ. ಒಂದು ವಿಗ್ರಹದಲ್ಲಿ ಮಾತ್ರ ಅಲ್ಲ, ಲೋಕವೆಲ್ಲಾ ಆತನೇ. ಎಲ್ಲಾ ರೂಪಗಳು ಆತನವೇ.

ಲೋಕದಲ್ಲಿ ಯಾರಿಗೆ ಏನು ಸಮರ್ಪಿಸಿದರೂ ಆತನಿಗೆ ಸಮರ್ಪಿಸಿದಂತೆ. ಒಂದು ರೀತಿಯಲ್ಲಿ ವಿಗ್ರಹಕ್ಕೆ ಸಮರ್ಪಿಸುವವುಗಳಿಗಿಂತ ಲೋಕಕ್ಕೆ ಸಮರ್ಪಿಸಿದವೇ ಆತನಿಗೆ ಸೇರುತ್ತವೆ. ಕಾರಣ ವಿಗ್ರಹಕ್ಕೆ ಸಮರ್ಪಿಸಿದವೆಲ್ಲವೂ ಸಮರ್ಪಿಸಿದವನೇ ತೆಗೆದುಕೊಳ್ಳುತ್ತಾನೆ. ಆದ್ದರಿಂದ ಅದು ಭಗವಂತನಿಗೆ ಕೊಟ್ಟಂತೆ ಅಲ್ಲ. ಆದರೆ ಲೋಕಕ್ಕೆ ಕೊಡುವುದೇ ಭಗವಂತನಿಗೆ ಕೊಟ್ಟಂತೆ.

ವಿಗ್ರಹಕ್ಕೆ ಸಮರ್ಪಿಸಿದ ಹೂಗಳು ಒಂದು ಗಂಟೆಯಲ್ಲಿ ಬಾಡಿ ಹೋಗುತ್ತವೆ. ಗಂಟೆಯಲ್ಲಿ ಬಾಡಿ ಹೋಗುವ ಪುಷ್ಪಗಳನ್ನು ಭಗವಂತನು ಏನು ಮಾಡಿಕೊಳ್ಳುತ್ತಾನೆ? ಅದು ಅಲ್ಲದೇ ಈ ಭೂಮಂಡಲದ ಮೇಲಿರುವ ಸಮಸ್ತವೂ ಆತನವೇ. ಆತನ ಸೃಷ್ಟಿಯೇ. ಆತನವನ್ನು ಆತನಿಗೆ ಕೊಡುವುದರಲ್ಲಿ ಏನು ವಿಶೇಷತೆ ಏನಿದೆ? ಅವು ಆತನಿಗೆ ಆನಂದವನ್ನುಂಟು ಮಾಡುವಂತವೇ ಆಗಿರಬೇಕು. ಅಂತಹ ಹೂಗಳು ಸಮರ್ಪಿಸಬೇಕು. ಆಗಲೇ ಭಗವಂತನು ಆನಂದಿಸುತ್ತಾನೆ. ನಮ್ಮನ್ನು ಅನುಗ್ರಹಿಸುತ್ತಾನೆ.

ಭಗವಂತನಿಗೆ ಆನಂದವನ್ನುಂಟು ಮಾಡುವ ಪುಷ್ಪಗಳು ಬಾಡಿ ಹೋಗಿ, ಕೆಲಸಕ್ಕೆ ಬಾರದಂತವು ಅಲ್ಲ. ಬಾಡದಂತಹ ಲೋಕ ಕಲ್ಯಾಣಕರವಾದ "ಸುಗುಣಗಳೆಂಬ ಪುಷ್ಪಗಳು". ಅಂತಹ ಸುಗುಣಗಳೆಂಬ ಪುಷ್ಪಗಳನ್ನು ಸಮರ್ಪಿಸಬೇಕು. ಅಂದರೆ ಒಳ್ಳೆಯ ಗುಣಗಳನ್ನು ಹೊಂದಿದ್ದು, ಅವುಗಳ ಮೂಲಕ ಲೋಕಕ್ಕೆ ಉಪಕಾರ ಮಾಡಬೇಕು. ಕಾರಣ ಲೋಕವೇ ಭಗವಂತನಾದ್ದರಿಂದ. ಲೋಕಕ್ಕೆ ಉಂಟು ಮಾಡುವ ಆನಂದವು ಭಗವಂತನಿಗೆ ಉಂಟುಮಾಡಿದಂತೆಯೇ. ಅವು ಭಗವಂತನಿಗೆ ಸಮರ್ಪಿಸಿದಂತೆಯೇ. ಆದ್ದರಿಂದ ಗುಣಗಳೆಂಬ ಪುಷ್ಪಗಳನ್ನೇ ಭಗವಂತನಿಗೆ ಇಷ್ಟವಾದವು.

ದೇವರಿಗೆ ಇಷ್ಟವಾದ 8 ಪುಷ್ಪಗಳು.

1. ಅಹಿಂಸೆ 2. ಇಂದ್ರಿಯ ನಿಗ್ರಹ 3. ಸರ್ವಭೂತದಯೆ 4. ಧರ್ಮ 5. ಪ್ರೇಮ 6. ಶಾಂತಿ 7. ಧ್ಯಾನ 8. ಸತ್ಯ

1. ಅಹಿಂಸಾ ಪುಷ್ಪ : ದೇವರನ್ನು ಆರಾಧಿಸಬೇಕೆಂದರೆ ಪ್ರಪ್ರಥಮವಾಗಿ ಅಹಿಂಸಾ ಪುಷ್ಪವನ್ನು ಸಮರ್ಪಿಸಬೇಕು. ದೇವರಿಗೆ ಇಷ್ಟವಾದ ಮೊದಲ ಪುಷ್ಪ ಇದೇ. ಅಂದರೆ ಯಾರನ್ನೂ ಹಿಂಸಿಸಬಾರದು. ಯಾವ ಜೀವಿಯನ್ನು, ಪ್ರಾಣಿಯನ್ನು ಸಾಯಿಸಬಾರದು. ಮಾಂಸ ಭಕ್ಷಣೆ ಮಾಡಬಾರದು.

2. ಇಂದ್ರಯ ನಿಗ್ರಹ ಪುಷ್ಪ : ಹಾಗೆಯೇ ಇಂದ್ರಿಯ ನಿಗ್ರಹವೆಂದರೆ

ಇಂದ್ರಿಯಗಳ ಮೇಲೆ ಹಿಡಿತ ಇರಬೇಕು. ಹಾಗೆ ಇದ್ದರೆ ಮಾಡಬಾರದ ಕೆಲಸಗಳನ್ನು ಮಾಡುವುದಿಲ್ಲ. ಲೋಕಕ್ಕೆ ಕೇಡು ಆಗುವುದಿಲ್ಲ.

3. ಸರ್ವಭೂತ ದಯಾ ಪುಷ್ಪ : ಎಲ್ಲಾ ಪ್ರಾಣಿಗಳ ಬಗ್ಗೆ ದಯೆ, ಕರುಣೆಯಿಂದ ಇರಬೇಕು. ಆಗ ದೇವರನ್ನು ನಮ್ಮ ಮೇಲೆ ದಯೆ ತೋರಿಸಿ ಎಂದು ಕೋರುವ ಅಗತ್ಯವಿಲ್ಲ. ನಮ್ಮ ಕೆಳಗಿನವರಿಗೆ ನಾವು ದಯೆ ತೋರಿದರೆ, ಆ ಮೇಲಿನವರು ನಮ್ಮ ಮೇಲೆ ದಯೆ ತೋರಿಸುತ್ತಾನೆ.

4. ಧರ್ಮ ಪುಷ್ಪ : ಅಂತರಾತ್ಮದಲ್ಲಿ ಭಗವಂತನು ಹೇಳುವ ಧರ್ಮಗಳನ್ನು ಆಚರಿಸಬೇಕು. ಅಂದರೆ ಅಂತರಾತ್ಮದ ಪ್ರಬೋಧನೆಯನ್ನು ಕೇಳಬೇಕು. ಅಂದರೆ ಭಗವಂತನು ಹೇಳಿದಂತೆ ಕೇಳಬೇಕು.

5. ಪ್ರೇಮ ಪುಷ್ಪ : ತನ್ನನ್ನು ತಾನು ಹೇಗೆ ಪ್ರೇಮಿಸಿಕೊಳ್ಳುತ್ತಾನೋ ಎಲ್ಲರನ್ನೂ ಅಂದರೆ ಮಾನವರನ್ನು ಅಲ್ಲದೆ ಎಲ್ಲಾ ಪ್ರಾಣಿಗಳನ್ನು ಹಾಗೇ ಪ್ರೀತಿಸಬೇಕು.

6. ಶಾಂತಿ ಪುಷ್ಪ : ಶಾಂತಿಯುನ್ನು ಹೆಚ್ಚಿಸಬೇಕು. ಅಂದರೆ ಲೋಕದಲ್ಲಿರುವಂತವುಗಳನ್ನು ಶಾಂತಿಯಿಂದ ಜೀವಿಸಲು ಬಿಡಬೇಕು. ಸುಖವಾಗಿರಲು ಬಿಡಬೇಕು. ನಮ್ಮಿಂದ ಯಾರಿಗೂ, ಯಾವ ಪ್ರಾಣಿಗಳಿಗೂ ನಷ್ಟವಾಗಬಾರದು. ಯಾವ ಕಷ್ಟವು ಆಗಬಾರದು. ಆಗಲೇ ಎಲ್ಲಾ ಸುಖವಾಗಿ, ಶಾಂತಿಯಿಂದ ಇರುತ್ತದೆ. ಅಷ್ಟೇ ಹೊರತು “ಲೋಕಾ ಸಮಸ್ತ ಸುಖಿನೋ ಭವಂತು”. ಓಂ ಶಾಂತಿಃ ಶಾಂತಿಃ ಶಾಂತಿಃ ಅಂದರೆ ಸರಿಹೋಗದು.

7. ಧ್ಯಾನ ಪುಷ್ಪ : ಮೇಲಿನ ಗುಣಗಳನ್ನು ಹೊಂದಬೇಕೆಂದರೂ, ಆಚರಿಸಬೇಕೆಂದರೂ ಧ್ಯಾನವನ್ನು ಮಾಡಬೇಕು. ಧ್ಯಾನ ಪುಷ್ಪದಿಂದ ಎಲ್ಲಾ ರೀತಿಯ ಪುಷ್ಪಗಳನ್ನು ಸಂಪಾದಿಸಿಕೊಳ್ಳಬಲ್ಲೆವು ದೇವರಿಗೆ ಸಮರ್ಪಿಸಬಲ್ಲೆವು.

8. ಮಂತ್ರಪುಷ್ಪ : ಮೇಲಿನ ಪುಷ್ಪಗಳನ್ನು ಹೊಂದಿರುವವನು ಸತ್ಯದಲ್ಲಿ ಜೀವಿಸುತ್ತಾನೆ. ಸತ್ಯದಲ್ಲಿ ತಿಳಿದುಕೊಳ್ಳುತ್ತಾನೆ. ಸತ್ಯವನ್ನು ಆಶ್ರಯಿಸುತ್ತಾನೆ. ಜ್ಞಾನವನ್ನು ಹೊಂದುತ್ತಾನೆ. ಆದ್ದರಿಂದ ಅತಿ ಮುಖ್ಯವಾದ ಈ ಪುಷ್ಪಗಳನ್ನೇ ಭಗವಂತನಿಗೆ ಸಮರ್ಪಿಸಬೇಕು. ಈ ಪುಷ್ಪಗಳನ್ನು ಭಗವಂತನು ಅತ್ಯಂತ ಪ್ರೀತಿಯಿಂದ ಸ್ವೀಕರಿಸುತ್ತಾನೆ. ಸ್ವೀಕರಿಸುವುದೇ ಅಲ್ಲ, ಅನುಗ್ರಹಿಸುತ್ತಾನೆ ಕೂಡಾ.

**ಎಲ್ಲರ ಮೌಲಿಕ ಶಕ್ತಿ ಸಾಮರ್ಥ್ಯಗಳು ಅಂತ್ಯವೇ<br>ಇಲ್ಲವೆಂದು ಅರ್ಥಮಾಡಿಕೊಳ್ಳಬೇಕು**

# ಪೂಜೆಯಲ್ಲ ಸೇವೆ ಮುಖ್ಯ

ಭಾರತ ದೇಶದಲ್ಲಿ ತಲೆತಲಾಂತರಗಳಿಂದ ಪೂಜೆಗೆ ಹೆಚ್ಚು ಪ್ರಾಮುಖ್ಯತೆ ಕೊಡಲ್ಪಟ್ಟಿದೆ. ಬಹಳ ಜನ ಪೂಜೆಗೇ ಪ್ರಾಮುಖ್ಯತೆ ಕೊಡುತ್ತಾರೆ.

ಹಾಗೆ ಪೂಜೆಗಳನ್ನು ಮಾಡುತ್ತಾ ಉಳಿದ ವಿಷಯಗಳಿಗೆ ಪ್ರಾಮುಖ್ಯತೆ ಕೊಡುವುದಿಲ್ಲ. ಅಂದರೆ ವರ್ತನೆ, ನಡವಳಿಕೆ, ಗುಣಗಳಿಗೆ ಯಾವುದೇ ಪ್ರಾಮುಖ್ಯತೆ ಕೊಡರು. ಹಾಗೆ ಪೂಜೆಗಳನ್ನು ಮಾಡಿದರೆ ಸಾಕು ಏನಾದರೂ ಮಾಡಿಕೊಳ್ಳಬಹುದು. ಹೇಗಾದರೂ ವರ್ತಿಸಬಹುದೆಂದು ಭಾವಿಸುತ್ತಾರೆ. ಪಾಪಗಳನ್ನು ಕೂಡಾ ಮಾಡಬಹುದೆಂದುಕೊಳ್ಳುತ್ತಾರೆ.

ಸಹಜವಾಗಿ ಪಾಪಗಳನ್ನು ಮಾಡುವುದಕ್ಕೆ ಭಯಪಡಬೇಕು. ಕಾರಣ ಪಾಪಗಳಿಂದ ಜೀವನದಲ್ಲಿ ಭರಿಸಲಾಗದ ರೋಗಗಳು, ದುಃಖಗಳು ಉಂಟಾಗುತ್ತವೆ. ಆದರೆ ಮಾನವರು ಪಾಪಗಳನ್ನು ಮಾಡಲು ಭಯಪಡರು. ಪೂಜೆ ಬಿಡುವುದಕ್ಕೆ ಭಯಪಡುತ್ತಾರೆ. ಪೂಜೆ ಮಾಡದಿದ್ದರೆ ಏನಾಗುತ್ತದೋ ಎಂದು ವಿಪರೀತವಾಗಿ ಭಯಪಡುತ್ತಾರೆ. ಪೂಜೆ ಮಾಡಿದರೆ ಏನು ಮಾಡುವುದಕ್ಕಾದರೂ ಹಿಂಜರಿಯುವುದಿಲ್ಲ. ಧೈರ್ಯವಾಗಿ ಪಾಪಗಳನ್ನು ಮಾಡುತ್ತಾರೆ. ಆ ಪೂಜೆಯನ್ನಾದರೂ ಶ್ರದ್ಧೆಯಿಂದ ಮಾಡುತ್ತಾರಾ? ಅಂದರೆ ಅದೂ ಇರುವುದಿಲ್ಲ.

ಆದರೆ ಆಲೋಚಿಸಿದರೆ ಪೂಜೆಗೆ ದೊಡ್ಡ ಪ್ರಾಮುಖ್ಯತೆ ಇಲ್ಲವೆಂದು ತಿಳಿಯುತ್ತದೆ. ಕಬೀರರು "ಪೂಜೆಯಲ್ಲಿ ಸೇವೆ ಮುಖ್ಯ"ವೆಂದು ಹೇಳಿದ್ದಾರೆ. ಸಣ್ಣ ಉದಾಹರಣೆ ತೆಗೆದುಕೊಳ್ಳೋಣ. ವೃದ್ಧ ದಂಪತಿಗಳಿಗೆ ಇಬ್ಬರು ಗಂಡುಮಕ್ಕಳಿದ್ದಾರೆ. ಅವರಲ್ಲಿ ಒಬ್ಬನು ಪ್ರತಿದಿನ ತಂದೆ ತಾಯಿಗಳಿಗೆ ಪೂಜೆ ಮಾಡುತ್ತಾನೆ ಆದರೆ ನಂತರ ಅವರನ್ನು ಎಷ್ಟು ಮಾತ್ರವೂ ಹಿಡಿಸಿಕೊಳ್ಳುವುದಿಲ್ಲ. ಎರಡನೆಯವನು ಅವರಿಗೆ ಪೂಜೆ ಮಾಡುವುದಿಲ್ಲ ಆದರೆ, ದಿನವೆಲ್ಲಾ ಅವರಿಗೆ ಸೇವೆ ಮಾಡುತ್ತಾನೆ. ಅವರಿಗೆ ಬೇಕಾಗಿರುವ ಎಲ್ಲವನ್ನು ನೋಡಿಕೊಳ್ಳುತ್ತಾನೆ. ಆ ವೃದ್ಧ ತಂದೆ ತಾಯಿಗಳಿಗೆ ಮೊದಲಿನವನ ಪೂಜೆಗಿಂತ, ಎರಡನೆಯವನ ಸೇವೆ ಆನಂದವನ್ನುಂಟು ಮಾಡುತ್ತದೆ. ಕಾರಣ ಪೂಜೆಯಿಂದ ಅವರಿಗೆ ಆಗುವ ಪ್ರಯೋಜನ ಏನು ಇರುವುದಿಲ್ಲ. ಅವಸಾನದ ದೆಸೆಯಲ್ಲಿ ಅವರಿಗೆ ಮಾಡುವ ಸೇವೆಗಳೇ ಅವರಿಗೆ ಎಷ್ಟೋ ಆನಂದವನ್ನುಂಟು ಮಾಡುತ್ತದೆ. ಅವರ ಕೆಲಸಗಳನ್ನು ಅವರು ಮಾಡಿಕೊಳ್ಳಲಾರದ ಸ್ಥಿತಿಯಲ್ಲಿರುವಾಗ, ಎದ್ದಾಗಿನಿಂದ ಮಲಗುವವರೆಗೂ ಅವರಿಗೆ ಬೇಕಾದ ಅವಶ್ಯಕತೆಗಳನ್ನು ತೀರಿಸುವ ಮಗನನ್ನು ನೋಡಿ, ಅವರು ಹೊಂದುವ ಆನಂದಕ್ಕೆ ಪಾರವೇ ಇರುವುದಿಲ್ಲ. ಹಾಗೆ

ಮಾಡಬಲ್ಲ ಎರಡನೇಯುವನೇ ಅವರಿಗೆ ಆನಂದವನ್ನು ಉಂಟು ಮಾಡಿದವನಾಗುತ್ತಾನೆ.

ಹಾಗೆಯೇ ಗೋವುಗಳನ್ನು ಪೂಜಿಸುತ್ತೇವೆ. ಆದರೆ ಪೂಜೆಯಿಂದ ಗೋವಿಗೆ ಲಾಭವೇನೂ ಉಂಟಾಗುವುದಿಲ್ಲ. ಅದರ ಬದಲು ಅದಕ್ಕೆ ಶ್ರದ್ಧೆಯಿಂದ ಸೇವೆ ಮಾಡಿದರೆ, ಅಂದರೆ ಸಮಯಕ್ಕೆ ಆಹಾರ, ನೀರು ಕೊಡುತ್ತಾ, ಅದನ್ನು ಮೃದುವಾಗಿ ನಿಮುರುತ್ತಾ, ಸವರುತ್ತಾ, ಅದು ಇರುವ ಪ್ರದೇಶವನ್ನು ಪರಿಶುಭ್ರವಾಗಿ ಇಡುತ್ತಾ, ಸಮಯಕ್ಕೆ ಏನು ಬೇಕೋ ಅದನ್ನು ಹೊಂದಿಸುತ್ತಾ ಇದ್ದರೆ ಅದು ಎಷ್ಟೋ ಆನಂದಪಡುತ್ತದೆ. ಅಷ್ಟೇ ಹೊರತು ಪೂಜೆಯಿಂದ ಅದಕ್ಕೆ ಯಾವ ಪ್ರಯೋಜನವೂ ಇರುವುದಿಲ್ಲ.

ಹಾಗೆಯೇ ತುಳಸಿ ಗಿಡವನ್ನು ಪೂಜಿಸುತ್ತೇವೆ. ಆದರೆ ನಾವು ಮಾಡುವ ಪೂಜೆಗಿಂತ ನಾವು ಮಾಡುವ ಸೇವೆ ಆ ಗಿಡಕ್ಕೆ ಹೆಚ್ಚು ಪ್ರಯೋಜನ. ಆ ಗಿಡವನ್ನು ಮುರಿಯದಂತೆ, ಸರಿಯಾಗಿ ನೀರು ಹಾಕುತ್ತಾ ಪೋಷಿಸಿದರೆ ಆ ಗಿಡವು ನಿಜವಾಗಿಯೂ ಆನಂದಪಡುತ್ತದೆ. ಅಷ್ಟೇ ಹೊರತು ಪೂಜೆಯಿಂದ ಆ ಗಿಡಕ್ಕೆ ಆಗುವ ಪ್ರಯೋಜನವೇನು ಇಲ್ಲ.

ಮೇಲಿನವುಗಳನ್ನು ಗಮನಿಸಿದರೆ, ಪೂಜೆಗಿಂತ ಸೇವೆ ಎಲ್ಲರಿಗೂ ಆನಂದ ಕೊಡುತ್ತದೆ ಎಂದು ಗ್ರಹಿಸಬಹುದು. ಮಾನವರಾದ ನಾವೇ ಪೂಜೆಗಿಂತ ಸೇವೆಗೆ ಪ್ರಾಮುಖ್ಯತೆಯನ್ನು ಕೊಡುತ್ತಿದ್ದರೆ ಅನಂತಶಕ್ತಿ ಸ್ವರೂಪನಾದ ಭಗವಂತನು ಪೂಜೆಗೆ ಪ್ರಾಮುಖ್ಯತೆ ಕೊಡುತ್ತಾನಾ? ಆದ್ದರಿಂದ ಭಗವಂತನು ಕೂಡಾ ಸೇವೆಗೇಪ್ರಾಮುಖ್ಯತೆಯನ್ನು ಕೊಡುತ್ತಾನೆ. ಮತ್ತೇ ಭಗವಂತನಿಗೆ ಸೇವೆ ಹೇಗೆ ಮಾಡುತ್ತೇವೆ? ಲೋಕಕ್ಕೆ ಮಾಡುವ ಸೇವೆಯೇ ಭಗವಂತನಿಗೆ ಮಾಡುವ ಸೇವೆ. ಏಕೆಂದರೆ ಲೋಕವೇ ಭಗವಂತನಾದ್ದರಿಂದ, ಲೋಕದಲ್ಲಿ ಭಗವಂತನಲ್ಲದ್ದು, ಇಲ್ಲದ್ದು ಎಂಬುದು ಯಾವುದೂ ಇಲ್ಲವಾದ್ದರಿಂದ, ಎಲ್ಲರೂ ಆತನ ಮಕ್ಕಳೇ ಆದ್ದರಿಂದ. ಆದ್ದರಿಂದ ಲೋಕಕ್ಕೆ ಮಾಡುವ ಒಳಿತೇ ಭಗವಂತನಿಗೆ ಆದಂತೆಯೇ.

ಆದ್ದರಿಂದ ಎಲ್ಲರಲ್ಲೂ ಭಗವಂತನನ್ನು ದರ್ಶಿಸುತ್ತಾ ಎಲ್ಲರಿಗೂ ಸೇವೆ ಮಾಡುತ್ತಾ, ಎಲ್ಲರನ್ನು ಆನಂದಪಡಿಸಿದರೆ, ಭಗವಂತನಿಗೆ ಆನಂದವನ್ನು ಉಂಟು ಮಾಡಿದವರಾಗುತ್ತೇವೆ. ಆದ್ದರಿಂದ "ಪೂಜೆಯಿಂದ ಭಗವಂತನಿಗೆ ಆನಂದ ಆಗುವುದಿಲ್ಲ. ಲೋಕಕ್ಕೆ ಸೇವೆ ಮಾಡುವುದರಿಂದಲೇ ಭಗವಂತನಿಗೆ ಆನಂದವುಂಟಾಗುತ್ತದೆ ಎಂದು ತಿಳಿದುಕೊಳ್ಳಬೇಕು.

ಅದಕ್ಕೇ ಸತ್ಯಸಾಯಿ ಬಾಬಾರವರು ಎಲ್ಲರನ್ನು ಪ್ರೀತಿಸುತ್ತಾ, ಎಲ್ಲರಿಗೂ ಸೇವೆ ಮಾಡಿರೆನ್ನುತ್ತಾರೆ, ಅದುವೇ ಆತನಿಗೆ ಆನಂದವೆನ್ನುತ್ತಾರೆ. ಯಾವ ದೇವರಾಗಲಿ ಇದನ್ನೇ ಹೇಳುತ್ತಿದ್ದಾರೆ. ಇದನ್ನೇ ಮಾಡು ಎನ್ನುತ್ತಾರೆ. ಆದ್ದರಿಂದ "ಪೂಜೆಯಲ್ಲಿ ಸೇವೆ ಮುಖ್ಯವೆಂದು" ತಿಳಿದುಕೊಳ್ಳಬೇಕು. ಸೇವೆ ಮಾಡುವುದಕ್ಕೆ ಪ್ರಾಮುಖ್ಯತೆ ಕೊಡಬೇಕು. ಸಹ ಮಾನವರಿಗೆ, ಸಹ ಜೀವಿಗಳಿಗೆ ಸೇವೆ ಮಾಡಬೇಕು. ಭಗವಂತನ ಸ್ವರೂಪರಾಗಿ ಭಾವಿಸಿ ಸೇವೆ ಮಾಡಬೇಕು. ಸಹ ಜೀವಿಗಳನ್ನು, ಪ್ರಾಣಿಗಳನ್ನು ಹಿಂಸಿಸಬಾರದು. ಮಾಂಸ ಭಕ್ಷಣೆ ಮಾಡಬಾರದು.

ಹಾಗೆ ಎಲ್ಲರಲ್ಲೂ ಭಗವಂತನನ್ನು ನೋಡಬೇಕೆಂದರೂ, ಎಲ್ಲರನ್ನೂ ಸಮಾನವಾಗಿ ಭಾವಿಸಬೇಕೆಂದರೂ, ಎಲ್ಲರಿಗೂ ಸೇವೆ ಮಾಡಬೇಕೆಂದರೂ, ಭಗವಂತನನ್ನು ಆನಂದಪಡಿಸಬೇಕೆಂದರೂ, ಒಂದೇ ಮಾರ್ಗ. ಅದೇ "ಶ್ವಾಸದ ಮೇಲೆ ಗಮನ ಧ್ಯಾನ". ಧ್ಯಾನದ ಮೂಕಲವೇ ಈ ಸತ್ಯವನ್ನು ತಿಳಿದುಕೊಳ್ಳಬಲ್ಲೆವು. ಎಲ್ಲರಿಗೂ ಸೇವೆ ಮಾಡಬಲ್ಲೆವು.

## ಭಗವಂತನಿಗೆ ಏಕೆ ನಮಸ್ಕರಿಸಬೇಕು?

ಭಗವಂತನಿಗೆ ಏಕೆ ನಮಸ್ಕರಿಸಬೇಕು? ಎಂದು ಕೇಳಿದರೆ, ಆತನು ಶ್ರೇಷ್ಠನಾದ್ದರಿಂದ ಎಂದು ಕೆಲವರು, ಕೋರಿಕೆಗಳನ್ನು ತೀರಿಸುತ್ತಾನೆ ಎಂದು ಕೆಲವರು, ಕಷ್ಟಗಳಿಲ್ಲದಂತೆ ಮಾಡುತ್ತಾನೆಂದು ಕೆಲವರು, ಪಾಪಗಳನ್ನು ಕ್ಷಮಿಸುತ್ತಾನೆಂದು ಕೆಲವರು, ಹೀಗೆ ತರತರವಾಗಿ ಹೇಳುತ್ತಿರುತ್ತಾರೆ. ಇನ್ನು ಕೆಲವರು ಒಳ್ಳೆಯದು ಮಾಡುತ್ತಾನೆಂದು, ಅನುಗ್ರಹಿಸುತ್ತಾನೆಂದು ಕೂಡಾ ಕಾರಣಗಳನ್ನು ಹೇಳುತ್ತಾರೆ. ಹಾಗೆ ವಿಧವಿಧವಾಗಿ ಹೇಳುತ್ತಾ ಇರುತ್ತಾರೆ. ಆದರೆ ಅದಕ್ಕಿಂತ ಇನ್ನು ಆಲೋಚಿಸರು. ಭಗವಂತನಿಗೆ ನಮಸ್ಕರಿಸಬೇಕು. ಆದರೆ ಏಕೆ? ತಿಳಿಯೋಣ.

ಕೋರಿಕೆಗಳನ್ನು ತೀರಿಸುತ್ತಾನೆಂದು ನಮಸ್ಕರಿಸುತ್ತೇವೆ. ಆದರೆ ಭಗವಂತನು ಕೋರಿದ್ದನ್ನು ಕೊಡುವುದಿಲ್ಲ. ಅರ್ಹತೆಯನ್ನಾಧರಿಸಿ ಕೊಡುತ್ತಾನೆ. ಕೋರಿದ್ದನ್ನೆಲ್ಲಾ ಕೊಡುವಂತಾಗಿದ್ದರೆ ಎಲ್ಲರಿಗೂ ಎಲ್ಲಾ ಇರಬೇಕು. ಮತ್ತೆ ಏಕೆ ಇಲ್ಲ? ಕೋರುವುದು ದೊಡ್ಡ ಕಷ್ಟವಾದ ಕೆಲಸವೇ? ಅರ್ಹತೆ ಸಂಪಾದಿಸಿಕೊಳ್ಳುವುದೇ ಕಷ್ಟ. ಆದ್ದರಿಂದ ನಮಸ್ಕರಿಸಬೇಕಾಗಿರುವುದು ಕೋರಿಕೆಗಳಿಗಾಗಿ ಅಲ್ಲ.

ಅಷ್ಟೇ ಅಲ್ಲ, ಆತನು ಕಷ್ಟಗಳನ್ನು ಕೂಡ ತೊಲಗಿಸಲಾರ. ಕಷ್ಟಗಳು ತೊಲಗಿಸಿಕೊಳ್ಳುವ ಮಾರ್ಗವನ್ನು ತೋರಿಸುತ್ತಾನೆ. ಆತನು ಪಾಪಗಳನ್ನು ಕೂಡಾ ಕ್ಷಮಿಸುವುದಿಲ್ಲ. ಪಾಪಗಳಿಗೆ ಶಿಕ್ಷೆ ಹಾಕಿ, ಪಾಪಗಳನ್ನು ಮಾಡದಂತೆ ಇರುವ ಶಿಕ್ಷಣ ಕೊಡುತ್ತಾನೆ. ಆದ್ದರಿಂದ ಅವುಗಳಿಗಾಗಿ ನಮಸ್ಕರಿಸುವ ಕೆಲಸವಿಲ್ಲ.

ಒಳ್ಳೆಯದು ಮಾಡುತ್ತಾನೆ ಎಂದು ಹೇಳುತ್ತಿರುತ್ತಾರೆ. ಆತನು ನಮಗೇ ಅಲ್ಲ ನಾವು ನಮಸ್ಕರಿಸಿದರೂ, ನಮಸ್ಕರಿಸದಿದ್ದರೂ, ಎಲ್ಲರಿಗೂ ಒಳ್ಳೆಯದನ್ನೇ ಮಾಡುತ್ತಾನೆ. ಅಷ್ಟೇ ಅಲ್ಲ ಆತನು ಏನು ಮಾಡಿದರೂ ನಮ್ಮ ಒಳ್ಳೆಯದಕ್ಕೇ ಎಂದು ಆಲೋಚಿಸಿದರೆ ತಿಳಿಯುತ್ತದೆ. ಆತನು ಯಾರಿಗೂ ಕೇಡನ್ನು ಮಾಡುವುದಿಲ್ಲ. ಏನು ಮಾಡಿದರೂ ಒಳ್ಳೆಯದೇ. ಆತನ ಸೃಷ್ಟಿಯಲ್ಲಿ ಎಲ್ಲಾ ಉತ್ತಮವಾದದ್ದೇ. ಏನಾದರೂ ಕೆಟ್ಟದು ಕಾಣಿಸುತ್ತಿದೆ ಎಂದರೆ ಅದು ಹೊರಗಡೆಯಲ್ಲ. ನಮ್ಮಲ್ಲಿಯ ದೋಷವೇ ನಮಗೆ ಹೊರಗೆ ಕಾಣಿಸುತ್ತದೆ.

ಹಾಗೆ ನಮಸ್ಕರಿಸದಿದ್ದರೆ ಕೋಪಗೊಳ್ಳುತ್ತಾನೆನೋ ಎಂದುಕೊಳ್ಳುತ್ತಾರೆ. ಆತನಿಗೆ ಯಾರ ಮೇಲೂ ಕೋಪವಿರುವುದಿಲ್ಲ, ಅನುಗ್ರಹವು ಇರುವುದಿಲ್ಲ. ಏಕೆಂದರೆ ಆತನು ರಾಗದ್ವೇಷಗಳಿಲ್ಲದವನು. ನಿರ್ಗುಣನು. ಆತನಿಗೆ ಎಲ್ಲಾ ಸಮಾನವೇ. ಎಲ್ಲಾ ಒಂದೇ ಪೂಜೆ ಮಾಡಿದವರನ್ನು ಒಂದು ರಿತಿಯಾಗಿ, ಪೂಜೆ ಮಾಡದವರನ್ನು ಮತ್ತೊಂದು ರೀತಿಯಾಗಿ ನೋಡನು. ಆತನಿಗೆ ಪ್ರತ್ಯೇಕವಾಗಿ ಯಾರ ಮೇಲೆ ಅನುರಾಗವಿರುವುದಿಲ್ಲ. ದ್ವೇಷವು ಇರುವುದಿಲ್ಲ. ಆದ್ದರಿಂದ ಆತನ ಅನುಗ್ರಹಕ್ಕಾಗಿ ನಮಸ್ಕರಿಸಬೇಕಾದ ಕೆಲಸವಿಲ್ಲ.

ಹಾಗೆಯೇ ಆತನು ಏನೋ ಕೊಡುತ್ತಾನೆಂದು, ಕಾಪಾಡುತ್ತಾನೆಂದು, ಉಪಕಾರ ಮಾಡುತ್ತಾನೆಂದು ನಮಸ್ಕಾರ ಮಾಡುತ್ತಿದ್ದೇವೆ. ಆದರೆ ಭಗವಂತನಿಗೆ ನಾವು ನಮಸ್ಕರಿಸಬೇಕಾದದ್ದು ಕೊಡುತ್ತಾನೆಂದು ಅಲ್ಲ–ಕೊಟ್ಟಿದ್ದಾನೆಂದು, ಕಾಪಾಡುತ್ತಾನೆಂದಾಗಲಿ ಅಲ್ಲ, ಕಾಪಾಡುತ್ತಿರುವುದಕ್ಕಾಗಿ, ಉಪಕಾರವನ್ನು ಮಾಡುತ್ತಾನೆಂದು ಅಲ್ಲ–ಉಪಕಾರ ಮಾಡುತ್ತಿರುವುದಕ್ಕಾಗಿ.

ಭಗವಂತನು ನಮಗೆ ಕೊಟ್ಟಿದ್ದನ್ನು ಗುರುತಿಸಲಾರದೇ ಹೋಗುತ್ತಿದ್ದೇವೆ. ಕೊಟ್ಟಿರುವಂತವುಗಳ ಬೆಲೆ ತಿಳಿದುಕೊಂಡರೆ, ಯಾವಾಗಲೋ ನೆನಪು ಬಂದಾಗ ಫೋಟೋ ಕಾಣಿಸಿದಾಗ ಮಾತ್ರವೇ ನಮಸ್ಕರಿಸಿಕೊಳ್ಳುವುದಿಲ್ಲ. ಅನುಕ್ಷಣವು ಭಗವಂತನನ್ನು ಗುರುತಿಟ್ಟುಕೊಳ್ಳುತ್ತೇವೆ. ನಮಸ್ಕರಿಸಿಕೊಳ್ಳುತ್ತೇವೆ. ಕೃತಜ್ಞತೆಗಳನ್ನು ತಿಳಿಸುತ್ತೇವೆ. ಕೊಡು ಎಂದು ಕೇಳುವುದಿಲ್ಲ, ಕೊಡಲಿಲ್ಲವೆಂದು ದುಃಖಿಸುವುದಿಲ್ಲ, ಫೋಟೋಗಳನ್ನು ಬದಲಾಯಿಸುವುದಿಲ್ಲ. ಮತಗಳನ್ನು ಬದಲಾಯಿಸುವುದಿಲ್ಲ.

ಇನ್ನೂ ನಾವು ಈ ಅದ್ಭುತವಾದ ಮಾನವ ಜನ್ಮವನ್ನು ಕೊಟ್ಟಿರುವುದಕ್ಕೆ ನಮಸ್ಕರಿಸಬೇಕು. ಯಾವ ಪ್ರಾಣಿಗೂ ಕೊಡದ ಅವಕಾಶವನ್ನು ನಮಗೆ ಕೊಟ್ಟಿರುವುದಕ್ಕೆ ನಮಸ್ಕರಿಸಬೇಕು. ಅದ್ಭುತವಾದ ಇಂದ್ರಿಯಗಳನ್ನು, ಅವುಗಳಿಂದ ಜೀವನ ಪರ್ಯಂತ ಕೆಲಸ ಮಾಡಬಲ್ಲ ಶಕ್ತಿಯನ್ನು, ಸೃಷ್ಟಿಯಲ್ಲಿನ ಭೋಗಗಳನ್ನು ಅನುಭವಿಸಿ, ಆನಂದಿಸಬಲ್ಲ ಅವಕಾಶವನ್ನು ಕೊಟ್ಟಿದ್ದಕ್ಕೆ ನಮಸ್ಕರಿಸಬೇಕು.

"ಜನ್ಮ ಇಲ್ಲದಂತೆ ಮಾಡಿಕೊಳ್ಳುವುದಕ್ಕೆ ಬೇಕಾದ ಜನ್ಮ ಕೊಟ್ಟಿರುವುದಕ್ಕೆ ನಮಸ್ಕರಿಸಬೇಕು. ಇದು 84 ಲಕ್ಷ ಜೀವರಾಶಿಗಳಲ್ಲಿ ಯಾರಿಗೂ ಇಲ್ಲ. ಒಬ್ಬ ಮಾನವನಿಗೆ ಇದೆ. ಹಾಗೆಯೇ ಯಾವ ಜೀವಿಗೂ ಇಲ್ಲದ ಬುದ್ಧಿವಂತಿಕೆಯನ್ನು ಕೊಟ್ಟಿರುವುದಕ್ಕೆ ನಮಸ್ಕರಿಸಬೇಕು.

ಲೋಕಕ್ಕೆ ಸೇವೆ ಮಾಡುವ ಅವಕಾಶವನ್ನು ಕೊಟ್ಟಿದ್ದಕ್ಕೆ ನಮಸ್ಕರಿಸಬೇಕು. ಎಲ್ಲರಿಗೂ ಒಳ್ಳೆಯದನ್ನೇ ಮಾಡಬಲ್ಲ ಶಕ್ತಿ ಕೊಟ್ಟಿರುವುದಕ್ಕೆ, ಪ್ರಕೃತಿಯ ಮೂಲಕ ನಡೆಯುವ ಘಟನೆಗಳ ಮೂಲಕ, ಪ್ರಕೃತಿಯಲ್ಲಿರುವ ಜೀವಿಗಳ ಮೂಲಕ, ಪಾಠಗಳನ್ನು ಕಲಿಯಲು ಅವಕಾಶವನ್ನು ಕೊಟ್ಟಿದ್ದಕ್ಕೆ, ಅಂತರಾತ್ಮ ರೂಪದಲ್ಲಿ ನಮ್ಮ ಧರ್ಮಗಳನ್ನು ತಿಳಿಸುತ್ತಿರುವುದಕ್ಕೆ, ಆತನ ಶಕ್ತಿಯಿಂದ ಅನುಕ್ಷಣ ಶರೀರದಲ್ಲಿ 200 ಕ್ರಿಯೆಗಳು ಅಂದರೆ ಉಸಿರಾಟ ಕ್ರಿಯೆ, ಜೀರ್ಣಕ್ರಿಯೆಗಳು, ಮುಂತಾದವುಗಳನ್ನು ನಡೆಸುತ್ತಾ, ಜೀವನಪರ್ಯಂತ ಆರೋಗ್ಯವಾಗಿರುವಂತಹ ಅವಕಾಶವನ್ನು ಕಲ್ಪಿಸಿರುವುದಕ್ಕೆ ನಮಸ್ಕರಿಸಬೇಕು.

ಎಲ್ಲವನ್ನು ಸಂಪಾದಿಸಿಕೊಳ್ಳುವ ಶಕ್ತಿಯನ್ನು ಕೊಟ್ಟಿರುವುದಕ್ಕೆ, ಇನ್ನು ನೋಡುವ ಶಕ್ತಿ, ಆಲಿಸುವ ಶಕ್ತಿ, ಮಾತನಾಡುವ ಶಕ್ತಿ, ಕೆಲಸವನ್ನು ಮಾಡುವ ಶಕ್ತಿ, ನಡೆಯುವ ಶಕ್ತಿ, ಆಲೋಚಿಸುವ ಶಕ್ತಿ, ಇನ್ನೂ ಅನೇಕ ಶಕ್ತಿಗಳನ್ನು ಕೊಟ್ಟಿದ್ದಕ್ಕೆ, ನಮಸ್ಕರಿಸಬೇಕು. ನಮಸ್ಕರಿಸಿಕೊಳ್ಳಬೇಕಾದದ್ದು "ಕೊಟ್ಟಿದ್ದಾನೆಂದಾಗಲಿ, ಕೊಡುತ್ತಾನೆಂದು ಅಲ್ಲ. ಕೊಡು ಎಂದೂ ಅಲ್ಲ."

ಕೊನೆಗೆ ಜೀವನ ಸತ್ಯವನ್ನು ತಿಳಿದುಕೊಳ್ಳಬಲ್ಲ. ಧ್ಯಾನವನ್ನು ಮಾಡಬಲ್ಲ ಅವಕಾಶವನ್ನು ಕಲ್ಪಿಸಿರುವುದಕ್ಕೆ ನಮಸ್ಕರಿಸಬೇಕು.

# ದೈವ ಭೀತಿ ಅಲ್ಲ-ಪಾಪ ಭೀತಿ ಇರಬೇಕು

ಸಾಧಾರಣವಾಗಿ ಎಲ್ಲರೂ ದೈವಕ್ಕೆ ಭಯಪಡುತ್ತಾರೆ. ಇದು ಸಮಾಜದಲ್ಲಿ ಎಲ್ಲರಲ್ಲೂ ಇರುವ ಅಭಿಪ್ರಾಯ. ಏಕೆಂದರೆ ದಿನಾಲೂ ಪೂಜೆ ಮಾಡುತ್ತಾ, ಯಾವಾಗಾದರೂ ಒಂದು ದಿನ ಪೂಜೆ ಬಿಟ್ಟರೆ ಎಷ್ಟೋ ಭಯಪಡುತ್ತಾರೆ. ಕಾರಣ ಪೂಜೆ ಮಾಡದಿದ್ದರೆ ದೇವರು ಕೋಪಗೊಳ್ಳುತ್ತಾನೆಂದು ಅವರ ಉದ್ದೇಶ. ಹಾಗೆಯೇ ವಾರ, ವಾರವೂ ಗುಡಿಗೆ ಹೋಗುತ್ತಾರೆ, ಒಂದು ವಾರ ಗುಡಿಗೆ ಹೋಗದಿದ್ದರೆ ಭಯಪಡುತ್ತಾರೆ. ಕಾರಣ ಏನಾದರೂ ಕೇಡು ಆಗುತ್ತದೇನೋ ಎಂಬುದು ಅವರ ಉದ್ದೇಶ. ಯಾರಿಗಾದರೂ ಕಷ್ಟ ಬರುತ್ತದೆನೋ ಎಂದು ಅನುಮಾನಿಸುತ್ತಾರೆ. ಕಾರಣ ಗುಡಿಗೆ ಹೋಗದೆ ಇದ್ದರೆ ದೇವರಿಗೆ ಕೋಪ ಬರುತ್ತದೆಂದು ಭಯ.

ಹಾಗೆ ಎಲ್ಲರೂ ದೇವರಿಗೆ ಭಯಪಡುತ್ತಾ ದೈವ ಭೀತಿಯಿಂದ ಜೀವಿಸುತ್ತಿದ್ದಾರೆ. ಗಮನಿಸಿದರೆ ಎಲ್ಲಾ "ದೇವರಿಗೆ ಭಯಪಡುತ್ತಿದ್ದಾರೆ. ಆದರೆ ಪಾಪಗಳನ್ನು ಮಾಡುವುದಕ್ಕೆ ಮಾತ್ರ ಭಯಪಡರು" ಆದ್ದರಿಂದ ಪಾಪಗಳನ್ನು ಯಥೇಚ್ಛವಾಗಿ, ಧೈರ್ಯವಾಗಿ ಮಾಡುತ್ತಿರುತ್ತಾರೆ. ಗಮನಿಸಿದರೆ ಯಾರಿಗೂ 'ಪಾಪ ಭೀತಿ ಇಲ್ಲ'. ಆದ್ದರಿಂದ ಲೋಕದಲ್ಲಿ ಎಲ್ಲಿ ನೋಡಿದರೂ ಪಾಪವನ್ನು ಮಾಡುವವರೇ ಹೆಚ್ಚಾಗಿ ಇರುತ್ತಾರೆ. ಪಾಪಗಳನ್ನು ಮಾಡುವವರು ಹೆಚ್ಚಾಗಿ ಇರುವುದರಿಂದಲೇ ಮಾನವರು ಇಷ್ಟು ಬಾಧೆಗಳಿಗೆ, ಕಷ್ಟ ನಷ್ಟಗಳಿಗೆ ಗುರಿಯಾಗುತ್ತಿದ್ದಾರೆ.

ಹೆಚ್ಚು ಜನ ಪಾಪಗಳನ್ನು ಮಾಡುತ್ತಿದ್ದಾರೆನ್ನುವುದಕ್ಕೆ ನಿದರ್ಶನ, ಲೋಕವೆಲ್ಲಾ ದುಃಖದಲ್ಲಿ ಇರುವುದೇ. ಯಾರೂ ಪಾಪಗಳನ್ನು ಮಾಡದಿದ್ದರೆ ಲೋಕದಲ್ಲಿ ದುಃಖವೇ ಇರುವುದಿಲ್ಲವಲ್ಲ? ಅಂದರೆ ಯಥೇಚ್ಛವಾಗಿ ಪಾಪಗಳನ್ನು ಮಾಡುತ್ತಿರುವಂತೆ ಅಲ್ಲವೇ? ಪಾಪಭೀತಿ ಇಲ್ಲದಂತೆ ಅಲ್ಲವೇ? ಆದರೆ ಮಾನವರಿಗೆ ಇರಬೇಕಾದದ್ದು "ಪಾಪ ಭೀತಿ". ಆದರೆ ಮಾನವರಿಗೆ ಇರುವುದು 'ದೈವಭೀತಿ'

ಮಾನವನು ದೈವಕ್ಕೆ ಭಯ ಪಡಬೇಕಾದ ಅಗತ್ಯ ಇಲ್ಲವೇ ಇಲ್ಲ. ಕಾರಣ ಎಲ್ಲರೂ ಆತನ ಮಕ್ಕಳೇ ಆದ್ದರಿಂದ. ಆತನಿಗೆ ರಾಗ, ದ್ವೇವಗಳಿರವು. ಅಂದರೆ ಯಾರ ಮೇಲೂ ಅನುರಾಗವು ಇರುವುದಿಲ್ಲ. ಯಾರ ಮೇಲೂ ದ್ವೇಷವೂ ಇರದು. ಆತನಿಗೆ ಎಲ್ಲರೂ ಸಮಾನ. ಪೂಜಿಸುವವರನ್ನು ಒಂದು ರೀತಿಯಾಗಿ, ಪೂಜಿಸದವರನ್ನು ಇನ್ನೊಂದು ರೀತಿಯಾಗಿ ಆತನು ನೋಡುವುದಿಲ್ಲ. ಆತನು 'ಸಾಕ್ಷಿ ಭೂತನು'. ಎಲ್ಲರನ್ನು ಹಾಗೇ ಗಮನಿಸುತ್ತಾ ಇರುತ್ತಾನೆ. ಸೃಷ್ಟಿಯಲ್ಲಿನ ಏರ್ಪಾಟು ಏನೆಂದರೆ ಯಾರಾದರೂ ಒಳ್ಳೆಯದು ಮಾಡಿದರೆ ಒಳ್ಳೆಯದು, ಕೆಟ್ಟದ್ದು

ಮಾಡಿದರೆ ಕೆಟ್ಟ ಫಲಗಳು ಬರುತ್ತವೆ. ಆದ್ದರಿಂದ ಪೂಜೆ ಮಾಡಲಿಲ್ಲವೆಂದು, ಪ್ರಾರ್ಥಿಸಲಿಲ್ಲವೆಂದು ಭಯಪಡಬೇಕಾದ ಕೆಲಸವಿಲ್ಲ. ಅಸಲು ದೇವರಿಗೆ ಭಯಪಡಬೇಕಾದ ಅಗತ್ಯವೇ ಇಲ್ಲ.

ಮಾನವನು ಭಯಪಡಬೇಕಾದದ್ದು ಪಾಪಗಳನ್ನು ಮಾಡುವುದಕ್ಕೆ. ಕಾರಣ ಪಾಪಗಳನ್ನು ಮಾಡಿದರೇನೆ ಕಷ್ಟಗಳು ಬರುತ್ತವೆ. ಹೆಚ್ಚು ಪಾಪಗಳನ್ನು ಮಾಡಿದರೆ ಹೆಚ್ಚು ಕಷ್ಟಗಳು, ಕಡಿಮೆ ಪಾಪಗಳನ್ನು ಮಾಡಿದರೆ ಕಡಿಮೆ ಕಷ್ಟಗಳು, ಎಂತಹ ಪಾಪಗಳನ್ನು ಮಾಡಿದರೆ ಅಂತಹ ಕಷ್ಟಗಳು. ಆದ್ದರಿಂದ ಕಷ್ಟಗಳನ್ನು ತರುವ ಪಾಪಗಳನ್ನು ಮಾಡುವುದಕ್ಕೆ ಭಯಪಡಬೇಕು. ಅಂದರೆ 'ಪಾಪಭೀತಿ' ಇರಬೇಕು. ಆದರೆ ಮಾನವರಿಗೆ 'ದೈವಭೀತಿ' ಹೆಚ್ಚಾಗಿ ಇದೆ.

ಅಸಲು ಮಾನವನು ಮಾಡುವ "ಪೂಜೆಗಳಿಂದ ಭಗವಂತನಿಗೆ ಬರುವ ಲಾಭವೇನು ಇಲ್ಲ. ಪೂಜೆ ಬಿಟ್ಟರೆ ಬರುವ ನಷ್ಟವೇನೂ ಇಲ್ಲ". ಮಾನವನು ಪಾಪ ಮಾಡಿದರೇನೇ ಆತನಿಗೆ ನಷ್ಟ. ಕಾರಣ ಪಾಪವೆಂದರೆ ಲೋಕಕ್ಕೆ ಉಂಟು ಮಾಡುವ ಕಷ್ಟ ನಷ್ಟಗಳು. ಹಾಗೆ ಲೋಕಕ್ಕೆ ಆಗುವ ನಷ್ಟವೇ ಭಗವಂತನಿಗೆ ಉಂಟಾಗುವ ನಷ್ಟ. ಕಾರಣ ಲೋಕವೇ ಭಗವಂತನಾದ್ದರಿಂದ. ಆದ ಕಾರಣ ಮಾನವನಿಗೆ "ಪಾಪಭೀತಿ ಇರಬೇಕು" ಪಾಪವನ್ನು ಮಾಡದವರು ಯಾವುದಕ್ಕೂ ಭಯಪಡುವ ಕೆಲಸವಿಲ್ಲ. ಕಾರಣ ಅವನಿಗೆ ಯಾವ ವಿಧವಾದ ಕಷ್ಟಗಳು ಬರುವುದಿಲ್ಲ. ಆದ್ದರಿಂದ "ದೈವ ಭೀತಿಯಲ್ಲ, ಪಾಪಭೀತಿ ಇರಬೇಕು" ಎಂದು ತಿಳಿದುಕೊಳ್ಳಬೇಕು.

# ದೇವರು ಯಾರು?

**ಶ್ಲೋಕ ॥ ಸತ್ಯಂ ಜ್ಞಾನಮನಂತಂ ಬ್ರಹ್ಮ**
**ಆನಂದೋ ಬ್ರಹ್ಮೇತಿ ವ್ಯಜಾವಾತ್ ॥**

ತಾತ್ಪರ್ಯ : ಸತ್ಯವು, ಜ್ಞಾನವು, ಅನಂತವು, ಆನಂದವು ಈ ನಾಲ್ಕು ಲಕ್ಷಣಗಳು ಇರುವುದೇ ಬ್ರಹ್ಮವು ಅಂದರೆ ದೇವರು. ಇವುಗಳನ್ನು ಸ್ವಲ್ಪ ವಿವರವಾಗಿ ತಿಳಿದುಕೊಳ್ಳೋಣ.

1. ಸತ್ಯವು : ಯಾವ ವೇದಗಳಲ್ಲಿ 'ಸತ್' ಎಂದು ಹೇಳಲ್ಪಡುತ್ತದೋ, ಯಾವುದು ಕಾಲವು ಬದಲಾದರೂ ಬದಲಾವಣೆಯಾಗದೆ ಇರುತ್ತದೋ, ಯಾವ ಎಲ್ಲಾ ಸಂಕಲ್ಪಗಳಿಗೆ ಅಧಿಷ್ಠಾನವಾಗಿ ಇರುವುದೋ ಅದೇ ಸತ್ಯವು.

2. ಜ್ಞಾನವು : ಯಾವುದು ಸ್ವಯಂ ಪ್ರಕಾಶವಾಗಿ, ಯಾವುದು ಸರ್ವ ಪ್ರಕಾಶವಾಗಿ, ಯಾವುದು ಆವರಣರಹಿತವಾಗಿ, ಚಿತ್ ಸ್ವರೂಪವಾಗಿ ಇರುವುದೋ, ಯಾವುದು ಅನಾದಿ, ಅನಂತವಾಗಿ, ನಿರಂತರ ವೃತ್ತಿ ರಹಿತವಾಗಿ, ವೃತ್ತಿಸಾಕ್ಷಿ ಚೈತನ್ಯವಾಗಿ ಇದೆಯೋ ಅದೇ ಜ್ಞಾನವು.

3. ಅನಂತವು : ಯಾವುದಕ್ಕೆ ಹುಟ್ಟು ಸಾವುಗಳಿಲ್ಲವೋ, ಆಕಾಶವಿಲ್ಲವೋ, ಗಡಿಗೆಗಳು ಬೇರಾಯಾದರೂ ಮಣ್ಣು ಒಂದೇ ಎಂಬಂತೆ, ಆಭರಣಗಳು ಬೇರೆಯಾದರೂ ಬಂಗಾರ ಒಂದೇ ಎಂಬಂತೆ, ವಸ್ತ್ರಗಳು ಬೇರೆಯಾದರೂ ನೂಲು ಒಂದೇ ಎಂಬಂತೆ, ಕಾಣಿಸುವ ಪ್ರಪಂಚವೇ ಅಲ್ಲ, ಕಾಣದ ಲೋಕಗಳ ಪರ್ಯಂತ, ಸರ್ವತ್ರಾ ವ್ಯಾಪಿಸಿ, ಸಂಪೂರ್ಣವಾಗಿ ಇರುವ ಆ ಚೈತನ್ಯವೇ ಅನಂತ.

4. ಆನಂದವು : ಸಮುದ್ರದಿಂದ ಏರ್ಪಟ್ಟ ಅಲೆಗಳಿಗೆ, ನದಿಗಳಿಗೆ ಆ ಸಮುದ್ರವೇ ಅಧಿಷ್ಠಾನವಾಗಿ ಇರುತ್ತದೆ. ಹಾಗೆಯೇ ಎಲ್ಲಾ ಜೀವಿಗಳ ಆನಂದಮಯ, ಸುಖ ಸ್ವರೂಪಕ್ಕೆ, ಆ ಬ್ರಹ್ಮನೇ ಅಧಿಷ್ಠಾನವಾಗಿದೆ. ಹಾಗೇ ಎಲ್ಲಾ ಜೀವಿಗಳಿಗೂ ಅಧಿಷ್ಠಾನವಾಗಿ, ನಿತ್ಯವಾಗಿ, ಶುದ್ಧವಾಗಿ, ಅಖಂಡವಾಗಿ, ಅದ್ವೈತವಾಗಿ, ಜ್ಞಾನಾನಂದ ಸ್ವರೂಪವಾಗಿ ಇರುವ ಬ್ರಹ್ಮವೇ ಆನಂದ.

ಇಂತಹ ಲಕ್ಷಣಗಳುಳ್ಳ ಸ್ವರೂಪವೇ ಭಗವಂತನೆಂದು, ಅಂದರೆ ದೇವರೆಂದು ತಿಳಿದುಕೊಳ್ಳಬೇಕು. ಆ ಲಕ್ಷಣಗಳುಳ್ಳದ್ದೇ ಆತ್ಮ. ಅಂದರೆ ಆತ್ಮನೇ ದೇವರು. ಆ ಆತ್ಮವಿರುವ ದೇಹವೇ ದೇವಾಲಯವೆಂದು ಶ್ರೀ ಶಂಕರಾಚಾರ್ಯರು ತಿಳಿಸಿದ್ದಾರೆ. ಅಂದರೆ ಯಾವ ಶಕ್ತಿಯಿಂದ, ಈ ಜಗತ್ತೆಂದರೆ ಸೃಷ್ಟಿ, ಸ್ಥಿತಿ, ಲಯಗಳು ನಡೆಯುತ್ತಿವೆಯೋ, ಸೃಷ್ಟಿಯಲ್ಲಿನ ಸಮಸ್ತ ಲೋಕಗಳಲ್ಲಿ ನಡೆಯುವುದಕ್ಕೆ ಕಾರಣವೋ, ಮೂಲಾಧಾರವೋ, ಆ ಶಕ್ತಿಯೇ ದೇವರು. ಯಾವುದಾದರೆ ಸ್ವಯಂ ಪ್ರಕಾಶವೋ, ಅನಂತಶಕ್ತಿವಂತವೋ ಆ ಚೈತನ್ಯವೇ ದೇವರು.

## ಕೆಳಮಟ್ಟಕ್ಕೆ ಇಳಿದು ವರ್ತಿಸಬೇಡ!

ಲೋಕದಲ್ಲಿ ಗಮನಿಸಿದರೆ ಬಹಳಷ್ಟು ಜನರ ವರ್ತನೆ ಅವರ ಸ್ಥಾಯಿಗೆ ತಕ್ಕಂತೆ ಇರುವುದಿಲ್ಲ. ಸೃಷ್ಟಿಯಲ್ಲಿ ಜೀವರಾಶಿಗಳಿವೆ ಎನ್ನುತ್ತಾರೆ. ಅವರಲ್ಲಿ ಮಾನವನೇ ಉತ್ತಮವಾದವನು ಎನ್ನುತ್ತಾರೆ. ಒಬ್ಬ ಮಾನವನಿಗೇ ಬುದ್ಧಿ ಕೊಡಲ್ಪಟ್ಟಿದೆ ಎನ್ನುತ್ತಾರೆ. ಹಾಗಿರುವಾಗ ಮಾನವನ ವರ್ತನೆ ಎಲ್ಲದಕ್ಕಿಂತಲೂ ಉನ್ನತವಾಗಿರಬೇಕು. ಆದರೆ

ಎಷ್ಟೋ ಸಂದರ್ಭಗಳಲ್ಲಿ ತನ್ನ ಸ್ಥಾಯಿಯನ್ನು ಮರೆತು, ಕೆಳಮಟ್ಟಕ್ಕೆ ಇಳಿದು ವರ್ತಿಸುತ್ತಿರುತ್ತಾನೆ.

ಏಕೆಂದರೆ ಸೃಷ್ಟಿಯಲ್ಲಿನ ಯಾವ ಜೀವಿಯನ್ನು, ಯಾವ ಪ್ರಾಣಿಯನ್ನು ಯಾವ ಜಂತುವನ್ನು ನೋಡಿದರೂ ಅವು ಅವುಗಳ ಸ್ಥಾಯಿಗೆ ತಕ್ಕಂತೆ ವರ್ತಿಸುತ್ತವೆ. ಅವುಗಳ ವರ್ತನೆ ಅವುಗಳ ಸ್ಥಾಯಿಗಿಂತ ಕೆಳಗಿಳಿಯದು.

ಉನ್ನತವಾದ ಮಾನವನೇ ಅವನ ಸ್ಥಾಯಿಗಿಂತ ಕಡಿಮೆಯಾದ ಪಶುಗಳಂತೆ ವರ್ತಿಸುತ್ತಿರುತ್ತಾನೆ. ಅದಕ್ಕೆ ಮಾನವರ ವರ್ತನೆ ಕೀಳು ಮಟ್ಟದ್ದು ಆದಾಗ ಕೆಳಸ್ಥಾಯಿಯಲ್ಲಿರುವ ಪಶುಗಳೊಂದಿಗೆ ಹೋಲಿಸಿ ಬಯ್ಯುತ್ತಿರುತ್ತಾರೆ, ಗದರಿಸುತ್ತಾರೆ. ಆದರೆ ಯಾವ ಪ್ರಾಣಿಯನ್ನೂ ಹಾಗೆ ಗದರಿಸುವುದಿಲ್ಲ, ಬಯ್ಯುವುದಿಲ್ಲ. ಅದಕ್ಕೆ ಕಾರಣ ಅವು ಅವುಗಳ ಸ್ಥಾಯಿಗೆ ತಕ್ಕಂತೆ ವರ್ತಿಸುವುದೇ.

ಗಮನಿಸಿ ಯಾರಾದರೂ ತನ್ನ ಕೆಲಸಗಳನ್ನು ಮಾಡಿಕೊಳ್ಳದಂತೆ ಊರೆಲ್ಲಾ ತಿರುಗುತ್ತಿದ್ದರೆ, ಏನೋ ಅಡ್ಡ ಕತ್ತೆಯಂತೆ ತಿರುಗುತ್ತಿರುವೆ ಎಂದು, ಕತ್ತೆಯೊಂದಿಗೆ ಹೋಲಿಸುತ್ತಾರೆ. ಅದೇ ಕೆಲಸವಾಗಿ ತಿನ್ನುತ್ತಿದ್ದರೆ, ಹಂದಿಯಂತೆ ತಿನ್ನುತ್ತಿರುವೆ ಎಂದು ಹಂದಿಯ ಜೊತೆಗೆ ಹೋಲಿಸುತ್ತಾರೆ. ಚೆನ್ನಾಗಿ ತಿಂದು ಬಲಿತರೆ ಕೋಣದಂತೆ ಬಲಿತಿರುವೆ ಎಂದು ಕೋಣಕ್ಕೆ ಹೋಲಿಸುತ್ತಾರೆ. ವಿಭಿನ್ನ ವೇಷಗಳನ್ನು ಹಾಕುತ್ತಿದ್ದರೆ ಏನಿದು ಕೋತಿ ಚೇಷ್ಟೆಗಳು? ಎಂದು ಕೋತಿಯೊಂದಿಗೆ ಹೋಲಿಸುತ್ತಾರೆ. ಖಾಲಿಯಾಗಿ ಸುಮ್ಮನೆ ಕುಳಿತುಕೊಂಡರೆ, ಹಾಗೇ ಸುಮ್ಮನೆ ಮೆಲ್ಲಗೆ ಅರಚುತ್ತಿದ್ದರೆ. ಏನು ಬೆಕ್ಕಿನ ಕೂಗು? ಗಟ್ಟಿಯಾಗಿ ಅರಚುತ್ತಿದ್ದರೆ ನಾಯಿಯಂತೆ ಬೊಗಳುತ್ತಿರುವೆ? ಚೆನ್ನಾಗಿ ಶರೀರವನ್ನು ಬೆಳೆಸಿದರೆ ಆನೆಯಂತೆ ತಯಾರಾಗಿರುವೆ ಎನ್ನುತ್ತಾರೆ.

ಹಾಗೆ ಮಾನವನ ವರ್ತನೆ ಕೆಳಗಿಳಿದಾಗ, ಪ್ರಾಣಿಗಳೊಡನೆ ಹೋಲಿಸುತ್ತಾರೆ. ಅಂದರೆ ಮಾನವನು ತನ್ನ ಸ್ಥಾಯಿಗಿಂತ ಕೆಳಜಾರಿ ವರ್ತಿಸುತ್ತಿದ್ದಂತೆ ಅಲ್ಲವೇ? ಗಮನಿಸಿರಿ, ಮಾನವನನ್ನೇ ಬಯ್ಯುತ್ತಾರೆ. ಆದರೆ ಯಾವ ಪ್ರಾಣಿಯನ್ನು ಬೈಯ್ಯುವುದಿಲ್ಲ. ಒಂದು ಹಸುವನ್ನು ಹಂದಿಯಂತೆ ಅಶುದ್ಧವನ್ನು ತಿನ್ನುತ್ತಿರುವೆ ಎಂದು ಬೈಯ್ಯರು. ಕಾರಣ ಹಸುವು ಆ ಕೆಲಸವನ್ನು ಮಾಡದು. ಹಾಗೆಯೇ ಕುದುರೆಯನ್ನು ಎತ್ತಿನಂತೆ ನಡೆಯುತ್ತಿರುವೆ ಎಂದು ಬೈಯುವುದಿಲ್ಲ. ಕಾರಣ ಅದು ಆ ಕೆಲಸ ಮಾಡದು. ಯಾವಾಗಲೂ ಅದರ ವೇಗವೇ ವೇಗ. ಇನ್ನು ಮಾನವನೇ ಜೀನವನ್ನು ಹಾಕುತ್ತಾನೆ. ಇನ್ನು ಶಾಖಾಹಾರ ಪ್ರಾಣಿಗಳಾದ ಹಸು, ಎತ್ತು, ಮೇಕೆ, ಆನೆ ಮುಂತಾದವು ಅವುಗಳಿಗೆ ಆಹಾರವಿಲ್ಲದಿದ್ದರೆ ಎಷ್ಟು ದಿನಗಳವರೆಗಾದರೂ ಸರಿ ಕುಗ್ಗಿ, ಕೃಷಿಸಿ,

ಸಾಯುವುದಕ್ಕಾದರೂ ಸಿದ್ಧವಾಗುತ್ತವೆ, ಆದರೆ ಮಾಂಸವನ್ನು ಮುಟ್ಟುವುದಿಲ್ಲ. ಅವು ಅವುಗಳ ಸ್ಥಾಯಿಗೆ ತಕ್ಕಂತೆ ವರ್ತಿಸುತ್ತವೆ. ಭಗವಂತನ ನಿರ್ಣಯಕ್ಕೆ ಅನುಗುಣವಾಗಿ ವರ್ತಿಸುತ್ತವೆ. ಆವುಗಳ ಶರೀರ ಶಾಖಾಹಾರಕ್ಕೆ ನಿರ್ಮಿತವಾದ್ದರಿಂದ ಶಾಖಾಹಾರವನ್ನೇ ತಿನ್ನುತ್ತವೆ. ಆದರೆ ಮಾನವನು ತನ್ನ ದೇಹವು ಶಾಖಾಹಾರಕ್ಕೆ ನಿರ್ಮಿತವಾದರೂ ಕೂಡಾ ಮಾಂಸಾಹಾರವನ್ನು ಸೇವಿಸುತ್ತಾ ಹಿಂಸೆ ಮಾಡುತ್ತಿದ್ದಾನೆ. ತನ್ನ ಸ್ಥಾಯಿಗೆ ತಕ್ಕಂತೆ ವರ್ತಿಸುತ್ತಿಲ್ಲ.

ಮತ್ತೆ ಮಾನವನು ಏಕೆ ಪ್ರಾಣಿಗಳೊಂದಿಗೆ ಹೋಲಿಸಲ್ಪಡುತ್ತಿದ್ದಾನೆ? ಮುಖ್ಯವಾಗಿ ಮಾನವನು ತನಗೆ ಕೊಡಲ್ಪಟ್ಟ ಬುದ್ಧಿಯನ್ನು, ಅಂದರೆ ಅರಿವನ್ನು ಉಪಯೋಗಿಸದೇ ಹೋಗಿರುವುದು. ಆಲೋಚಿಸಬಲ್ಲ ಶಕ್ತಿ ಇದ್ದು, ಏನೂ ಆಲೋಚಿಸದೇ ಮೂಢನಾಗಿ, ಮೂರ್ಖತನದಿಂದ ವರ್ತಿಸುವುದೇ ಅಲ್ಲದೇ, ಅಜ್ಞಾನದ ಹಿರಿಯರನ್ನು, ಸಮಾಜವನ್ನು ಅನುಕರಿಸುವುದೇ ಮಾನವನು ಕೆಳಮಟ್ಟಕ್ಕೆ ಇಳಿದು ವರ್ತಿಸುವುದಕ್ಕೆ ಕಾರಣ.

ಮಾನವನು ಪ್ರತಿ ವಿಷಯದಲ್ಲೂ ಮೂಢನಾಗಿ ಆಲೋಚಿಸುತ್ತಾ ಬರುತ್ತಿದ್ದಾನೆ. ಅಂದರೆ ಯಾವ ಕೆಲಸವನ್ನಾಗಲಿ ತಾನು ಆಲೋಚಿಸಿ, ಒಳ್ಳೆಯದು ಕೆಟ್ಟದನ್ನು ವಿಶ್ಲೇಷಿಸಿ ತನಗೆ ಪ್ರಯೋಜನವಾಗುತ್ತದಾ? ತನ್ನ ಉನ್ನತಿಗೆ ಸಹಕರಿಸುತ್ತಿದೆಯೇ? ಎಂದು ನೋಡನು. ತನಗೆ ಪ್ರಯೋಜನಕ್ಕೆ ಒದಗಿ ಬರದಿದ್ದರೂ ತಲೆ ತಲಾಂತರಗಳಿಂದ ಆಚಾರವಾಗಿ ಬರುತ್ತಿದೆ ಎಂದು ಆಚರಿಸುತ್ತಾನೆ. ಎಲ್ಲರೂ ಆಚರಿಸುತ್ತಾರೆಂದು ಆಚರಿಸುತ್ತಾನೆ. ಹಿರಿಯರು, ಪಂಡಿತರು ಹೇಳಿದ್ದಾರೆಂದು ಆಚರಿಸುತ್ತಾನೆ. ಆದರೆ ತನ್ನ ಬುದ್ಧಿಯನ್ನು ಉಪಯೋಗಿಸನು. ಆದ್ದರಿಂದಲೇ ಜೀವನದಲ್ಲಿ ಕಷ್ಟಗಳ ಪಾಲಾಗುತ್ತಿದ್ದಾನೆ.

ಬುದ್ಧಿಯನ್ನು ಉಪಯೋಗಿಸುವವನು ಉನ್ನತವಾಗಿ ವರ್ತಿಸುತ್ತಾನೆ. ಬುದ್ಧಿಯನ್ನು ಉಪಯೋಗಿಸದವನು ಕೆಳಮಟ್ಟಕ್ಕೆ ಇಳಿದು ವರ್ತಿಸುತ್ತಾನೆ. ಮತ್ತೆ ಬುದ್ಧಿಯನ್ನು ಉಪಯೋಗಿಸಬೇಕೆಂದರೂ, ಬುದ್ಧಿ ವಿಕಸಿಸಬೇಕೆಂದರೂ, ಕೆಳಮಟ್ಟಕ್ಕೆ ಇಳಿದು ವರ್ತಿಸದಂತೆ ಇರಬೇಕೆಂದರೂ ಪ್ರತಿಯೊಬ್ಬರೂ ಧ್ಯಾನವನ್ನು ಮಾಡಬೇಕು. ಧ್ಯಾನ ಮಾಡಿದಂತೆಲ್ಲಾ ಪ್ರತಿ ಮಾನವನು ಉನ್ನತವಾಗಿ ವರ್ತಿಸುತ್ತಾನೆ. ಮಹಾತ್ಮರಂತೆ ವರ್ತಿಸುತ್ತಾನೆ. ಶ್ರೇಷ್ಠನಾಗಬಲ್ಲನು. ಕೆಳಮಟ್ಟಕ್ಕೆ ಇಳಿದು ವರ್ತಿಸನು.

**ಹೆಚ್ಚಾಗಿ ಕೇಳಿ ಕಡಿಮೆಯಾಗಿ ಮಾತನಾಡಬೇಕು**

**ಪತ್ರೀಜಿ.**

# ಭಗವಂತನು ವಿಗ್ರಹದಲ್ಲಿ ಇದ್ದಾನಾ?

ತಲೆಮಾರುಗಳಿಂದ ಲೋಕದಲ್ಲಿ ವಿಗ್ರಹಾರಾಧನೆ, ಫೋಟೋಗಳ ಆರಾಧನೆ ಆಚಾರವಾಗಿ ಬರುತ್ತಿದೆ. ವಿಗ್ರಹಾರಾಧನೆಯನ್ನೇ ಭಗವದಾರಾಧನೆಯೆಂದು ಭಾವಿಸುತ್ತಾ ಇದ್ದಾರೆ. ಹಾಗೆ ಮಾಡುತ್ತಾ ಕಷ್ಟಗಳನ್ನು, ಸಮಸ್ಯೆಗಳನ್ನು, ರೋಗಗಳನ್ನು ವಾಸಿ ಮಾಡಿಕೊಳ್ಳಬಹುದೆಂದು ಕೂಡಾ ಭಾವಿಸುತ್ತಿದ್ದಾರೆ. ತಲೆಮಾರುಗಳಿಂದ ಆಚಾರವಾಗಿ ಬರುತ್ತಿರುವುದರಿಂದ ಭಗವಂತನನ್ನು ಆರಾಧಿಸುವ ಸರಿಯಾದ ಮಾರ್ಗವು ಅದೇಯೆಂದು ಭಾವಿಸುತ್ತಿದ್ದಾರೆ. ತಮ್ಮ ಕೋರಿಕೆಗಳು ನೆರವೇರದಿದ್ದರೂ ತಪ್ಪದೇ ಯಾವಾಗಲೋ ಒಮ್ಮೆ ಭಗವಂತನು ನೆರವೇರಿಸುತ್ತಾನೆಂದು ನಂಬುತ್ತಿದ್ದಾರೆ. ನಂಬಿಕೆಯಿಂದ ಎಷ್ಟು ಕಾಲವಾದರೂ ಎದುರು ನೋಡುತ್ತಿದ್ದಾರೆ.

ವಿಗ್ರಹಾರಾಧನೆ ಭಗವದಾರಾಧನೆ ಹೇಗಾಗುತ್ತದೆ? ಭಗವಂತನಿಗೆ ನಾಮರೂಪಗಳಿಲ್ಲವಲ್ಲ? ಎಂದು ಕೇಳಿದರೆ ಭಗವಂತನಿಗೆ ರೂಪವಿಲ್ಲ, ರೂಪವಿಲ್ಲದ ಭಗವಂತನನ್ನು ಆರಾಧಿಸಲು ಸಾಧ್ಯವಾಗದು, ಆದರೆ ಎಲ್ಲಾ ರೂಪಗಳು ಆತನವೇ, ಯಾವ ರೂಪವನ್ನು ಆರಾಧಿಸಿದರೂ ಭಗವಂತನನ್ನು ಆರಾಧಿಸಿದಂತೆಯೇ. ಆದ್ದರಿಂದ ನಿನಗೆ ಇಷ್ಟವಾದ ರೂಪವನ್ನು ಆರಾಧಿಸಿಕೋ ಎಂದು ಹಿರಿಯರು ಹೇಳಿದ್ದಾರೆ ಅಲ್ಲವೇ? ಎನ್ನುತ್ತಾರೆ. ಹಾಗೆಯೇ ಆತನಿಗೆ ಹೆಸರಿಲ್ಲವಾದ್ದರಿಂದ ಯಾವ ಹೆಸರಿನಿಂದ ಕೂಗಿದರೂ ಮಾತನಾಡುತ್ತಾನೆ ಎಂದು ಹೇಳುತ್ತಾರೆ.

ಹಾಗೆ ಹೇಳಿ ಸರಿ ಮಾಡಿಕೊಳ್ಳುತ್ತಾರೆ. ತಾವು ಮಾಡುತ್ತಿರುವ ಕೆಲಸ ಸರಿಯಾದದ್ದೆಂದುಕೊಳ್ಳುತ್ತಾರೆ. ತಾವು ಭಗವಂತನನ್ನು ಆರಾಧಿಸುತ್ತಿದ್ದೇವೆಂದು–ಕೊಳ್ಳುತ್ತಾರೆ. ಆದರೆ ನಾಮರೂಪಗಳಿಲ್ಲದ ಭಗವಂತನನ್ನು ಆರಾಧಿಸುವ ಅವಕಾಶವಿದೆಯೇ? ಇಲ್ಲವೇ? ಎಂದು ಆಲೋಚಿಸರು, ತಮ್ಮ ಬುದ್ಧಿಯನ್ನು ಉಪಯೋಗಿಸರು.

ಎಷ್ಟು ಹೊತ್ತೂ ಭಗವಂತನೆಂದರೆ ಕೋರಿಕೆಗಳನ್ನು ತೀರಿಸುವವನೆನ್ನುವಂತೆ ಭಾವಿಸುತ್ತಿದ್ದಾರೆ. ವಿಗ್ರಹ ಕಾಣಿಸಿದರೂ, ಫೋಟೋ ಕಾಣಿಸಿದರೂ ಕೋರಿಕೆಗಳನ್ನು ಕೋರುತ್ತಿರುತ್ತಾರೆ. ಅಷ್ಟೇ ಹೊರತು ಆ ಭಗವಂತನನ್ನು ಕುರಿತು, ಆತನ ಶಕ್ತಿಯನ್ನು ಕುರಿತು, ಆತನ ಸಿದ್ಧಾಂತಗಳನ್ನು ಕುರಿತು ತಿಳಿದುಕೊಳ್ಳುವುದಕ್ಕೆ ಪ್ರಯತ್ನಿಸರು. ನಾಮರೂಪಗಳಿಲ್ಲದ ಭಗವಂತನನ್ನು ಹೇಗೆ ಆರಾಧಿಸಬೇಕೆಂದು ತಿಳಿದುಕೊಳ್ಳರು, ತಿಳಿದುಕೊಳ್ಳುವುದಕ್ಕೆ ಪ್ರಯತ್ನಿಸರು.

ಗಾಂಧೀಯವರ ಫೋಟೋವನ್ನು ತೋರಿಸುತ್ತಾ ಗಾಂಧಿಯವರ ಫೋಟೋ ಎನ್ನುತ್ತೇವಾಗಲಿ, ಗಾಂಧೀಯವರು ಅನ್ನುವುದಿಲ್ಲ? ಹೋಗಿ ಹಸ್ತಲಾಘವ ಕೊಡಲಾರೆವಲ್ಲ? ಆತನ ವಿಗ್ರಹವನ್ನು ಕೂಡಾ, ವಿಗ್ರಹವೇ ಅನ್ನುತ್ತೇವೆ. ಆದರೆ ಗಾಂಧಿಯವರು ಅನ್ನುವುದಿಲ್ಲವಲ್ಲ? ಹಾಗೆಯೇ ಭಗವಂತನ ವಿಗ್ರಹವು ಭಗವಂತನು ಹೇಗಾಗುತ್ತಾನೆ? ಎಂದು ಕೇಳಿದರೆ ಭಗವಂತನು ಸರ್ವಾಂತರ್ಯಾಮಿ ಅಲ್ಲವೇ? ಎಲ್ಲದರಲ್ಲೂ ಇದ್ದಂತೆಯೇ ಅಲ್ಲವೇ? ಹಾಗೇ ವಿಗ್ರಹದಲ್ಲೂ ಕೂಡಾ ಭಗವಂತನು ಇರುತ್ತಾನಲ್ಲ? ವಿಗ್ರಹವನ್ನು ಆರಾಧಿಸಿದರೆ ಭಗವಂತನನ್ನು ಆರಾಧಿಸಿದಂತೆಯೇ ಅಲ್ಲವೇ? ವಿಗ್ರಹವನ್ನು ಆರಾಧಿಸಿದರೆ ತಪ್ಪೇನು? ಎಂದು ಹೇಳುತ್ತಾರೆ.

ಅಷ್ಟರವರೆಗೇ ಆಲೋಚಿಸುತ್ತಾರೆ. ಆದರೆ ಆಲೋಚಿಸಬೇಕಾದದ್ದು ಇನ್ನೂ ಇದೆ. ಇಲ್ಲಿ ವಿಗ್ರಹದಲ್ಲಿ ಭಗವಂತನಿದ್ದಾನೆ ಎನ್ನುವುದು ವಾಸ್ತವವೇ ಅಂದರೆ ಭಗವಂತನು ವಿಗ್ರಹದಲ್ಲಿ ಇದ್ದಾನೆ. ಆದರೆ ವಿಗ್ರಹವು ಭಗವಂತನಲ್ಲವಲ್ಲವೇ?

ಆದರೆ ಎಲ್ಲರ ವರ್ತನೆ ವಿಗ್ರಹದಲ್ಲಿ ಭಗವಂತನಿರುವಂತೆ ಇರುವುದಿಲ್ಲ. ವಿಗ್ರಹವೇ ಭಗವಂತನೆಂಬುವಂತೆ ಇರುತ್ತದೆ. ಅಂದರೆ ವಿಗ್ರಹದ ಎದುರಿಗೆ ಪವಿತ್ರವಾಗಿರುತ್ತಾರೆ. ಅಂದರೆ ಆಲಯದಲ್ಲಿಯೇ ಪವಿತ್ರವಾಗಿ ಇರುತ್ತಾರೆ. ನಂತರ ಎಲ್ಲಿ ಯಾರನ್ನೂ ನೋಡಿದರೂ ಆ ಪವಿತ್ರತೆ ಕಾಣಿಸುವುದಿಲ್ಲ.

ಮೇಲಾಗಿ, ವಿಗ್ರಹದಲ್ಲಿ ಭಗವಂತನಿಲ್ಲವೇ? ಎಂದು ಪ್ರಶ್ನಿಸುತ್ತಾರೆ. ಹಾಗೆ ಪ್ರಶ್ನಿಸುವವರು ಆಲೋಚಿಸಬೇಕು ಭಗವಂತನು ವಿಗ್ರಹದಲ್ಲಿಯೇ ಇರುತ್ತಾನಾ? ಎಲ್ಲದರಲ್ಲೂ ಇರುತ್ತಾನಲ್ಲ? ಯಾವುದರಲ್ಲಿ ಇಲ್ಲ? ಹಾಗಿರುವಾಗ ನಾವು ಎಲ್ಲವನ್ನೂ ಪವಿತ್ರವಾಗಿ ನೋಡಬೇಕಲ್ಲವೇ? ನೋಡುತ್ತಿದ್ದೇವೆಯೇ? ಎಲ್ಲವನ್ನೂ ಆರಾಧಿಸಬೇಕಲ್ಲವೇ? ಆರಾಧಿಸುತ್ತಿದ್ದೇವೆಯೇ?

ನಾವು ಒಂದು ವಿಗ್ರಹವನ್ನು ಬಿಟ್ಟು, ಯಾವುದನ್ನೂ ಭಗವಂತನಂತೆ ಭಾವಿಸುವುದಿಲ್ಲ, ಪವಿತ್ರವಾಗಿ ನೋಡೆವು. ಆದರೆ ಕುರ್ಚಿಯಲ್ಲಿ, ಮಂಚದಲ್ಲಿ ಎಲ್ಲದರಲ್ಲು ಇರುವಂತೆಯೇ ಅಲ್ಲವೇ? ಮತ್ತೇ ಭಗವಂತನ ಮೇಲೆ ಹೇಗೆ ಕುಳಿತುಕೊಳ್ಳಬಲ್ಲವರಾಗಿದ್ದೇವೆ? ಆತನನ್ನು ಅವಮಾನಿಸಿದಂತಲ್ಲವೇ? ಆತನನ್ನು ಬಾಧಿಸುತ್ತಿರುವಂತೆ ಅಲ್ಲವೇ?

ಹಾಗೆಯೇ ಒಂದು ಕಲ್ಲಿನಲ್ಲಿಯೇ ಭಗವಂತನು ಇರುವಾಗ ಎಲ್ಲಾ ಪ್ರಾಣಿಗಳಲ್ಲಿಯೂ ಭಗವಂತನು ಇದ್ದಂತೆ ಅಲ್ಲವೇ? ಮತ್ತೇ ನಾವು ಎಷ್ಟು ಪ್ರಾಣಿಗಳನ್ನು ಪ್ರತಿದಿನ ಹಿಂಸಿಸುತ್ತಿದ್ದೇವೆ? ಅವುಗಳನ್ನು ಕ್ರೂರಾತಿ ಕ್ರೂರವಾಗಿ ಹಿಂಸಿಸಿ, ಕೊಂದು, ಅವುಗಳ ಮಾಂಸವನ್ನು ತಿನ್ನುತ್ತಿದ್ದೇವೆ. ಅಂದರೆ ಭಗವಂತನನ್ನು ಹಿಂಸಿಸಿದಂತೆಯೇ

ಅಲ್ಲವೇ? ಏಕೆ ಹೀಗೆ ಮಾಡುತ್ತಿದ್ದೇವೆ? ವಿಗ್ರಹದಲ್ಲಿ ಭಗವಂತನು ಇಲ್ಲವೇ? ಎಂದು ಪ್ರಶ್ನಿಸುವವರು ಇವೆಲ್ಲವನ್ನೂ ಏಕೆ ಆಲೋಚಿಸರು?

ಎಲ್ಲದರಲ್ಲೂ ಭಗವಂತನಿದ್ದಾನೆ. ವಿಗ್ರಹದಲ್ಲೂ ಕೂಡಾ ಭಗವಂತನಿದ್ದಾನೆ. ಅದಕ್ಕೇ ವಿಗ್ರಹವನ್ನು ಆರಾಧಿಸುತ್ತಿದ್ದೇನೆ ಎಂದು ವಾದಿಸುವವರು ಎಲ್ಲವನ್ನು ಪವಿತ್ರವಾಗಿ ನೋಡಬೇಕು. ಭಗವತ್ ಸ್ವರೂಪವಾಗಿ ಭಾವಿಸಬೇಕು.

ಗಮನಿಸಿದರೆ ನಾವು ಪ್ರತಿದಿನ ಎಷ್ಟು ಇರುವೆಗಳನ್ನು, ನೊಣಗಳನ್ನು ಸೊಳ್ಳೆಗಳನ್ನು, ಇಲಿಗಳನ್ನು, ಜಿರಲೆಗಳನ್ನು ಸಾಯಿಸುತ್ತಿಲ್ಲ! ಇವುಗಳಲ್ಲಿಯೂ ಕೂಡಾ ಭಗವಂತನಿದ್ದಾನಲ್ಲವೇ? ಮತ್ತೆ ಅವುಗಳನ್ನು ಏಕೆ ಸಾಯಿಸುತ್ತಿದ್ದೇವೆ? ಏಕೆ ಆರಾಧಿಸುತ್ತಿಲ್ಲ?

ಇನ್ನೂ ಗಮನಿಸಿದರೆ ಅಂಗಳದಲ್ಲಿ, ತೋಟದಲ್ಲಿ ಔಷಧಗಳನ್ನು ಸಿಂಪಡಿಸಿ ಎಷ್ಟು ಜೀವಿಗಳನ್ನು ಸಾಯಿಸುತ್ತಿಲ್ಲ. ಅದೆಲ್ಲವೂ ಭಗವಂತನ ಸ್ವರೂಪಗಳಲ್ಲವೇ? ಪ್ರತಿದಿನ ಅಷ್ಟು ಪಾಪವನ್ನು ಮಾಡುತ್ತಾ, ವಿಗ್ರಹದಲ್ಲಿ ಭಗವಂತನಿಲ್ಲವೇ? ಎಂದು ಜಾಣತನದಿಂದ ಪ್ರಶ್ನಿಸುತ್ತಿದ್ದೇವೆಂದರೆ ಭಗವಂತನ ಕುರಿತು ನಾವು ಏನು ಅರ್ಥ ಮಾಡಿಕೊಂಡಂತೆ? ಆತನೆಂದರೆ ನಮಗೆ ನಿಜವಾಗಿಯೂ ಇಷ್ಟವೇ? ನಿಜವಾಗಿಯೂ ಇಷ್ಟವಾದರೆ ಆತನ ರೂಪಗಳನ್ನು ಸಾಯಿಸಬಲ್ಲೆವೇ? ಹಿಂಸಿಸಬಲ್ಲೆವೇ? ಹಾಗೆ ಮಾಡುತ್ತಿದ್ದೇವೆಂದರೆ ಭಗವಂತನ ಕುರಿತು ನಾವು ಹೇಳುವ ಮಾತುಗಳೆಲ್ಲವೂ ಅಸತ್ಯಗಳಲ್ಲವೇ? ಮೇಲೆ ಮಾತ್ರ ಭಗವಂತನೆಂದರೆ ಇಷ್ಟವೆನ್ನುತ್ತೇವೆ. ಆದರೆ ಕೆಲಸಗಳು ಮಾತ್ರ ಭಗವಂತನನ್ನು ಹಿಂಸಿಸುವ ರೀತಿಯಲ್ಲಿ ಇರುತ್ತವೆ. ಎಷ್ಟು ವಿಚಿತ್ರ!

ವಿಗ್ರಹದಲ್ಲಿ ಭಗವಂತನಿಲ್ಲವೇ? ಅದಕ್ಕೇ ನಾನು ವಿಗ್ರಹವನ್ನು ಆರಾಧಿಸುತ್ತಿದ್ದೇನೆ. ವಿಗ್ರಹದಲ್ಲಿ ಭಗವಂತನಿದ್ದಾನೆ, ಆದ್ದರಿಂದ ನಾನು ವಿಗ್ರಹವನ್ನು ಭಗವಂತನೆಂದು ಭಾವಿಸುತ್ತಿದ್ದೇನೆ ಎನ್ನುವವರು ಅದಕ್ಕಿಂತಲೂ ಆಲೋಚಿಸಬೇಕಲ್ಲವೇ? ಮತ್ತೇ ವಿಗ್ರಹದಲ್ಲಿಯೇ ಭಗವಂತನು ಇರುವಾಗ ಸಹ ಮಾನವರಲ್ಲಿ ಭಗವಂತನು ಇರಲಾರನೇ? ಮತ್ತೇ ಎಲ್ಲರನ್ನು ಪ್ರೀತಿಸುತ್ತಿದ್ದೇವೆಯೇ? ಇದನ್ನು ಆಲೋಚಿಸಬೇಡವೇ? ಎಷ್ಟು ಹೊತ್ತೂ ಸ್ವಾರ್ಥ, ನಮ್ಮ ಆನಂದವೇ ಆಗಲಿ, ಇತರರ ಕುರಿತು ಆಲೋಚಿಸುತ್ತಿದ್ದೇವೆಯೇ?

ನನ್ನ ಕುಟುಂಬವೆಂದು, ಕುಟುಂಬಕ್ಕಾಗಿ, ಕುಟುಂಬದ ಆನಂದಕ್ಕಾಗಿ ಕಷ್ಟಪಡುತ್ತಿದ್ದೇವೆ, ಶ್ರಮಿಸುತ್ತಿದ್ದೇವೆ. ಎಲ್ಲಾ ಭಗವಂತನಾದಾಗ ಇತರರು ಕೂಡಾ ಭಗವಂತನೇ ಅಲ್ಲವೇ? ಇತರರ ಆನಂದಕ್ಕಾಗಿ ಏಕೆ ಪ್ರಯತ್ನಿಸುತ್ತಿಲ್ಲ ನಾವು? ಒಂದು ವಿಗ್ರಹವನ್ನೇ ಆನಂದಪಡಿಸುವುದಕ್ಕೆ ಪ್ರಯತ್ನಿಸುತ್ತಿದ್ದೇವೆ. ವಿಗ್ರಹದಲ್ಲಿರುವ

ಭಗವಂತನಿಗೆ ಹಣ್ಣು, ಫಲಗಳು, ನೈವೇದ್ಯಗಳು ಇಟ್ಟು ಆನಂದಪಡಿಸುತ್ತಿದ್ದೇವೆ. ಸಹ ಮಾನವರಲ್ಲಿರುವ ಭಗವಂತನಿಗೆ ಏನು ಇಟ್ಟು ಆನಂದಪಡಿಸುತ್ತಿದ್ದೇವೆ?

ಅವರ ಮುಂದೆ ತಾವು ತಿಂದು ಆನಂದಿಸುತ್ತಿದ್ದಾರೆಯೇ ಹೊರತು ಅವರಿಗೆ ಏನು ಇಡುತ್ತಿದ್ದಾರೆ? ಮನೆಯಲ್ಲಿ ಕೆಲಸದವರನ್ನು ಎಷ್ಟು ಮಂದಿ ತಮ್ಮೊಡನೆ ಸಮಾನವಾಗಿ ನೋಡುತ್ತಿದ್ದಾರೆ? ತಾವು ತಿಂದು ಉಳಿದವು, ವಾಸನೆ ಬಂದಂತವು, ಹಾಳಾದವುಗಳು, ಯಾರು ತಿನ್ನುತ್ತಿಲ್ಲವೆಂದು ಕೊಡುತ್ತಾರೆಯಾಗಲಿ, ತಮ್ಮೊಡನೆ ಸಮಾನವಾಗಿ ಇಡುವುದಿಲ್ಲ. ಅಂದರೆ ತಾವು ಅಧಿಕರು, ಭಗವಂತನು ಕಡಿಮೆಯವನೇ? ವಿಗ್ರಹದಲ್ಲಿ ಭಗವಂತನಿಲ್ಲವೇ? ಎಂದು ಆರಾಧಿಸುವವರು, ಯಾರನ್ನು ಕೇವಲವಾಗಿ ನೋಡಿದರೂ, ಭಾವಿಸಿದರೂ, ಭಗವಂತನನ್ನೂ ಕೇವಲವಾಗಿ ನೋಡಿದಂತೆಯೇ ಎಂದು ತಿಳಿದುಕೊಳ್ಳಬೇಕು.

ಯಾವುದೋ ಒಂದು ವಿಗ್ರಹದಲ್ಲಿಯೇ ಭಗವಂತನಿದ್ದಂತೆ ವಿಗ್ರಹವನ್ನು ಆರಾಧಿಸಿದರೆ, ಭಗವಂತನನ್ನು ಆರಾಧಿಸಿದಂತೆಯೇ ಎಂದು ಭಾವಿಸುತ್ತಾ, ವಿಗ್ರಹಾರಾಧನೆ ಮಾಡುತ್ತಾ, ತಾವು ಶ್ರೇಷ್ಠವಾದ ಕೆಲಸ ಮಾಡುತ್ತಿರುವಂತೆ, ಶ್ರೇಷ್ಠರಾದಂತೆ ಭಾವಿಸಿದರೆ ಸರಿಹೋಗುತ್ತದೆಯೇ? ನಿಜವಾಗಿ ಭಗವಂತನ ಮೇಲೆ ಭಕ್ತಿ ಗೌರವವಿದ್ದರೆ, ಭಗವಂತನ ಕುರಿತು ತಿಳಿದುಕೊಳ್ಳಬೇಕು. ಆತನ ತತ್ವವನ್ನು ಅರ್ಥಮಾಡಿಕೊಳ್ಳಬೇಕು. ಅದಕ್ಕೆ ತಕ್ಕಂತೆ ವರ್ತಿಸಬೇಕು. ನಮ್ಮ ಬುದ್ಧಿಯನ್ನು ವಿವೇಕವನ್ನು ಉಪಯೋಗಿಸಬೇಕು.

ಸರ್ವಾಂತರ್ಯಾಮಿಯಾದ ಭಗವಂತನು ಸರ್ವತ್ರಾ ವ್ಯಾಪಿಸಿದ್ದಾನೆ. ಆತನು ಎಲ್ಲೆಲ್ಲೂ, ಎಲ್ಲದರಲ್ಲೂ ಇದ್ದಾನೆ. ಆತನು ಇಲ್ಲದಂತದ್ದು ಇಲ್ಲ. ಆತನು ವಿಗ್ರಹದಲ್ಲೂ ಕೂಡಾ ಇದ್ದಾನೆ. ಆದರೆ ಆಲೋಚಿಸಬೇಕು. ಆತನು ವಿಗ್ರಹದಲ್ಲಿ ಹೇಗೆ ಇದ್ದಾನೆ? ಯಾವ ರೂಪದಲ್ಲಿ ಇದ್ದಾನೆ? ನಿಜವಾಗಿಯೂ ವಿಗ್ರಹದಲ್ಲಿರುವ ಆತನನ್ನು ನೋಡಬಲ್ಲೆವೇ? ನೋಡಲಾರವು. ಅದು ಅಸಾಧ್ಯ. ಕಾರಣ ಭಗವಂತನು ಚೈತನ್ಯ ಸ್ವರೂಪನು. ವಿಗ್ರಹದಲ್ಲಿಯೇ ಅಲ್ಲ, ಆ ಚೈತನ್ಯವು ಸರ್ವತ್ರಾ, ಸರ್ವಜೀವಿಗಳಲ್ಲಿ ವ್ಯಾಪಿಸಿದೆ.

ಭಗವಂತನ ಚೈತನ್ಯವು ಮಾನವನೊಬ್ಬನಲ್ಲಿಯೇ ಪೂರ್ತಿ ಚೈತನ್ಯವಂತವಾಗಿದೆ. ಆ ಚೈತನ್ಯವನ್ನೇ ಆತ್ಮವೆನ್ನುತ್ತಾರೆ. ಎಲ್ಲವುದಕ್ಕಿಂತಲೂ ಮಾನವರಲ್ಲಿರುವ ಆತ್ಮವೇ, ಸತ್ಯವಾದ, ಪೂರ್ಣವಾದ ಭಗವಂತನು. ಆದ್ದರಿಂದ ಭಗವತ್ ಸಾಕ್ಷಾತ್ಕಾರವೆಂದರೆ ಆತ್ಮಸಾಕ್ಷಾತ್ಕಾರವು ಮಾನವನೊಬ್ಬನಲ್ಲಿಯೇ ಮಾನವನಿಗೇ ಸಾಧ್ಯ ಹೊರತು ಇನ್ನು ಯಾವುದರಲ್ಲೂ, ಯಾರಿಗೂ ದರ್ಶಿಸುವ ಅವಕಾಶವಿಲ್ಲ.

ಅದಕ್ಕೇ "God sleeps instones, Awakes in plants, Moves in animals & Thinks in Man" ಎಂದು ಹೇಳುತ್ತಾರೆ.

ವಿಗ್ರಹದಲ್ಲಿಲ್ಲವೇ ಎಂದು ವಾದಿಸುವ ಬದಲು, ತನ್ನಲ್ಲಿರುವ ಭಗವಂತನನ್ನು ಆರಾಧಿಸಿ, ದರ್ಶಿಸುವುದಕ್ಕೆ ಪ್ರಯತ್ನಿಸಬೇಕು. ಆ ಪ್ರಯತ್ನವೇ ಧ್ಯಾನ.

ಧ್ಯಾನವನ್ನು ವಿಶೇಷವಾಗಿ ಮಾಡಿದರೆ ಅಂತರಂಗದಲ್ಲಿರುವ ಆತ್ಮನನ್ನು ದರ್ಶಿಸಬಲ್ಲವರಾಗುತ್ತೇವೆ. ದರ್ಶಿಸುವುದೇ ಅಲ್ಲ, ಆ ಆತ್ಮ ಯಾರೋ ಅಲ್ಲ ನಾನೇ ಎಂದು ತಿಳಿದುಕೊಳ್ಳುತ್ತೇವೆ. "ಅಹಂ ಬ್ರಹ್ಮಾಸ್ಮಿ" ಎಂಬ ಸತ್ಯವನ್ನು ಅರಿವಿಗೆ ತಂದುಕೊಳ್ಳುತ್ತೇವೆ.

ವಿಗ್ರಹವು ಭಗವಂತನಲ್ಲವೇ? ಇಲ್ಲಾ ಭಗವಂತನು ವಿಗ್ರಹದಲ್ಲಿ ಇಲ್ಲವೇ? ಎಂದು ವಾದಿಸುವುದು ಅಲ್ಲ. "ನಾನೇ ಭಗವಂತನು" ಎಂಬ ಸತ್ಯವನ್ನು ತಿಳಿದುಕೊಳ್ಳಬೇಕು. ವಿಗ್ರಹದಲ್ಲಿ ಭಗವಂತನಿಲ್ಲವೇ? ಎಂದು ಕೋರಿಕೆಗಳನ್ನು ಕೋರುವುದಕ್ಕೆ ಪ್ರಯತ್ನಿಸಿದ ಮಾತ್ರಕ್ಕೆ ಪ್ರಯೋಜನವಿಲ್ಲ. ಕಾರಣ ಕೋರುವವನೇ ಭಗವಂತನಾದ್ದರಿಂದ.

ಶಿಲೆಯನ್ನು ರೂಪವಾಗಿ ಬದಲಾಯಿಸಿ ಕೋರಿದರೆ, ಶಿಲೆ ಏನು ಕೊಡಬಲ್ಲದು. ಶಿಲೆ ಶ್ರೇಷ್ಠವೇ? ಭಗವಂತನು ಶ್ರೇಷ್ಠನೇ? ಭಗವಂತನೇ ಶ್ರೇಷ್ಠನಲ್ಲವೇ! ಮತ್ತೇ ಪೂಜಿಸಿದರೆ ತಪ್ಪೇನು? ಶಿಲೆಯನ್ನು ಕೋರಿದರೆ ತಪ್ಪೇನು? ಎಂದು ವಾದಿಸಿದರೆ ಎಷ್ಟು ಮೂರ್ಖತನ! "ಭಗವಂತನೇ ರಕ್ಷಿಸು, ರಕ್ಷಿಸು ಅಂದರೆ ಇನ್ನು ಆತನನ್ನು ರಕ್ಷಿಸುವವರಾರಿದ್ದಾರೆ?"

ಮಾನವನು ತಾನು ಯಾರೋ ತಿಳಿದುಕೊಳ್ಳಲಾರದೆ, ತನ್ನ ಶಕ್ತಿಯನ್ನು ಮರೆತುಹೋಗಿ ಕೆಳಮಟ್ಟಕ್ಕೆ ಇಳಿದು ವರ್ತಿಸುವುದೇ ಅಲ್ಲದೆ, ವಾದಿಸುವುದು ಮತ್ತೂ ವಿಪರ್ಯಾಸವಲ್ಲದೇ ಮತ್ತೇನು?

ಸ್ವಲ್ಪ ಆಲೋಚಿಸಿದರೆ ಆಲಯದ ಹೊರಗೆ ಬೇಡುವವರೇ ಲಾಭವನ್ನು ಹೊಂದುತ್ತಿದ್ದಾರೆ. ಆಲಯದೊಳಗೆ ಯಾಚಿಸುವವರು ನಷ್ಟ ಹೊಂದುತ್ತಿದ್ದಾರೆ. ಕಾರಣ ಏನೂ ಇಲ್ಲದೆ ಹೊರಗೆ ಬೇಡುವವರಿಗೆ ಸಂಜೆಯ ಹೊತ್ತಿಗೆ ಕೆಲವು ರೂಪಾಯಿಗಳಾದರೂ ಬರುತ್ತವೆ. ಆದರೆ ಒಳಗೆ ಬೇಡುವವರಿಗೆ, ತೆಂಗಿನಕಾಯಿ ಇಟ್ಟರೆ, ಚಿಪ್ಪು ಮಾತ್ರವೇ ಬರುತ್ತದೆ, ಹಣ್ಣು ಮಾತ್ರವೇ ಬರುತ್ತವೆ, ಸ್ವಲ್ಪವೇ ಬರುತ್ತವೆ. ಅಂದರೆ ಅರ್ಧ ನಷ್ಟ ಹೊಂದುತ್ತಾರೆ.

ಕಾರಣ ಹೊರಗೆ ಬೇಡುವವರು ಭಗವಂತನನ್ನು ಕೇಳುತ್ತಿದ್ದಾರೆ. ಲಾಭಪಡುತ್ತಿದ್ದಾರೆ. ಆದರೆ ಒಳಗೆ ಬೇಡುವವರು ನಷ್ಟ ಹೊಂದುತ್ತಿದ್ದಾರೆ. ಕಾರಣ ಅವರು ಶಿಲಾ ವಿಗ್ರಹವನ್ನು ಕೇಳುತ್ತಿದ್ದಾರೆ.

ವಿಗ್ರಹ ಭಗವಂತನಲ್ಲ. 'ವಿಗ್ರಹವನ್ನು ಕೋರುವ ಮಾನವನೇ ಭಗವಂತನು'. ಇದೇ ಪೂರ್ಣ ಸತ್ಯ. ಈ ಸತ್ಯವನ್ನು ತಿಳಿದುಕೊಳ್ಳದವರೆಗೂ ಮಾನವನು ದುಃಖವನ್ನು ಹೊಂದುತ್ತಾನೆ, ದುಃಖದಲ್ಲಿಯೇ ಜೀವಿಸುತ್ತಾನೆ.

ಮಾನವನು ದುಃಖದಿಂದ ಹೊರಬರಬೇಕೆಂದರೆ ಈ ಸತ್ಯವನ್ನು ತಿಳಿದುಕೊಳ್ಳಬೇಕು. ಅದಕ್ಕೆ ಧ್ಯಾನವೊಂದೇ ಮಾರ್ಗ. ಮಾನವನು ಎಷ್ಟು ಜನ್ಮಗಳನ್ನೆತ್ತಿದರೂ, ಎಷ್ಟು ಶ್ರಮಿಸಿದರೂ ಧ್ಯಾನ ಮಾಡದೇ ಈ ಸತ್ಯವನ್ನು ತಿಳಿದುಕೊಳ್ಳಲಾರ.

ಎಷ್ಟೋ ಜನ್ಮಗಳನ್ನೆತ್ತಿ, ಎಷ್ಟೋ ದುಃಖವನ್ನು ಅನುಭವಿಸಿ, ಎಷ್ಟೋ ಕಷ್ಟಪಟ್ಟು, ಆಗ ಧ್ಯಾನ ಮಾಡುವ ಬದಲು, ಈಗಲೇ ಈ ಜನ್ಮದಲ್ಲಿಯೇ ಮಾಡಿದರೆ ಅಷ್ಟು ಜನ್ಮಗಳನ್ನೆತ್ತುವ ಕೆಲಸವಿಲ್ಲ. ಇಷ್ಟು ಕಷ್ಟಪಡಬೇಕಾದ ಕೆಲಸವಿಲ್ಲ. ಆದ್ದರಿಂದ ಧ್ಯಾನವನ್ನು ಮಾಡೋಣ. ದುಃಖದಿಂದ ಶಾಶ್ವತವಾಗಿ ಹೊರಬೀಳೋಣ.

## ಒರಿಜಿನಲ್! ಡೂಪ್ಲಿಕೇಟ್!

ಲೋಕದಲ್ಲಿ ಒರಿಜಿನಲ್ ವಸ್ತುಗಳು ಇರುತ್ತವೆ, ಡೂಪ್ಲಿಕೇಟ್ ಇರುತ್ತವೆ. ಯಾರಾಗಲಿ ಒರಿಜಿನಲ್‌ಗೆ ಪ್ರಾಮುಖ್ಯತೆ ಕೊಡುತ್ತಾರೆ. ಕಾರಣ ಒರಿಜಿನಲ್ ಶಾಶ್ವತ. ಡೂಪ್ಲಿಕೇಟ್ ತಾತ್ಕಾಲಿಕ. ಗಮನಿಸಿದರೆ ಒರಿಜಿನಲ್ ಬಂಗಾರದ ವಸ್ತುಗಳು ಶಾಶ್ವತವಾಗಿ ಬೆಳಗುತ್ತವೆ. ಆದರೆ ಡೂಪ್ಲಿಕೇಟ್, ಗಿಲ್ಟ್ ನಗಗಳು, ಸ್ವಲ್ಪ ದಿನಗಳಲ್ಲೇ ಅವುಗಳ ಹೊಳಪು ಕಳೆದುಕೊಳ್ಳುತ್ತವೆ. ಆದ್ದರಿಂದ ಯಾರಾಗಲಿ ಎಷ್ಟು ಬೆಲೆಯಾದರೂ ಒರಿಜಿನಲ್ ಬಂಗಾರದ ವಸ್ತುಗಳನ್ನು ಸಂಪಾದಿಸಿಕೊಳ್ಳುವುದಕ್ಕೇ ಪ್ರಯತ್ನಿಸುತ್ತಾರೆ. ಒಂದು ವೇಳೆ ಯಾವ ಅಂಗಡಿಯವನಾದರೂ, ಡೂಪ್ಲಿಕೇಟ್ ವಸ್ತುಗಳನ್ನು ಕೊಟ್ಟರೆ ನಷ್ಟ ಹೋದೆವು ಎಂದು ಬಾಧೆಪಡುತ್ತಾರೆ.

ಹಾಗೆಯೇ ಒರಿಜಿನಲ್ ವಜ್ರದ ಹೊಳಪು ಉತ್ತಮವಾಗಿ, ಶಾಶ್ವತವಾಗಿ ಇರುತ್ತದೆ. ಆದರೆ ಗಾಜಿನ ಹರಳುಗಳ ಹೊಳಪು ಅಷ್ಟಕಷ್ಟು ಮಾತ್ರವೇ. ಹಾಗೇ ಮಾರುಕಟ್ಟೆಯಲ್ಲಿ ಕೊಳ್ಳುವ ವಸ್ತುಗಳಲ್ಲಿ ಯಾರಾಗಲಿ ಒರಿಜಿನಲ್ ವಸ್ತುಗಳನ್ನೇ ಕೊಳ್ಳುತ್ತಾರೆ. ಔಷಧಗಳನ್ನು

ಕೂಡಾ ಒರಿಜಿನಲ್ ಔಷಧಗಳನ್ನೇ ಕೊಳ್ಳುತ್ತಾರೆ. ಒರಿಜಿನಲ್ ಔಷಧ ಕೊಂಡರೆ ರೋಗವು ಕಡಿಮೆಯಾಗುತ್ತದೆ. ಡೂಪ್ಲಿಕೇಟ್ ಔಷಧಗಳನ್ನು ಬಳಸಿದರೆ ಪ್ರಾಣ ಹೋಗುತ್ತದೆ. ಅಂದರೆ ಯಾವುದಾದರೂ ಒರಿಜಿನಲ್‌ಗಳಿಂದ ಪ್ರಯೋಜನವಿದೆಯಾಗಲಿ, ಡೂಪ್ಲಿಕೇಟ್‌ನಿಂದ ಎಲ್ಲಾ ನಷ್ಟವೇ ಆಗುತ್ತದೆ,

ಇನ್ನು ಓದುವ ಮಕ್ಕಳಿಗೆ ಒರಿಜಿನಲ್ ಹುಲಿ, ಸಿಂಹ, ಆನೆಯಂತವುಗಳನ್ನು ತೋರಿಸಲಾಗದಿದ್ದಾಗ ಅವುಗಳ ಡೂಪ್ಲಿಕೇಟ್‌ಗಳ ಗೊಂಬೆಗಳನ್ನು ತೋರಿಸುತ್ತೇವೆ. ಅವು ಹೀಗೆ ಇರುತ್ತವೆ, ಅವುಗಳ ಲಕ್ಷಣಗಳು ಇವು, ಅವು ಈ ಕೆಲಸಗಳನ್ನು ಮಾಡುತ್ತವೆ. ಅವು ಕ್ರೂರವಾದವು, ಅವುಗಳಿಗೆ ಕೋರೆಗಳು, ಉಗುರುಗಳು ಇರುತ್ತವೆ. ಸಾಧು ಪ್ರಾಣಿಗಳನ್ನು ಸಾಯಿಸಿ ತಿನ್ನುತ್ತವೆ ಎಂದು ಹೇಳುತ್ತೇವೆ. ಯಾವುದು ಏನಾದರೂ ತೋರಿಸಿದ ಗೊಂಬೆಯು ಡೂಪ್ಲಿಕೇಟ್ ಹೊರತು ಒರಿಜಿನಲ್ ಅಲ್ಲ. ಅಂದರೆ ನೋಡಲಾರದಂತವುಗಳನ್ನು ಗುರುತಿಸುವುದಕ್ಕೆ ಡೂಪ್ಲಿಕೇಟ್‌ನ್ನು ಬಳಸುತ್ತೇವೆ. ಹಾಗೆಯೇ ಅವರು ಯಾವ Zooಗೆ ಹೊದರೂ.

ORIGINAL ಸಿಂಹವನ್ನು ನೋಡಿದೊಡನೆ ತಕ್ಷಣವೇ ನಿಜವಾದ ಸಿಂಹ ನಿಜವಾದ ಸಿಂಹ ಎನ್ನುತ್ತಾರೆ. ಎಷ್ಟೋ ಆನಂದಪಡುತ್ತಾರೆ. ಇಲ್ಲಿಯವರೆಗೆ ತಾನು ನೋಡಿದ್ದು ಡೂಪ್ಲಿಕೇಟ್ ಗೊಂಬೆ ಸಿಂಹವಾದ್ದರಿಂದ ಒರಿಜಿನಲ್ ಸಿಂಹ ನೋಡಿದಂತ ಅನುಭೂತಿ, ಆನಂದ ಉಂಟಾಗದು. ಯಾವುದು ಏನಾದರೂ ಒರಿಜಿನಲ್–ಒರಿಜಿನಲ್ಲೇ, ಡೂಪ್ಲಿಕೇಟ್–ಡೂಪ್ಲಿಕೇಟೇ.

ಹಾಗೆಯೇ ಯಾರ ಹೆಂಡತಿ ಸತ್ತು ಹೋದರೂ, ಮತ್ತೇ ಇನ್ನೊಬ್ಬ ಹೆಂಡತಿಯನ್ನು ಮಾಡಿಕೊಳ್ಳುತ್ತಾರೆ. ಅಷ್ಟೇ ಹೊರತು ಹಳೆಯ ಹೆಂಡತಿಯಂತೆ ಇರುವ ಡೂಪ್ಲಿಕೇಟ್ ಗೊಂಬೆಯನ್ನು ತಯಾರು ಮಾಡಿಸಿ ಸಂಸಾರ ಮಾಡರು! ಕಾರಣ ಡೂಪ್ಲಿಕೇಟ್ ಗೊಂಬೆ ಹೆಂಡತಿಗೆ ORIGINAL ನಿಜವಾದ ಹೆಂಡತಿಗೂ ಬಹಳ ವ್ಯತ್ಯಾಸ ಇರುತ್ತದೆ. ನಿಜವಾದ ಹೆಂಡತಿಯಾದರೆ ಎಷ್ಟೋ ರೀತಿಯ ಸುಖಗಳನ್ನು ಕೊಡುತ್ತಾಳೆ. ಸೇವೆ ಮಾಡುತ್ತಾಳೆ, ಶಾರೀರಿಕ ಬಯಕೆಗಳನ್ನು ತೀರಿಸುತ್ತಾಳೆ, ಇಷ್ಟವಾದವುಗಳನ್ನು ಮಾಡುತ್ತಾಳೆ, ಮನೆಯ ಕೆಲಸಗಳನ್ನೆಲ್ಲಾ ನೋಡಿಕೊಳ್ಳುತ್ತಾಳೆ, ಕಷ್ಟಗಳು ಬಂದಾಗ ಸಾಂತ್ವನಗೊಳಿಸುತ್ತಾಳೆ. ಹೀಗೆ ನಿಜವಾದ ಹೆಂಡತಿಯಿಂದ ಎಷ್ಟೋ ಲಾಭಗಳಿವೆ.

ಅದೇ ಡೂಪ್ಲಿಕೇಟ್ ಹೆಂಡತಿಯಾದರೆ, ಮೇಲಿನ ಯಾವುವು ಯಾವ ಲಾಭವನ್ನು ಕೊಡುವುದಿಲ್ಲ, ಸರಿಯಷ್ಟೇ ಇನ್ನೂ ಆ ಗೊಂಬೆಗೇ ಸೇವೆ ಮಾಡಬೇಕಾಗುತ್ತದೆ.

ಸುಖವಿಲ್ಲದಿದ್ದರೂ ಎಲ್ಲಾ ಕಷ್ಟಗಳೇ, ಲಾಭವಿಲ್ಲದಿದ್ದರೂ ಎಲ್ಲಾ ನಷ್ಟಗಳೇ, ಪ್ರಯೋಜನವಿಲ್ಲದಿದ್ದರೂ ಎಲ್ಲಾ ತೊಂದರೆಗಳೇ. ಎಷ್ಟು ವ್ಯತ್ಯಾಸವಿರುತ್ತದೋ ಆಲೋಚಿಸಿದರೆ ನಮಗೇ ತಿಳಿಯುತ್ತದೆ. ಆದ್ದರಿಂದ ಎಲ್ಲಾ ಒರಿಜಿನಲ್ ಆಗಿರುವ ಮತ್ತೊಬ್ಬಳು ಹೆಂಡತಿಯನ್ನೇ ಮಾಡಿಕೊಳ್ಳುತ್ತಾರೆ. ಆದರೆ ಮೊದಲಿನ ಹೆಂಡತಿಯಂತಹ ಡೂಪ್ಲಿಕೇಟ್ ಗೊಂಬೆಯನ್ನು ಮಾಡಿಕೊಳ್ಳರು. ಎಂತಹ ಪರಿಸ್ಥಿತಿಯಲ್ಲೂ ಇಷ್ಟಪಡರು.

ಗಮನಿಸಿದರೆ ನಿಜ ಜೀವನದಲ್ಲಿ ಯಾವ ವಿಷಯದಲ್ಲಾದರೂ ಒರಿಜಿನಲ್‌ನಿಂದಲೇ ಲಾಭಗಳನ್ನು ಹೊಂದುತ್ತಿದ್ದೇವೆ. ಡೂಪ್ಲಿಕೇಟ್‌ನಿಂದ ನಷ್ಟ ಹೊಂದುತ್ತೇವೆ. ಅದಕ್ಕೆ ಎಲ್ಲದರಲ್ಲೂ ಒರಿಜಿನಲ್‌ನ್ನೇ ಕೋರಿಕೊಳ್ಳುತ್ತೇವೆ.

ವಿಚಿತ್ರವೇನೆಂದರೆ ಮಾನವರು ಎಲ್ಲಾ ವಿಷಯಗಳಲ್ಲೂ 'ಒರಿಜಿನಲ್'ನ್ನೇ ಕೋರಿಕೊಳ್ಳುತ್ತಾರೆ. ಆದರೆ ಭಗವಂತನ ವಿಷಯದಲ್ಲಿ ಮಾತ್ರ ಜೀವಮಾನವೆಲ್ಲಾ "ಡೂಪ್ಲಿಕೇಟ್ ಭಗವಂತನನ್ನೇ" ಆಶ್ರಯಿಸುತ್ತಿದ್ದಾರೆ, ಆರಾಧಿಸುತ್ತಿದ್ದಾರೆ. 'ಒರಿಜಿನಲ್ ಭಗವಂತ'ನನ್ನು ಪೂರ್ತಿಯಾಗಿ ಮರೆತುಬಿಟ್ಟಿದ್ದಾರೆ. ಇನ್ನೂ ವಿಚಿತ್ರವೇನೆಂದರೆ ಡೂಪ್ಲಿಕೇಟ್ ವಿಗ್ರಹವನ್ನು, ಫೋಟೋವನ್ನು ಕೂಡಾ ಒರಿಜಿನಲ್ ಎಂದೇ ಭಾವಿಸುತ್ತಿದ್ದಾರೆ ನಿಜವಾದ ಭಗವಂತನೆಂದುಕೊಳ್ಳುತ್ತಿದ್ದಾರೆ. ಎಷ್ಟು ವಿಚಿತ್ರವೆಂದರೆ ಎಷ್ಟೋ ಬುದ್ಧಿವಂತಿಕೆ ಇದೆ ಎಂದುಕೊಳ್ಳುವ ಮಾನವನು ಭಗವಂತನ ವಿಷಯದಲ್ಲಿ ಅಸಲಾದ (ಒರಿಜಿನಲ್) ಭಗವಂತನನ್ನು ಮರೆತು ಹೋಗುವುದು, ಆತನ ಕುರಿತು ಆಲೋಚಿಸದಿರುವುದು, ಆತನ ನಿಜತತ್ವವನ್ನು, ನಿಜ ಸ್ಥಿತಿಯನ್ನು ತಿಳಿದುಕೊಂಡು ಆರಾಧಿಸದಿರುವುದು ನಿಜವಾಗಿ ಇದು ಶೋಚನೀಯ!

ಅಡವಿಯಲ್ಲಿ ಕಾಣಿಸುವ ಸಿಂಹವನ್ನು ತರಲಾರರು, ತೋರಿಸಲಾರರು ಆದ್ದರಿಂದ ಮೊದಲು ಗೊಂಬೆಯ ಸಿಂಹವನ್ನು ತೋರಿಸುತ್ತಾರೆ. ಆದರೆ ಗೊಂಬೆ ನಿಜವಾದ ಸಿಂಹವಲ್ಲ ಅಲ್ಲವೇ? ಒರಿಜಿನಲ್ ಸಿಂಹವನ್ನು ನೋಡಿದ ಆನಂದವು ಆಗುವುದಿಲ್ಲವಲ್ಲ? ಹಾಗೆಯೇ ಆಕಾರವಿಲ್ಲದ ಭಗವಂತನನ್ನು ತೋರಿಸಲಾರರು ಆದ್ದರಿಂದ ಆತನ ಶಕ್ತಿಗಳನ್ನು ಗುಣಗಳನ್ನಾಧರಿಸಿ ಗೊಂಬೆಯ ಆಕಾರವನ್ನು ತಯಾರು ಮಾಡಿ ಹಿರಿಯರು ನಮಗೆ ಪ್ರಾಥಮಿಕವಾಗಿ ಬೋಧಿಸುತ್ತಾರೆ. ಅಷ್ಟೇ ಹೊರತು ಆ ಆಕಾರವು ಭಗವಂತನು ಹೇಗಾಗುತ್ತಾನೆ? ಆತನನ್ನು ತೋರಿಸಲಾರರು ಆದ್ದರಿಂದ ಡೂಪ್ಲಿಕೇಟ್‌ಗಳನ್ನು ಕೆಲವು, ಊಹಾ ರೂಪಗಳು ಕೆಲವು ತಯಾರು ಮಾಡಿ ತೋರಿಸುತ್ತಾರೆ, ಡೂಪ್ಲಿಕೇಟ್ ಆಕಾರವು ಏಕೆ ಅಂದರೆ ಭಗವಂತನೆಂಬುವವನು ಇದ್ದಾನೆ ಎಂದು ತಿಳಿದುಕೊಂಡು ಆ ಒರಿಜಿನಲ್ ಭಗವಂತನನ್ನು ಅನ್ವೇಷಿಸಿ, ಆತನ ದರ್ಶನವನ್ನು ಹೊಂದುವುದಕ್ಕೇ ಮಾತ್ರವೇ!

ಆದ್ದರಿಂದ ನಿಜವಾದ ಭಗವಂತನ ದರ್ಶನ ಹೊಂದಿದವರ ಆನಂದಕ್ಕೆ ಪಾರವೇ ಇರುವುದಿಲ್ಲ. ಗಮನಿಸಿದರೆ ಡೂಪ್ಲಿಕೇಟ್ ಭಗವಂತನ ಅಂದರೆ ವಿಗ್ರಹದರ್ಶನ ಮಾಡಿಕೊಂಡವರ ಕಷ್ಟಗಳಿಗೆ ಕೊರತೆಯೇ ಇರುವುದಿಲ್ಲ. ಕಾರಣ ಒರಿಜಿನಲ್ ಭಗವಂತನು ಅನಂತ ಶಕ್ತಿಸ್ವರೂಪನು. ಆನಂದ ಸ್ವರೂಪನು, ಆತನನ್ನು ಆಶ್ರಯಿಸಿದವರನ್ನು ಕೋರದೆಯೇ ಅನುಗ್ರಹಿಸುತ್ತಾನೆ. ಆದರೆ ಡೂಪ್ಲಿಕೇಟ್ ವಿಗ್ರಹವು ಕೋರಿದರೂ, ಮುಗಿದರೂ, ಪ್ರಾರ್ಥಿಸಿದರೂ, ಅನುಗ್ರಹಿಸಲಾರನೆಂದು ತಿಳಿದುಕೊಳ್ಳಬೇಕು.

ಬುದ್ಧಿವಂತರು, ವಿವೇಕವಂತರು, ಯೋಗಿಗಳು ಯಾವಾಗಲೂ ಕೂಡಾ ನಿರಾಕಾರ, ನಿರ್ಗುಣ, ಸರ್ವಾಂತರ್ಯಾಮಿ ಆದ ಒರಿಜಿನಲ್ ಭಗವಂತನನ್ನು 'ಧ್ಯಾನ'ದ ಮೂಲಕ ಆರಾಧಿಸುತ್ತಾರೆ. ಆತನು ಯಾರೋ ಅಲ್ಲ, ಎಲ್ಲರಲ್ಲೂ ಇರುವ 'ಆತ್ಮ'. ಆತ್ಮ ಆರಾಧನೆ ಮಾಡಿದರೆ ಅಂದರೆ ಧ್ಯಾನ ಮಾಡಿದರೆ ಒರಿಜಿನಲ್ ಭಗವಂತನನ್ನು ಆರಾಧಿಸಿದಂತೆಯೇ!

ಆದ್ದರಿಂದ ನಾವೂ ಕೂಡಾ ಯೋಗಿಗಳಂತೆ ಧ್ಯಾನ ಮಾಡಿ ಒರಿಜಿನಲ್ ಭಗವಂತನನ್ನು ಅಂದರೆ ಆತ್ಮನನ್ನು ಆರಾಧಿಸೋಣ. ದುಃಖದಿಂದ ಹೊರಬರೋಣ. ಮೋಕ್ಷವನ್ನು ಹೊಂದೋಣ.

## ಗುರುವೆಂದರೆ?

ಮೊದಲು ಗುರುವು ಎಂಬ ಪದಕ್ಕೆ ಅರ್ಥವನ್ನು ತಿಳಿದುಕೊಳ್ಳೋಣ.

1. ಗು :– ಅಂಧಕಾರ, ರು : –ಜ್ಯೋತಿಸ್ವರೂಪ.

ಅಂಧಕಾರವನ್ನು ಬದಲಾಯಿಸುವ ಜ್ಯೋತಿ ಸ್ವರೂಪವೇ ಗುರುವು ಎಂದು ಅರ್ಥ. ಇದಕ್ಕೆ ಇನ್ನೊಂದು ಅರ್ಥವೂ ಇದೆ.

2. ಗು :– ಗುಣಾತೀತಂ, ರು : –ರೂಪವರ್ಜಿತಂ

ಗುಣರೂಪ ರಹಿತವಾದ ಪರಬ್ರಹ್ಮ ಸ್ವರೂಪವೇ ಗುರುವು.

ಇನ್ನೊಂದು ಅರ್ಥವನ್ನು ಕೂಡಾ ಹೇಳಿಕೊಳ್ಳಬಹುದು.

3. ಗು :– ಅಜ್ಞಾನ, ರು : –ಜ್ಞಾನ

ಅಜ್ಞಾನಾಂಧಕಾರವನ್ನು ಹೋಗಲಾಡಿಸಿ ಜ್ಞಾನವನ್ನು ಪ್ರಸಾದಿಸುವವನು ಗುರುವು.

**ಉತ್ತಮ ಗುರುವಿನ ಅರ್ಹತೆಗಳು**

1. ಗುರುವು ಜ್ಞಾನಿಯಾಗಿರಬೇಕು. ಜ್ಞಾನವೆಂದರೆ ವಿಷಯ ಪರಿಜ್ಞಾನ. ಪಾಂಡಿತ್ಯವಲ್ಲ, ಸ್ವಯಂ ಪ್ರತಿಭೆ, ಸ್ವಪ್ರಜ್ಞೆಯುಳ್ಳವನಾಗಿರಬೇಕು.
2. ಗುರುವು ಕರ್ಮಿಷ್ಠನಾಗಿರಬೇಕು. ಅಂದರೆ ಕರ್ಮಗಳನ್ನು ಆಚರಿಸುತ್ತಾ ಇರಬೇಕಾಗಲಿ ಸನ್ಯಾಸಿ, ವಿರಾಗಿ ಆಗಬಾರದು.
3. ಗುರುವು ಜ್ಞಾನ ತತ್ಪರನಾದ ಯೋಗಿಯಾಗಬೇಕೆಂದರೆ ಫಲಗಳನ್ನು ಆಶಿಸದೇ ಕರ್ಮಗಳನ್ನು ಆಚರಿಸಬೇಕು. ಅಂದರೆ ನಿಜವಾದ ಕರ್ಮಯೋಗಿಯಾಗಿರಬೇಕು.

ಈ ಮೂರು ಗುಣಗಳು ಇಲ್ಲದವನು ಗುರು ಪದವಿಗೆ ಅರ್ಹನಾಗಲಾರ. ಡಾಂಭಿಕತೆಗಳನ್ನು ಹೇಳುತ್ತಾ, ಆಡಂಬರವಾಗಿ ಜೀವಿಸುವವರು, ಅವತಾರ ಪುರುಷರೆಂದು ಬಿರ್ರನೆ ಬೀಗುವವರು ಸದ್ಗುರುಗಳಾಗಲಾರರು.

ಆದ್ದರಿಂದ ಗುರುವಾದವನು ಸ್ವಯಂ ಸಾಧಕನಾಗಿರಬೇಕು. ಸಾಧನೆಯಲ್ಲಿರುವ ಕಷ್ಟಸುಖಗಳನ್ನು ಅನುಭವಿಸಿದವನಾಗಿರಬೇಕು. ಬ್ರಹ್ಮಾನುಭೂತಿಯ ರುಚಿಯನ್ನು ಸವಿದವನಾಗಿರಬೇಕು. ಪ್ರಜ್ಞಾಶಾಲಿಯಾಗಿರಬೇಕು. ಅಂತಹ ಗುರುವು ಮಾತ್ರವೇ ಇತರರಿಗೆ ಮಾರ್ಗದರ್ಶಿಯಾಗಬಲ್ಲನು. ಇತರರಿಗೆ ಒಳ್ಳೆಯ ಮಾರ್ಗವನ್ನು ತೋರಿಸಬಲ್ಲನು.

ಅಂತಹ ಗುರುವು ಮಹಾತ್ಮನಾಗಿರಬೇಕು. ಕರುಣಾಹೃದಯನಾಗಿರಬೇಕು. ಆತನ ಅಂತರಂಗವು ಕರುಣಾರಸಪೂರಿತವಾಗಿರಬೇಕು. ತಮ್ಮ ಶಕ್ತಿಯಿಂದ ಶಿಷ್ಯರ ಭವಬಂಧನಗಳನ್ನು ತುಂಡರಿಸುವವನಾಗಿರಬೇಕು.

ಅಂತಹ ಗುರುವೇ ಜ್ಞಾನನಿಧಿ. ಜ್ಞಾನ, ಆತ್ಮಜ್ಞಾನ ಎಷ್ಟು ಜನರಿಗೆ ಹಂಚಿಟ್ಟರೂ ಕರಗದು. ಹಾಗೇ ಸತ್ಯವನ್ನು ತಾನಾಗಿ ತಿಳಿದುಕೊಳ್ಳಬಲ್ಲವನೇ ಗುರುವು.

ಯಾವ ತಾತ್ವಿಕ ವಿಷಯವನ್ನಾಗಲಿ ತಡವರಿಸದೇ, ಆಲೋಚಿಸದೇ ವಿವರಿಸಿ ಹೇಳಬಲ್ಲವರಾಗಬೇಕು. ಆತನಿಗೆ ಆ ವಿಷಯಗಳು ಅದಕ್ಕೂ ಮೊದಲು ತಿಳಿಯದೇ ಇರಬಹುದು. ಸಂದರ್ಭಾನುಸಾರವಾಗಿ ಆತನಿಗೆ ಸ್ಫುರಿಸುತ್ತವೆ. ಅದೇ ಪ್ರಜ್ಞಾ ವಿಶೇಷ.

ಗುರುವಿನದು ಪ್ರತ್ಯಕ್ಷ ಜ್ಞಾನ. ಅದನ್ನು ಮೀರಿದ ಜ್ಞಾನವು ಇಹಲೋಕದಲ್ಲಿ ಶಾಸ್ತ್ರ ಪಠಣದಿಂದಾಗಲಿ, ಪಾಂಡಿತ್ಯದಿಂದಾಗಲಿ ಲಭಿಸದು. ಆದ್ದರಿಂದ ಅನುಭವವನ್ನು ಮೀರಿದ ಪ್ರಮಾಣವಿಲ್ಲ ಎನ್ನುತ್ತಾರೆ. ಗುರುವು ಅನುಭವದಿಂದ ಹೇಳುತ್ತಾನೆ. ಶಾಸ್ತ್ರವು

ಯಾವಾಗಲೂ ಪ್ರಮಾಣವಲ್ಲ. ಶಾಸ್ತ್ರ ಪ್ರಮಾಣವು ಶಿಷ್ಯನಿಗೆ ಅನುಭವದಲ್ಲಿ ಬರದಿದ್ದಾಗ ಅದನ್ನು ಬಿಟ್ಟುಬಿಡುಬೇಕಾದದ್ದೇ. ಆಗ ಗುರುವಿನ ಅನುಭವವೇ ಪ್ರಮಾಣ. ಅನುಭವ ಜ್ಞಾನದಿಂದ ಗುರುವು ಬೋಧಿಸಿದ ವಿಷಯಗಳನ್ನು ಗ್ರಹಿಸಿ ಉಪದೇಶಿಸಿದ ಮಾರ್ಗದಲ್ಲಿ ನಡೆಯಬೇಕು. ಹಾಗೆ ಗುರುವು ತೋರಿಸಿದ ಸಾಧನೆಯಿಂದ ಜನ್ಮ ಪರಂಪರೆಯಿಂದ ವಿಮುಕ್ತಿ ಹೊಂದುವುದು ಸಾಧ್ಯವಾಗುತ್ತದೆ.

ನಾವು ಪುಣ್ಯಕ್ಕಾಗಿ, ಪುರುಷಾರ್ಥಕ್ಕಾಗಿ ಸಮುದ್ರ ಸ್ನಾನಗಳನ್ನು, ನದಿ ಸ್ನಾನಗಳನ್ನು ಮಾಡುತ್ತಿರುತ್ತೇವೆ. ಗುಡಿ ಗೋಪುರಗಳನ್ನು ದರ್ಶಿಸಿ, ಪುಷ್ಕರಿಣಿ ಸ್ನಾನಗಳನ್ನು ಮಾಡಿ, ವಿಗ್ರಹದರ್ಶನ ಮಾಡಿಕೊಳ್ಳುತ್ತೇವೆ. ಸಪ್ತಸಾಗರ ಪರ್ಯಂತ ವ್ಯಾಪಿಸಿರುವ ಭೂಭಾಗದಲ್ಲಿ ಎಲ್ಲಾ ನದಿಗಳಲ್ಲಿಯೂ ಸ್ನಾನ ಮಾಡುವುದರಿಂದ ದೊರಕುವ ಪುಣ್ಯಕ್ಕಿಂತ, ಆತ್ಮಾಭಿವೃದ್ಧಿಯೇ ಶ್ರೇಷ್ಠ. ಅದು ಸದ್ಗುರುವಿನಿಂದಲೇ ಸಾಧ್ಯ.

ವೇದಗಳನ್ನು ಅಲ್ಲಿಂದ ಇಲ್ಲಿಗೆ, ಇಲ್ಲಿಂದ ಅಲ್ಲಿಗೆ ಪಠಿಸುವ ಘನ ಪಾಠಿಗಳಿಗಾಗಲಿ, ಉಪನಿಷತ್ತುಗಳನ್ನು ಕಂಠಪಾಠ ಮಾಡಿ ಉಪನ್ಯಾಸಗಳನ್ನು ಹೇಳಿದರೂ ಕೂಡಾ, ಜ್ಞಾನವು ಹಬ್ಬದು, ಅಷ್ಟೇ ಅಲ್ಲದೇ ಕಾವಿಯನ್ನು ಧರಿಸಿ ಶಿರೋಮುಂಡನೆ ಮಾಡಿಕೊಂಡು ಮಠಗಳಲ್ಲಿದ್ದರೂ ಸರಿಹೋಗದು.

'ಸತ್ಯವಾದ ಬ್ರಹ್ಮವು ಮನಸ್ಸನ್ನು ದಾಟಿದ ನಂತರ ಮಾತ್ರವೇ ಗೋಚರಿಸುತ್ತದೆ. ಮನಸ್ಸಿನಿಂದ ಅದನ್ನು ತಿಳಿದುಕೊಳ್ಳಲಾರೆವು.'

ಬ್ರಹ್ಮವು ನಿರ್ಗುಣ, ನಿರಾಮಯ, ನಿರಂಜನವಾದ್ದರಿಂದ ಅದನ್ನು ತಿಳಿದುಕೊಳ್ಳುವುದಕ್ಕೆ ಜ್ಞಾನವು ಸಾಲದು. ಪ್ರಜ್ಞೆ ಬೇಕು. ಅದು ಸದ್ಗುರುವಿನಿಂದಲೇ ಸಾಧ್ಯ ಆತನು ಕೊಟ್ಟಂತಹ ಸಾಧನೆಯಿಂದಲೇ ಸಾಧ್ಯ.

ಅಂಧನು ಸೂರ್ಯೋದಯವನ್ನು ನೋಡದಂತೆ, ಮೂಢನು ಗುರುರೂಪವನ್ನು, ಗುರುತತ್ವವನ್ನು ಅರ್ಥ ಮಾಡಿಕೊಳ್ಳಲಾರನು. ಅಜ್ಞಾನದಿಂದಲೇ ಅಲ್ಲ ಅಹಂಭಾವದಿಂದಲೂ ಗುರುವಿನಿಂದ ದೂರವಾಗುತ್ತಾನೆ.

ಸಾಧಕನು ರೂಪ ಧ್ಯಾನವನ್ನು ಬಿಟ್ಟು, ಅರೂಪ ಸ್ಥಿತಿಗೆ ಸೇರಿ, ನಿರ್ಗುಣೋಪಾಸನೆ ಮಾಡಿ, ರೂಪಾತೀತವಾದ ಪರಬ್ರಹ್ಮತತ್ವವನ್ನು ಗ್ರಹಿಸಬೇಕೆಂದರೆ ಗುರುವು ಎಷ್ಟೋ ಸಹಕರಿಸುತ್ತಾನೆ. ಅದಕ್ಕೆ ಸದ್ಗುರುವನ್ನು ಆಶ್ರಯಿಸಬೇಕು ಎಂದಿದ್ದಾರೆ.

# ಗುರುಗಳಲ್ಲಿ ವಿಧಗಳು!

ಬೋಧಿಸುವವರೆಲ್ಲಾ ಗುರುಗಳೇ ಆಗಲಿ ಅವರೆಲ್ಲಾ ಒಂದೇ ಸ್ಥಾಯಿಯಲ್ಲಿ ಇರುವುದಿಲ್ಲ. ಶಾಸ್ತ್ರಗಳಲ್ಲಿ ಗುರುಗಳನ್ನು 7 ರೀತಿಯಾಗಿ ವಿಭಜಿಸಿದ್ದಾರೆ.

1. ಸೂಚಕ ಗುರುವು : ಲೌಕಿಕವಾದ, ಪ್ರಾಪಂಚಿಕ ವಿದ್ಯೆಗಳನ್ನು ಕಲಿಸುವ ಗುರುಗಳನ್ನು ಸೂಚಕ ಗುರುವೆನ್ನುತ್ತಾರೆ.

2. ವಾಚಕ ಗುರುವು : ವರ್ಣಾಶ್ರಮಾದಿ ವಿಷಯಗಳಿಗೆ ಸಂಬಂಧಿಸಿದ ವಿದ್ಯೆಯನ್ನು ಧರ್ಮಾ ಧರ್ಮಗಳನ್ನು ತಿಳಿಸುವ ವಿದ್ಯೆಯನ್ನು ಬೋಧಿಸುವ ಗುರುವನ್ನು ವಾಚಕ ಗುರುವು ಎನ್ನುತ್ತಾರೆ.

3. ಕುಲ ಗುರುವು : ಪಂಚಾಕ್ಷರಿ ಮೊದಲಾದ ಮಂತ್ರಗಳನ್ನು ಉಪದೇಶಿಸುವ ಗುರುಗಳನ್ನು, ಕುಲಗುರುವೆನ್ನುತ್ತಾರೆ. ಇವರು ಮತ ಸಂಪ್ರದಾಯಗಳನ್ನು ಕೂಡಾ ಬೋಧಿಸುತ್ತಾರೆ. ಆದ್ದರಿಂದ ಕುಲಗುರುವೆನ್ನುತ್ತಾರೆ.

4. ನಿಷಿದ್ಧ ಗುರುವು : ವಾಮಾಚಾರಗಳು, ಭೂತಪ್ರೇತ, ಪಿಶಾಚಗಳು ಮೊದಲಾದ ತುಚ್ಛ ಮಂತ್ರಗಳನ್ನು ಉಪದೇಶಿಸುವ ಗುರುಗಳನ್ನು ನಿಷಿದ್ಧ ಗುರುವೆನ್ನುತ್ತಾರೆ.

5. ವಿಹಿತ ಗುರುವು : ಸಂಸಾರವು ಅನಿತ್ಯವೆಂದು ಹೇಳಿ ಅದಕ್ಕೆ ವೈರಾಗ್ಯ ಮಾರ್ಗವನ್ನು ಬೋಧಿಸುವವರನ್ನು ವಿಹಿತ ಗುರುವೆನ್ನುತ್ತಾರೆ.

6. ಕಾರಣ ಗುರುವು : "ಅಹಂ ಬ್ರಹ್ಮಾಸ್ಮಿ", "ತತ್ವಮಸಿ"ಯಂತಹ ಮಹಾವಾಕ್ಯಗಳನ್ನು ಬೋಧಿಸಿ, ದುಃಖ ನಿವಾರಣಾ ಮಾರ್ಗವನ್ನು ಬೋಧಿಸುವವರನ್ನು ಕಾರಣ ಗುರುವು ಎನ್ನುತ್ತಾರೆ.

7. ಪರಮ ಗುರುವ : ಸಮಸ್ತ ಸಂಶಯಗಳನ್ನು ಸಮೂಲದಿಂದ ನಿರ್ಮೂಲಿಸಿ ಮರಣ ಭಯವನ್ನು ಹೋಗಲಾಡಿಸಿ, ಸಂಸಾರ ಬಂಧನದಿಂದ ಹೊರಬರುವ ಮೋಕ್ಷ ಮಾರ್ಗವನ್ನು ತೋರಿಸುವವರಿಗೆ ಪರಮ ಗುರುವು ಎನ್ನುತ್ತಾರೆ.

ಈ ಪರಮ ಗುರುಗಳು ಆಧ್ಯಾತ್ಮಿಕ ಶಿಖರಗಳನ್ನು ಸೇರಿಕೊಂಡವರು. "ಎಂತಹ ಮಹಾಜ್ಞಾನಿಗಳಾದರೂ, ಎಂತಹ ಮಹಾ ಯೋಗಿಗಳಾದರೂ ಲೋಕದಲ್ಲಿ ಅತಿಸಾಮಾನ್ಯವಾಗಿ ಜೀವಿಸುತ್ತಿರುತ್ತಾರೆ. ತಮ್ಮ ಔನ್ನತ್ಯವನ್ನು (ಉನ್ನತೆ)" ತೋರ್ಪಡಿಸರು. ಸ್ವಲ್ಪವೂ ಪ್ರಚಾರವನ್ನು ಕೋರುವುದಿಲ್ಲ. ಎಷ್ಟು ಹೊತ್ತೂ ಲೋಕಕಲ್ಯಾಣಕ್ಕಾಗಿಯೇ ಶ್ರಮಿಸುತ್ತಿರುತ್ತಾರೆ. ಅನೇಕ ಜನ್ಮಗಳಲ್ಲಿ ಮಾಡಿದ ಪುಣ್ಯದಿಂದ

ಪರಮ ಗುರುವು ಲಭಿಸುತ್ತಾನೆ. ಅಂತಹ ಪರಮಗುರುವನ್ನು ಹೊಂದಿದವರು ಪುನಃ ಸಂಸಾರ ಬಂಧನದಲ್ಲಿ ಬೀಳರು. ಆದ್ದರಿಂದ ಪರಮಗುರುಗಳನ್ನು ಹೊಂದುವುದಕ್ಕೆ ಪ್ರಯತ್ನಿಸಬೇಕು.

ಗುರುಗಳೆಲ್ಲರೂ ಸರ್ವಜ್ಞರಲ್ಲ. ಬ್ರಹ್ಮಾನುಭೂತಿಗಳಲ್ಲ. ಅವರಲ್ಲಿ ಜ್ಞಾನವಿಲ್ಲದವರೂ ಇರುತ್ತಾರೆ. ಸುಳ್ಳು ಹೇಳುವವರೂ ಇರುತ್ತಾರೆ. ಡಂಭಾಚಾರದ ಮಾತುಗಳನ್ನು ನುಡಿಯುವವರೂ ಇರುತ್ತಾರೆ. ಎಲ್ಲಾ ತಮಗೆ ತಿಳಿದಿರುವಂತೆ ನಟಿಸುತ್ತಾ ಇರುತ್ತಾರೆ. ತಮ್ಮನ್ನು ತಾವು ಹೊಗಳಿಕೊಳ್ಳುತ್ತಾ ಇರುತ್ತಾರೆ. ಕಾರಣ ಜನ್ಮದವರೆಂದು ಹೇಳಿಕೊಳ್ಳುತ್ತಾರೆ. ಅವರು ಇತರರಿಗೆಕಲಿಸುವುದು ಏನು ಇರದು. ಅಂತಹ ಗುರುಗಳಿಂದ ಪ್ರಯೋಜನವಿರದು.

ನದಿ ದಾಟುವುದಕ್ಕೆ ಶಿಲೆಯನ್ನು ಆಶ್ರಯಿಸುತ್ತೇವೆಯೇ? ಇಲ್ಲಾ ಶಿಲೆಯನ್ನು ಆಧಾರ ಮಾಡಿಕೊಂಡು ನದಿಯನ್ನು ದಾಟಲಾರೆವು. ಹಾಗೆಯೇ ಅನುಭವವಿಲ್ಲದ ಗುರುವನ್ನು ನಂಬಿ ಪ್ರಯೋಜನವಿಲ್ಲ. ತಾನು ಬಿಡುಗಡೆಯಾಗದವನು ಇತರರಿಗೆ ಬಿಡುಗಡೆಯಾಗುವ ಮಾರ್ಗವನ್ನು ಹೇಗೆ ಬೋಧಿಸಬಲ್ಲನು?

ಆದ್ದರಿಂದ ಅಶಕ್ತರು, ಅಯೋಗ್ಯರು, ಅಹಂಭಾವವುಳ್ಳ ಗುರುಗಳನ್ನು ಬಿಟ್ಟು ಬಿಡುವುದು ಒಳ್ಳೆಯದು. ವೇಷಗಳನ್ನು ಹಾಕಿ, ಕಾಷಾಯಗಳನ್ನು ಧರಿಸಿ ತಾವು ಪರಿಶುದ್ಧರಾದಂತೆ ನಟಿಸುತ್ತಾರೆ. ಅಂತಹವರನ್ನು ಆಡಂಬರ ಗುರುಗಳು ಎನ್ನುತ್ತಾರೆ. ಅಂತಹವರ ಶಿಷ್ಯತ್ವ ಅಪಾಯಕರ.

ತಮಗೆ ಸಾಷ್ಟಾಂಗ ನಮಸ್ಕಾರ ಮಾಡದಿದ್ದರೆ ಕೋಪಗೊಳ್ಳುವ ಗುರುಗಳೂ ಇರುತ್ತಾರೆ. ಅವರದು ಮೇಕೆ ಹೋತುವಿನ ಗಾಂಭೀರ್ಯ. ಅಂತಹವರಿಂದ ಶಿಷ್ಯರಿಗೆ ಆಧ್ಯಾತ್ಮಿಕಾಭಿವೃದ್ಧಿ ಆಗದಿದ್ದರೆ ಕಷ್ಟನಷ್ಟಗಳನ್ನು ಎದುರಿಸುತ್ತಾರೆ.

ಆದ್ದರಿಂದ ಗುರುಗಳನ್ನು ಆಯ್ಕೆ ಮಾಡಿಕೊಳ್ಳುವ ಮೊದಲು ಶಿಷ್ಯನು ಎಚ್ಚರ ವಹಿಸಬೇಕು. ನೀನು ನನಗೆ ಶಿಷ್ಯನಾಗು ಎಂದು ಯಾವ ಉತ್ತಮ ಗುರುವು ಬೇಡುವುದಿಲ್ಲ. ಸಾಧಕನೇ ಗುರುವನ್ನು ಆಯ್ಕೆ ಮಾಡಿಕೊಳ್ಳಬೇಕು.

ಆತ್ಮವಿಶ್ವಾಸವನ್ನು ಕಳೆದುಕೊಳ್ಳದಂತೆ ಎಲ್ಲರೊಂದಿಗೂ ಸ್ವೇಚ್ಛೆಯಿಂದ ಬೆರೆಯುವಂತಾಗಬೇಕು — **ಬ್ರಹ್ಮರ್ಷಿ ಪತ್ರೀಜಿ**

**ಆತ್ಮ ವಿಶ್ವಾಸವನ್ನು ಕಳೆದುಕೊಳ್ಳದಂತೆ ಎಲ್ಲರೊಂದಿಗೂ ಸ್ವೇಚ್ಛೆಯಿಂದ ಬೆಳೆಯುವಂತಾಗಬೇಕು** **ಪತ್ರೀಜಿ.**

# ಶಿಷ್ಯನೆಂದರೆ?

**ಶಿಷ್ಯರಲ್ಲಿ ೨ ವಿಧಗಳು**

1. ಜ್ಞಾನವನ್ನು ಆಪೇಕ್ಷಿಸುವವರು
2. ಮೋಕ್ಷವನ್ನು ಆಪೇಕ್ಷಿಸುವವರು

ಜೇನುಹುಳು ಒಂದು ಹೂವಿನ ಜೇನಿನೊಂದಿಗೆ ತೃಪ್ತಿ ಹೊಂದದು. ಅನೇಕ ಪುಷ್ಪಗಳ ಮೇಲೆ ವಾಲಿ ಜೇನನನ್ನು ಕುಡಿಯುತ್ತದೆ. ಒಳ್ಳೆಯ ಜೇನು ಹೊಟ್ಟೆ ತುಂಬಾ ಲಭಿಸುವವರೆಗೂ ಹೂಗಳನ್ನು ಅನ್ವೇಷಿಸುತ್ತಲೇ ಇರುತ್ತದೆ.

ಹಾಗೆಯೇ ಜ್ಞಾನಾಪೇಕ್ಷೆವುಳ್ಳ ಶಿಷ್ಯನು ಒಬ್ಬ ಗುರುವಿನೊಂದಿಗೆ ತೃಪ್ತಿಪಡನು. ತನ್ನ ಜ್ಞಾನದಾಹ ತೀರುವವರೆಗೂ ಎಷ್ಟೋ ಗುರುಗಳನ್ನು ದರ್ಶಿಸಿ ಸೇವೆ ಗೈಯುತ್ತಾನೆ. ಕೊನೆಗೆ ತನ್ನ ಆಪೇಕ್ಷೆಗೆ, ಆಶಯಕ್ಕೆ ತಕ್ಕ ಗುರುವಿನ ಬಳಿ ಸ್ಥಿರವಾಗಿ ಸರ್ವ ಸಮರ್ಪಣೆ ಮಾಡಿಕೊಂಡು ಆತನೊಬ್ಬನನ್ನೇ ತನ್ನ ಗುರುದೇವನಾಗಿ ಭಾವಿಸುತ್ತಾನೆ. ಆತನಿಗೆ ಅಂಕಿತವಾಗಿಬಿಡುತ್ತಾನೆ. ಹಾಗೆ ಸದ್ಗುರುವು ಲಭಿಸುವವರೆಗೂ ತಾಪತ್ರಯ, ಅನ್ವೇಷಣೆ ಸಾಗುತ್ತಿರುತ್ತದೆ.

ಜಿಜ್ಞಾಸಿಗಳು, ಗುಣವಂತರು ಆತನ ಶಿಷ್ಯಂದಿರು ಜ್ಞಾನಮೂರ್ತಿಗಳಾದ ಅವರನ್ನೇ ಗುರುವಾಗಿ ಅಂಗೀಕರಿಸುತ್ತಾರೆ. ಕಂಡವರಿಗೆಲ್ಲಾ ನಮಸ್ಕಾರ ಮಾಡರು. ಗುರುವಿನ ವೇಷಭೂಷಣಗಳನ್ನಲ್ಲದೆ. ಆತ್ಮ ಸಂಸ್ಕಾರವನ್ನು, ಪ್ರಜ್ಞೆಯನ್ನು ಅಂದಾಜು ಮಾಡಬಲ್ಲ ಶಕ್ತಿ, ಅಂತಹ ಜಿಜ್ಞಾಸಪರರಾದ, ಗುಣಸಂಪನ್ನರಾದ ಶಿಷ್ಯನಿಗೇ ಇರುತ್ತದೆ.

ಸದ್ಗುರುಗಳು ಶಿಷ್ಯನನ್ನು ಸ್ವೀಕರಿಸುವ ಮೊದಲು ಅವರ ಗುಣ, ಲಕ್ಷಣಗಳನ್ನು, ಶೀಲ ಸ್ವಭಾವಗಳನ್ನು, ವರ್ತನೆಯನ್ನು, ಕ್ರಮ ಶಿಕ್ಷಣವನ್ನು, ಸಂಸ್ಕಾರಗಳಂತವುಗಳನ್ನು ಪರಿಗಣಿಸಿ ಸ್ವೀಕರಿಸುತ್ತಾರೆ.

ಆತ್ಮಸ್ತುತಿ ಮಾಡಿಕೊಳ್ಳುತ್ತಾ, ಪರರನ್ನು ವಿಮರ್ಶಿಸಿ, ನಿಂದಿಸುವವರು, ಪಾಪಕಾರ್ಯಗಳನ್ನು ಮಾಡುವವರು, ದೈವ ಚಿಂತನೆ ಇಲ್ಲದವರು, ಆಧ್ಯಾತ್ಮಿಕ ಅರಿವು ಕಿಂಚಿತ್ತೂ ಇಲ್ಲದವರು, ಮಂದ ಬುದ್ಧಿಗಳು, ಮೊಂಡುತನದವರು ವ್ಯಸನಪರರು, ಕೃತಜ್ಞತೆ ಇಲ್ಲದವರು, ಆಚಾರ ಹಾಗೂ ಸದ್ವರ್ತನೆ ಇಲ್ಲದವರನ್ನು ಶಿಷ್ಯರಾಗಿ ಸ್ವೀಕರಿಸುವುದಿಲ್ಲ. ಅಂತಹವರು ಶಿಷ್ಯರಾಗಿ ಕೆಲಸಕ್ಕೆ ಬಾರರು ಕೂಡಾ.

ಹಾಗೆಯೇ ಮಾಡಬೇಕಾದ ಕರ್ಮಗಳನ್ನು ಮಾಡದವರು, ಕ್ಷಮಾಗುಣವಿಲ್ಲದವರು, ಪರರನ್ನು ನಿಂದಿಸುವ ಬುದ್ಧಿಯುಳ್ಳವರು, ಅನಾವಶ್ಯಕವಾಗಿ

ವಾದಕ್ಕಿಳಿಯುವವರು, ಲೋಭಗುಣವುಳ್ಳವರು, ಕಾಮುಕರು, ಕೋಪಿಷ್ಠರು, ಹಿಂಸಾಪ್ರವೃತ್ತಿಯುಳ್ಳವರು, ಮೂರ್ಖರಂತವರನ್ನು ಸದ್ಗುರುಗಳು ಶಿಷ್ಯರನ್ನಾಗಿ ಅಂಗೀಕರಿಸುವುದಿಲ್ಲ. ಸ್ವಧರ್ಮವನ್ನು ಪಾಲಿಸದವರನ್ನು, ಜ್ಞಾನ ಬಯಕೆ ಇಲ್ಲದವರನ್ನು, ನೈತಿಕ ವರ್ತನೆ ಇಲ್ಲದವರನ್ನು, ಪಾಪ ಭೀತಿ ಇಲ್ಲದವರನ್ನು ಸದ್ಗುರುಗಳು, ಶಿಷ್ಯರನ್ನಾಗಿ ಸ್ವೀಕರಿಸುವುದಿಲ್ಲ.

ಆದ್ದರಿಂದ ಹೆಚ್ಚು ವಿವೇಕ, ವಿಚಕ್ಷಣೆ ತೋರಿಸಬೇಕಾದದ್ದು ಶಿಷ್ಯನೇ. ಒಂದು ರೀತಿಯಲ್ಲಿ ಗುರುವನ್ನು ಆಯ್ಕೆ ಮಾಡಿಕೊಳ್ಳುವುದು ಕಷ್ಟವಾದ ಕೆಲಸವೇ. ಕಾರಣ ಸದ್ಗುರುಗಳು ಶಿಷ್ಯನ ಅಂದಾಜಿಗೆ, ಬುದ್ಧಿಗೆ ನಿಲುಕರು. ಒಂದು ಹಂತಕ್ಕೆ ಅರ್ಥವಾಗರು. ಪೂರ್ವ ಜನ್ಮದ ಸುಕೃತ ಈ ಜನ್ಮದಲ್ಲಿ ಮಾಡುವ ಪುಣ್ಯ ಇರುವವರಿಗೇ ಸದ್ಗುರುವು ಲಭಿಸುತ್ತಾನೆ.

**ಶಿಷ್ಯನ ವರ್ತನೆ**

ಶಿಷ್ಯನಿಗೆ ಸದ್ಗುರುವು ದೊರಕಿದ ನಂತರ ಗುರುವನ್ನು ನಿರ್ಲಕ್ಷ್ಯ ಮಾಡಬಾರದು. ಅವಮಾನ ಮಾಡಬಾರದು. ಗುರುವಿನಲ್ಲಿರದ ಶಕ್ತಿಗಳು ತನಗೆ ಲಭಿಸಿದರೂ, ಆವು ತನಗೆ ಅನನ್ಯವಾದ ಗುರುಭಕ್ತಿಯಿಂದ ಲಭಿಸಿವೆ ಎಂದುಕೊಳ್ಳಬೇಕಾಗಲಿ, ಅಹಂಕರಿಸಬಾರದು. ಹಾಗೆ ಮಾಡಿದರೆ ಪರಿಪೂರ್ಣತೆ ಲಭಿಸದು.

ಶಿಷ್ಯನು ಎಷ್ಟು ವಿವೇಕವಂತನಾದರೂ. ಪಂಡಿತನಾದರೂ, ಹೆಸರು, ಪ್ರಖ್ಯಾತಿಗಳೂ ಉಳ್ಳವನಾದರೂ ಗುರುವಿನ ನಂತರವೇ ಅವನು. ಗುರುವು ಶಿಷ್ಯನನ್ನು ಎಂದಿಗೂ ಪಲ್ಲಕ್ಕಿಯನ್ನು ಹತ್ತಿಸುವುದಿಲ್ಲ. ಶ್ರೇಷ್ಠವಾದವನೆಂದು, ಜ್ಞಾನಿಯೆಂದು, ಉತ್ತಮೋತ್ತಮನೆಂದು ಹೊಗಳುವುದಿಲ್ಲ. ಶಿಷ್ಯನು ಸಾಧನೆ ಮಾಡಿ ಉನ್ನತಿಯನ್ನು ಸಂಪಾದಿಸಿದಷ್ಟು ವಿನಯವನ್ನು ಪ್ರದರ್ಶಿಸಬೇಕೇ ಹೊರತು ಅಹಂಕಾರಪಡಬಾರದು. ಏಕೆಂದರೆ ಎಷ್ಟು ಕಲಿತರೂ ಇನ್ನೂ ಗುರುವಿನಿಂದ ಕಲಿತುಕೊಳ್ಳಬೇಕಾದದ್ದು ಬಹಳ ಇರುತ್ತದೆ.

**ಶಿಷ್ಯನು ತಾನು ಬೆಳೆಯುತ್ತಿದ್ದೇನೆ ಎಂದುಕೊಳ್ಳುತ್ತಾನೆ. ಅದಕ್ಕೂ ಹತ್ತರಷ್ಟು ಗುರುವು ಮೇಲೆ ಹೋಗುತ್ತಲೇ ಇರುತ್ತಾನೆ.** ಅಭಿಮಾನ, ಹೊಗಳಿಕೆ ಶಿಷ್ಯನ ಅಭ್ಯುದಯಕ್ಕೆ ಅವರೋಧವೆಂದು ಗುರುವಿಗೆ ಗೊತ್ತು.

ಕನಸಿನಲ್ಲಿಯೂ ಕೂಡಾ ಗುರುವಿನ ಲೋಪಗಳನ್ನು ಎಣಿಸಬಾರದು. ಗುರುವಿನ ನಂತರವೇ ತಾನು ಎಂಬ ವಿಷಯವನ್ನು ಮರೆಯಬಾರದು. ಜೀವಿಸಿದಷ್ಟು ಕಾಲ

ಶಕ್ತಿಯನ್ನು ಅನುಗ್ರಹಿಸುವುದು, ಬೆಳಕನ್ನು ಪ್ರಸಾದಿಸುವುದು ಗುರುವೇ ಎಂದು ನಂಬಬೇಕು. ಗುರುವನ್ನು ನಿರ್ಲಕ್ಷ್ಯ ಮಾಡಿದರೆ ಯಾರಾಗಲಿ ಪತನವನ್ನು ಹೊಂದುತ್ತಾರೆ.

ಗುರುವಿನ ಸಮಕ್ಷಮದಲ್ಲಿ ವಿನಯ ವಿಧೇಯತೆಗಳಿಂದ ವರ್ತಿಸಬೇಕು. ಎಂತಹ ಪರಿಸ್ಥಿತಿಯಲ್ಲಿ ಸುಳ್ಳನ್ನು ಹೇಳಬಾರದು. ಆತನ ಸನ್ನಿಧಿಯಲ್ಲಿ ಅಸಹನೆಯಿಂದ, ಅ ಇಷ್ಟದಿಂದ, ಸಿಡಿಮಿಡಿಯಿಂದ ಇರಬಾರದು. ಗುರುವು ಕುಳಿತ ಸ್ಥಳದಲ್ಲಿ ಎತ್ತರದಲ್ಲಾಗಲಿ, ಮುಂದೆಯಾಗಲಿ ಕುಳಿತುಕೊಳ್ಳಬಾರದು. ತಾನು ಗುರುವಿಗಿಂತ ಸಣ್ಣವನೆಂದು, ವಿದ್ಯಾರ್ಥಿಯೆಂಬ ಭಾವದಿಂದ ನಡೆದುಕೊಳ್ಳಬೇಕು.

ಗುರುವಿನ ಮುಂದೆ ಅನಾವಶ್ಯಕವಾಗಿ ಬಾಯಿ ತೆಗೆಯಬಾರದು. ವಿತಂಡವಾದವನ್ನು ಮಾಡಬಾರದು. ತಾನು ಬುದ್ಧಿವಂತನೆಂದು ಅನಿಸಿಕೊಳ್ಳುವುದಕ್ಕೆ ಪ್ರಯತ್ನಿಸಬಾರದು. ತನಗೆ ತಿಳಿದಿರುವುದಕ್ಕಿಂತ ಗುರುವು ಹೇಳಿದ್ದು ಭಿನ್ನವಾಗಿ ಇರಬಹುದು. ಅದರಲ್ಲಿ ಆತನ ಅನುಭವವಿರುತ್ತದೆ. ಗುರುವನ್ನು ಚರ್ಚೆಯಿಂದ ಸೋಲಿಸಬೇಕೆಂದು, ಅವಮಾನಿಸಬೇಕೆಂದು, ತನ್ನ ಅಧಿಕತೆಯನ್ನು ಪ್ರದರ್ಶಿಸಬೇಕೆಂದು ಆಲೋಚನೆ ಮಾಡುವ ಶಿಷ್ಯನು ಮರು ಜನ್ಮದಲ್ಲಿ ಕ್ರೂರವಾಗಿ ಬದುಕಬೇಕಾಗುತ್ತದೆ.

ಮಾನವರಿಗೆ ಇರುವ 3 ರೀತಿಯ ಶಾಪಗಳಾದ ಋಷಿಶಾಪ, ನಾಗಶಾಪ, ದೇವತಾ ಶಾಪಗಳಿಂದ ರಕ್ಷಿಸುವವನೇ ಗುರುವೇ. ಮುಡುಪುಗಳನ್ನು ಸಲ್ಲಿಸಿದ್ದರೆ ಕೋಪಗೊಳ್ಳುವ ಕ್ಷುದ್ರ ದೇವತೆಗಳಿಂದ, ನೀಚದೇವತೆಗಳಿಂದ ರಕ್ಷಿಸಬಲ್ಲವನು ಗುರುವೇ.

ಅಂತಹ ಗುರುವನ್ನು ಅವಮಾನಿಸಿದವನು. ಕೇವಲವಾಗಿ ನೋಡುವವನು ಘೋರವಾಗಿ ಪತನ ಹೊಂದುತ್ತಾನೆ, ಭ್ರಷ್ಟನಾಗುತ್ತಾನೆ. ಆದ್ದರಿಂದ ಸದ್ವರ್ತನೆಯಿಂದ ಗುರುವನ್ನು ಹೊಂದಬೇಕು. **ವಿದ್ಯಾರ್ಥಿಯಾಗಬಾರದು, ಶಿಷ್ಯನಾಗಬೇಕು.**

## ಗುರು ಕೃಪೆ ಇದ್ದರೆ!

ಸದ್ಗುರುವು ಶಿಷ್ಯನನ್ನು ಸ್ವೀಕರಿಸಿದ ನಂತರ ಆ ಶಿಷ್ಯನನ್ನು ಜ್ಞಾನವಂತನನ್ನಾಗಿ ಮಾಡುವುದಕ್ಕೆ ಆನೇಕ ವಿಧಗಳಲ್ಲಿ ಪ್ರಯತ್ನಿಸುತ್ತಾನೆ. ಹಾಗೆಯೇ ಶಿಷ್ಯನನ್ನು ತನ್ನಂತೆ ಮಾಡುವುದಕ್ಕೆ ಪ್ರಯತ್ನಿಸುತ್ತಾನೆ. ಆ ರೀತಿಯಲ್ಲಿ ಮಾಡುವುದಕ್ಕೆ. 4 ರೀತಿಯ ದೀಕ್ಷೆಗಳ ಮೂಲಕ ಪ್ರಯತ್ನಿಸುತ್ತಾನೆ.

ಅವು 1. ದೃಕ್ ದೀಕ್ಷೆ 2. ಸ್ಪರ್ಶದೀಕ್ಷೆ 3. ವಾಕ್ ದೀಕ್ಷೆ 4. ಮನೋದೀಕ್ಷೆ

**1. ದೃಕ್ ದೀಕ್ಷೆ :** "ಇದನ್ನೇ ಮೀನಿನ ನ್ಯಾಯವೆನ್ನುತ್ತಾರೆ". ಮೀನು ಮೊಟ್ಟೆಗಳನ್ನಿಟ್ಟು ಹಿಂದಕ್ಕೆ ತಿರುಗಿ, ಅವುಗಳನ್ನು ತೀಕ್ಷ್ಣವಾಗಿ ನೋಡುತ್ತದೆ. ತಾಯಿ ಮೀನಿನ ದೃಷ್ಟಿ ಸೋಕಿದೊಡನೆ ಮೊಟ್ಟೆಗಳು ಮರಿಗಳಾಗಿ ಬದಲಾಗುತ್ತವೆ.

ಹಾಗೆಯೇ ಸದ್ಗುರುವಿನ ಕರುಣಾಮೃತ ಕಟಾಕ್ಷ ವೀಕ್ಷಣೆಗಳು (ನೋಟಗಳು) ಪ್ರಸರಿಸುವುದರಿಂದ ಶಿಷ್ಯನು ಜ್ಞಾನ ಪರಿಪುಷ್ಟಿ ಹೊಂದುತ್ತಾನೆ. ಆಗಿನಿಂದ ಅಜ್ಞಾನ ಜೀವನವನ್ನು ಬಿಟ್ಟು, ಜ್ಞಾನ ಜೀವಿಯಾಗಿ ಆತ್ಮನನ್ನು ದರ್ಶಿಸುತ್ತಾನೆ.

**2. ಸ್ಪರ್ಶ ದೀಕ್ಷೆ :** ಇದನ್ನೇ "ವಿಹಂಗಮ ನ್ಯಾಯ"ಯೆನ್ನುತ್ತಾರೆ. ಪಕ್ಷಿ ಮೊಟ್ಟೆಗಳನ್ನಿಟ್ಟು ಹುದುಗಿದ ತನ್ನ ರೆಕ್ಕೆಗಳ ಸ್ಪರ್ಶದಿಂದ ಮೊಟ್ಟೆಗಳನ್ನು ಮರಿಗಳಾಗಿ ಮಾಡಬಲ್ಲದಾಗಿದೆ.

ಹಾಗೆಯೇ ಸದ್ಗುರುವಿನ ತನ್ನ ದಿವ್ಯ ವರಧಾಭಯ ಹಸ್ತಗಳಿಂದ ಸ್ಪರ್ಶದ ಮೂಲಕ ಆತ್ಮಜ್ಞಾನವನ್ನು ಒದಗಿಸುತ್ತಾನೆ.

**3. ವಾಕ್ ದೀಕ್ಷೆ :** "ಇದನ್ನೇ ಭ್ರಮರಕೀಟಕ ನ್ಯಾಯ"ವೆನ್ನುತ್ತಾರೆ. ಭ್ರಮದವು ಒಂದು ಕೀಟವನ್ನು ತಂದು ಗೂಡಿನಲ್ಲಿಟ್ಟು, ದ್ವಾರದ ಬಳಿ ಝೇಂಕಾರ ಶಬ್ದ ಮಾಡುತ್ತದೆ. ಕೀಟಕವು ಭ್ರಮರವನ್ನು ನೋಡುತ್ತಾ, ಭ್ರಮರವಾಗಿ ಬದಲಾಗಿ ಹೋಗುತ್ತದೆ. ಮಕರಂದವನ್ನು ಸ್ವೀಕರಿಸುತ್ತದೆ.

ಹಾಗೆಯೇ ಸದ್ಗುರುವು ಶಿಷ್ಯನಿಗೆ ತನ ಮೃದು ಮಧುರವಾದ ವಾಕ್ಯಗಳಿಂದ ಬೋಧಿಸುತ್ತಾ ತನ್ನಂತೆಯೇ ತಯಾರು ಮಾಡುತ್ತಾನೆ.

**4. ಮನೋ ದೀಕ್ಷೆ :** "ಇದನ್ನೇ ಆಮೆಯ ಆಲೋಚನೆ ಎನ್ನುತ್ತರೆ. ಆಮೆಯ ಒಂದು ಕಡೆ ಮೊಟ್ಟೆಗಳನ್ನಿಟ್ಟು ಆಹಾರಕ್ಕೆ ಹೋಗುತ್ತದೆ. ಮೇಘಗಳು, ಮಿಂಚುಗಳ ಶಬ್ದವನ್ನು ಕೇಳಿದೊಡನೆ ಆಮೆಯು ಇಂತಹ (ಹತ್ತಿರ) ಸ್ಥಳದಲ್ಲಿ ನಾನು ಮೊಟ್ಟೆಗಳನ್ನಿಟ್ಟಿದ್ದೇನೆ. ಈ ಮಿಂಚುಗಳ ಶಬ್ದಕ್ಕೆ ಆ ಮೊಟ್ಟೆಗಳು ಮರಿಗಳಾಗಬೇಕೆಂದು ಸಂಕಲ್ಪಿಸುತ್ತದೆ. ಆ ಸಂಕಲ್ಪಬಲದಿಂದ ಆ ಮೊಟ್ಟೆಗಳು ಮರಿಗಳಾಗಿ ತಯಾರಾಗುತ್ತವೆ."

ಹಾಗೆಯೇ ಶಿಷ್ಯನು ಎಲ್ಲಿದ್ದರೂ ಆತನು, ನಾನು ಹೇಳಿದ ವಿದ್ಯೆಯನ್ನು ಶ್ರದ್ಧೆಯಿಂದ ಆಚರಿಸುತ್ತಾ ಇರುತ್ತಾನೆ. ಬಹಳ ದೀಕ್ಷೆಯಿಂದ ಆಚರಿಸುತ್ತಾ ಇರುತ್ತಾನೆ. ಆತನು ಪರಬ್ರಹ್ಮನ ಜ್ಞಾನವನ್ನು ಹೊಂದುವುದಕ್ಕೆ ಅರ್ಹನು. ಆತನು ಶೀಘ್ರವಾಗಿ ಪರಮಾರ್ಥವನ್ನು ಹೊಂದಬಲ್ಲನು ಎಂದು ಸಂಕಲ್ಪಿಸುತ್ತಾನೆ. ಆ ದಿವ್ಯ ಸಂಕಲ್ಪ ಬಲದಿಂದ ಶಿಷ್ಯನು ಅಭಿವೃದ್ಧಿ ಹೊಂದಿ, ಪರಮಾರ್ಥವನ್ನು ಹೊಂದುತ್ತಾನೆ.

ಸೂರ್ಯ ಕಿರಣಗಳು ಸೋಕಿದೊಡನೆ ಕಮಲಗಳು ವಿಕಸಿಸುವಂತೆ ಗುರುದೇವನ ಕರುಣೆ ಸೋಕಿದೊಡನೆ, ವೇದ, ವೇದಗಳು, ಉಪನಿಷತ್ ಜ್ಞಾನ ವಿಷಯಗಳು, ಸುಧೆಗಳು ಶಿಷ್ಯನಿಗೆ ಸಿಗುತ್ತವೆ. ಆದ್ದರಿಂದ ಶಿಷ್ಯನು ಸದ್ಗುರುಗಳನ್ನು ಆಶ್ರಯಿಸಿ ಆತನ ಕೃಪೆಯನ್ನು ಹೊಂದುವುದಕ್ಕೆ ಪ್ರಯತ್ನಿಸಬೇಕು. ಜೀವನವನ್ನು ಧನ್ಯ ಮಾಡಿಕೊಳ್ಳಬೇಕು.

# ಗುರುಗಳ ಕೋಪ!

ಶ್ಲೋಕ ॥ ಕರ್ಮಣ್ಯ ಕರ್ಮಣಿಯಃ ವಶ್ಯೇದ ಕರ್ಮಣಿ ಚಕರ್ಮ ಯಃ

ನ ಬುದ್ಧಿಮಾನ್ ಮನುಷ್ಯೇಷು ನ ಯುಕ್ತಃ ಕೃತ್ಸ್ನಕರ್ಮಕೃತ್ ॥

ತಾತ್ಪರ್ಯ : ಯಾರು ಕರ್ಮದಲ್ಲಿ ಅಕರ್ಮವನ್ನು, ಅಕರ್ಮದಲ್ಲಿ ಕರ್ಮವನ್ನು ನೋಡುತ್ತಾನೋ ಅವನೇ ಮಾನವರೆಲ್ಲರಲ್ಲೂ ಬುದ್ಧಿವಂತನು! ಅವನೇ ಯೋಗಿ ಆಗುತ್ತಿದ್ದಾನೆ! ಸಕಲ ಕರ್ಮಗಳನ್ನು ಆಚರಿಸಿದವನಾಗುತ್ತಾನೆ.

ಏಕೆಂದರೆ ಎಲ್ಲದಕ್ಕೂ ಮನಸ್ಸೇ ಪ್ರಧಾನವಾಗಿರುವುದರಿಂದ ಕರ್ಮ ಮಾಡದವರಿಗೆ, ಕರ್ಮ ಮಾಡಿದವರಿಗೆ, ಅವರವರ ಭಾವವನ್ನು ಅನುಸರಿಸಿಯೇ ಫಲವು ದೊರಕುತ್ತದೆಯಾಗಲಿ, ಕರ್ಮವನ್ನಾಧರಿಸಿ ಅಲ್ಲ. ಇದೇ ಶ್ರೀ ಕೃಷ್ಣ ಪರಮಾತ್ಮನು ಮೇಲಿನ ಶ್ಲೋಕದ ಮೂಲಕ ಹೇಳಿರುವುದು. ಇದು ಬಹಳ ಜನರಿಗೆ ಅರ್ಥವಾಗದೇ ಕರ್ಮವನ್ನು ನೋಡುತ್ತಿದ್ದಾರಾಗಲಿ ಆ ಕರ್ಮದಲ್ಲಿ ಅವರ ಭಾವವನ್ನು ಗ್ರಹಿಸಲಾರದೆ ಹೋಗುತ್ತಿದ್ದಾರೆ. ಶ್ರೇಷ್ಠ ಯೋಗೀಶ್ವರನಾದ ಶ್ರೀ ಕೃಷ್ಣ ಪರಮಾತ್ಮನು ಹೇಳಿದ್ದು, ಸಾಮಾನ್ಯರು ಅರ್ಥಮಾಡಿಕೊಳ್ಳುವುದು ಬಹಳ ಕಷ್ಟ, ಮಾಡಿಕೊಳ್ಳಲಾರರೂ ಕೂಡಾ.

ಇಬ್ಬರು ಸಾಧುಗಳು ಪ್ರಯಾಣ ಮಾಡುತ್ತಿದ್ದರೆ ಅವರಿಗೆ ದಾರಿಯಲ್ಲಿ ಒಂದು ಹಳ್ಳ ಅಡ್ಡ ಬಂದಿತು. ಅಲ್ಲಿ ಒಬ್ಬ ಸ್ತ್ರೀ ಹಳ್ಳ ದಾಟಲಾರದೆ ಅಲ್ಲಿಯೇ ನಿಂತಿದ್ದಾಳೆ. ಆ ಸಾಧುಗಳನ್ನು ನೋಡಿದೊಡನೆ ಆಕೆ ಅವರನ್ನು ಹಳ್ಳವನ್ನು ದಾಟಿಸೆಂದು ಕೋರಿದಳು. ಕೂಡಲೇ ಅವರಿಬ್ಬರಲ್ಲಿ ಒಬ್ಬ ಸಾಧುವು ಆಕೆಯನ್ನು ಎತ್ತಿಕೊಂಡು ಹಳ್ಳವನ್ನು ದಾಟಿಸಿದನು.

ನಂತರ ಇಬ್ಬರು ಸಾಧುಗಳು ತಮ್ಮ ದಾರಿಯಲ್ಲಿ ಹೊರಟು ಹೋದರು. ಸ್ವಲ್ಪ ದೂರದಲ್ಲಿ ಹೋದ ನಂತರ 2ನೇ ಸಾಧುವು ಏನಯ್ಯ ಸ್ತ್ರೀಯನ್ನು ಮುಟ್ಟಿಕೊಂಡು

ಅಪಚಾರ ಮಾಡಿದೆ? ಎಂದನು. ಆಗ ಮೊದಲನೆಯ ಸಾಧುವು ನಾವು ಎರಡು ಮೈಲಿಗಳು ಬಂದಿದ್ದೇವೆ. ನೀನು ಆಕೆಯನ್ನು ಇನ್ನೂ ಹೊತ್ತುಕೊಂಡು ಬರುತ್ತಿರುವೆಯಾ? ನಾನು ಆಕೆಯನ್ನು ಅಲ್ಲಿಯೇ ಬಿಟ್ಟು ಬಿಟ್ಟೆನಲ್ಲ? ಎಂದು ಆಶ್ಚರ್ಯದಿಂದ ಪ್ರಶ್ನಿಸಿದನು.

ಇಲ್ಲಿ ಗ್ರಹಿಸಬೇಕಾಗಿರುವುದು ಸ್ತ್ರೀಯನ್ನು ಮುಟ್ಟದೇ ಹೋದರೂ ಎರಡನೆಯ ಸಾಧುವಿನ ಮನಸ್ಸಿನಲ್ಲಿ ಆ ಭಾವವು ಇರುವುದರಿಂದ, ಎರಡು ಮೈಲು ಬಂದರೂ ಆಕೆಯನ್ನು ಮರೆತು ಹೋಗದಿರುವುದರಿಂದ ಭೌತಿಕವಾಗಿ ಕರ್ಮ ಮಾಡದೇ ಹೊದರೂ, ಕರ್ಮ ಮಾಡಿದವನಾದನು.

ಮೊದಲನೆಯ ಸಾಧುವು ಸ್ತ್ರೀಯನ್ನು ಮುಟ್ಟಿಕೊಂಡರೂ ಮನಸ್ಸಿನಲ್ಲಿ ಆ ಭಾವವು ಇಲ್ಲದೆ ಹೋದ್ದರಿಂದ ಕರ್ಮ ಮಾಡಿದರೂ, ಕರ್ಮ ಮಾಡದವನಾದನು. ಆದ್ದರಿಂದ ಶ್ರೀ ಕೃಷ್ಣ ಭಗವಾನನು ಹೇಳಿದ ಪ್ರಕಾರ ಕರ್ಮದಲ್ಲಿ ಅಕರ್ಮವನ್ನು ಅಂದರೆ, ಕರ್ಮ ಮಾಡಿದ ಭಾವವು ಶುದ್ಧವಾಗಿದೆಯಾದ್ದರಿಂದ ಮೊದಲನೆ ಸಾಧುವೇ ಯೋಗಿಯ ಕೆಳಗೆ ಲೆಕ್ಕಕ್ಕೆ ಬರುತ್ತಾನೆ.

ಹಾಗೆಯೇ ಪತ್ರೀಜಿಯವರನ್ನು ನೋಡಿ ಬಹಳ ಜನ ಅದೇನು? ಭಗವಂತನೆನ್ನುತ್ತೀರಿ. ಆತನಿಗೆ ಅಷ್ಟು ಕೋಪವೇತಕ್ಕೆ? ಎನ್ನುತ್ತಾರೆ. ಕೆಲವರು ಹೊರಗೆ ಅನ್ನಲಾರದೇ ಹೋದರೂ ಒಳಗೇ ಅಂದುಕೊಳ್ಳುತ್ತಾರೆ. ಆತನೊಂದಿಗೆ ಸನ್ನಿಹಿತವಾಗಿ ಇರುವವರಿಗೆ ಕೂಡಾ ಇದು ಅರ್ಥವಾಗದು.

ಆತನ ಕೋಪ ಅವರ ತಪ್ಪಾದ ಮಾತುಗಳ ಮೇಲೆ, ಕೆಲಸಗಳ ಮೇಲೆಯೇ ಹೊರತು ಅವರ ಮೇಲೆ ಅಲ್ಲ. ಆತನ ಭಾವವು ಅವರ ಜೀವನವನ್ನು ಸರಿಮಾಡುವುದಕ್ಕೆ, ಅವರ ಗುಣಗಳನ್ನು ಬದಲಾಯಿಸುವುದಕ್ಕೆ. ಆದರೆ ಅವರ ಮೇಲೆ ದ್ವೇಷ, ಹಗೆಯಿಂದ ಅಲ್ಲ. ಏಕೆಂದರೆ ಆತನಿಗೆ ಶತೃಗಳಿಲ್ಲ, ಮಿತ್ರರೂ ಇಲ್ಲ. ಆದ್ದರಿಂದ ಆತನು ಕರ್ಮ ಮಾಡಿದಂತೆ ಕಂಡರೂ ಆತನು ಅಕರ್ಮನೇ ಅಂದರೆ ಕರ್ಮ ಮಾಡದವನೇ.

ಹಾಗೆಯೇ ಆತನ ಬಳಿಗೆ ಯಾರು ಬಂದರೂ ಜ್ಞಾನವನ್ನು ಹೊಂದುವುದಕ್ಕೆ ಬಂದಿದ್ದಾರೆಂದು ಭಾವಿಸುತ್ತಾರೆ. ಜ್ಞಾನಕ್ಕಾಗಿ ಬಂದವರನ್ನು ಯಾವ ಗುರುವಾಗಲಿ ಅವರ ಅಹಂಕಾರವನ್ನು ಹೋಗಲಾಡಿಸುವುದಕ್ಕೆ ಪ್ರಯತ್ನಿಸುತ್ತಾರೆ. ಅವರ ಅಹಂಕಾರದ ಸ್ಥಿತಿಯನ್ನು ಆಧರಿಸಿ ಒಬ್ಬರನ್ನು ಕೋಪಿಸಿಕೊಳ್ಳುತ್ತಾರೆ, ಒಬ್ಬರನ್ನು ಸಿಡಿಮಿಡಿಗೊಳ್ಳುತ್ತಾರೆ, ಒಬ್ಬರನ್ನು ಹಿಡಿಸಿಕೊಳ್ಳದವರಂತೆ ಇರುತ್ತಾರೆ. ಒಬ್ಬರನ್ನು ಕೋಪಿಸಿಕೊಳ್ಳುತ್ತಾರೆ. ಹೀಗೆ ವಿವಿಧ ರೀತಿಯಲ್ಲಿ ವರ್ತಿಸುತ್ತಾರೆ.

ಗುರುವಿನ ವರ್ತನೆ ಯಾವಾಗಲೂ ಒಂದೇ ರೀತಿಯಾಗಿ ಇರದು. ಶಿಷ್ಯನನ್ನು ಆಧರಿಸಿ ಇರುತ್ತದೆ. ಶಿಷ್ಯನಲ್ಲಿಯ ಅಹಂಕಾರವನ್ನು ತೊಲಗಿಸಿ ಅವರನ್ನು ಜ್ಞಾನವಂತರನ್ನಾಗಿ ಮಾಡುವುದಕ್ಕೇ ಯಾವ ಗುರುವಾದರೂ ಪ್ರಯತ್ನಿಸುತ್ತಾರೆ. ಅದೇ ಪತ್ರೀಜಿಯವರ ಉದ್ದೇಶ. ಆದ್ದರಿಂದ ಕರ್ಮಗಳನ್ನು ಮಾಡುತ್ತಿದ್ದರೂ ಆತನು ಅಕರ್ಮನೇ. ಯಾವ ಕರ್ಮವು ಆತನನ್ನು ಅಂಟದು. ಕೃಷ್ಣ ಭಗವಾನನು ಹೇಳಿದ್ದು ಕೂಡಾ ಅದೇ. ಅಂತಹ ಯೋಗೀಶ್ವರನಾದ ಬ್ರಹ್ಮರ್ಷಿ ಪತ್ರೀಜಿಯವರನ್ನು ಸಾಮಾನ್ಯರು ಹೇಗೆ ಅರ್ಥ ಮಾಡಿಕೊಳ್ಳಬಲ್ಲರು?

ಬಂಗಾರದ ಅಂಗಡಿಗೆ ಹೋಗಿ ಬದನೆಕಾಯಿ ಕೇಳಿದರೆ ಹೇಗೆ ಇರುತ್ತದೋ? ಬ್ರಹ್ಮಜ್ಞಾನಿಯಾದ ಪತ್ರೀಜಿಯವರ ಬಳಿಗೆ ಹೋಗಿ ಜ್ಞಾನವನ್ನು ಕೇಳದೇ ನಮ್ಮ ಮಗನಿಗೆ ಉದ್ಯೋಗ ಬರುತ್ತದೆಯೇ? ನಮ್ಮ ಮಗಳಿಗೆ ಮದುವೆಯಾಗುತ್ತದೆಯೇ? ನನ್ನ ಕಾಲು ನೋವು ಕಡಿಮೆಯಾಗುತ್ತದೆಯೇ? ಎನ್ನುವಂತಿರುತ್ತದೆ. ಆತನನ್ನು ಎಷ್ಟು ಕಡಿಮೆಯಾಗಿ ಅಂದಾಜು ಮಾಡುತ್ತಿದ್ದೇವೆ.?

ಪತ್ರೀಜಿಯವರ ಕೋಪವನ್ನು ಅರ್ಥ ಮಾಡಿಕೊಳ್ಳಬೇಕೆಂದರೆ 'ಅಸಂಗತ್ವ' ಅಂದರೆ ಏನೆಂದು ತಿಳಿದುಕೊಳ್ಳಬೇಕು. ಕೃಷ್ಣ ಪರಮಾತ್ಮ ಹೇಳಿದ್ದು ಅರ್ಥ ಮಾಡಿಕೊಳ್ಳಬೇಕು. ಧ್ಯಾನ ಮಾಡಿ ಸ್ಥಾಯಿಯನ್ನು ಹೆಚ್ಚಿಸಿಕೊಳ್ಳಬೇಕು. ಅನಗತ್ಯವಾಗಿ ವಿಮರ್ಶೆ ಮಾಡಬಾರದು, ಮೊದಲು ನಮ್ಮ ಜೀವನವನ್ನು ಸರಿಮಾಡಿಕೊಳ್ಳಬೇಕು.

## ಧ್ಯಾನಕ್ಕೆ ಅಡ್ಡಿಗಳು

ಧ್ಯಾನಕ್ಕೆ ಮುಖ್ಯವಾದ ಅಡ್ಡಿಗಳು 1. ಅಹಂಕಾರ 2. ಮಮಕಾರ. ಸಹಜವಾಗಿ ಒಬ್ಬೊಬ್ಬರಲ್ಲಿ ಒಂದೊಂದು ರೀತಿಯಾದ ಅಹಂಕಾರವಿರುತ್ತದೆ. ನಮ್ಮಲ್ಲಿರುವ ಈ ವಿವಿಧ ರೀತಿಯ ಅಹಂಕಾರವನ್ನು ಅಷ್ಟಮದಗಳೆಂದು ಕೂಡಾ ಕರೆಯುತ್ತಾರೆ. ನಾವು ಧ್ಯಾನದಲ್ಲಿ ಪುರೋಗತಿಯನ್ನು ಸಾಧಿಸಬೇಕೆಂದರೆ ಇವುಗಳನ್ನು ಜಯಿಸಬೇಕು. ಆದ್ದರಿಂದ ಅಷ್ಟಮದಗಳ ಕುರಿತು ತಿಳಿದುಕೊಳ್ಳೋಣ.

1. **ಕುಲಮದ :** ಉನ್ನತ ಕುಲದವನೆಂದು ಗರ್ವಿಸುವುದು.
2. **ಬಲ ಮದ :** ಎಲ್ಲರಿಗಿಂತಲೂ ಬಲವಂತನೆಂದು ಗರ್ವಿಸುವುದು.
3. **ಯೌವನ ಮದ :** ಹರೆಯದವನೆಂದು ಗರ್ವಿಸುವುದು.

4. **ರಾಜ್ಯ ಮದ :** ಪದವಿಗಳನ್ನು ಸಂಪಾದಿಸಿ ನಾನೇ ಪದವಿಗಳನ್ನು ಹೊಂದಬಲ್ಲವನಾದೆನೆಂದು ಗರ್ವಿಸುವುದು.

5. **ಶೀಲಮದ :** ಒಳ್ಳೆಯ ಕೆಲಸಗಳನ್ನು ಮಾಡುತ್ತಾ, ಒಳ್ಳೆಯದಾಗಿ ವರ್ತಿಸುತ್ತಾ ಹಾಗೆ ಇದ್ದೇನೆಂದು ಗರ್ವಿಸುವುದು.

6. **ರೂಪ ಮದ :** ಶಾರೀರಿಕವಾಗಿ ಇತರರಿಗಿಂತ ಅಂದವಾಗಿ ಇದ್ದೇನೆಂದು ಆಕರ್ಷಣೆಯವಾಗಿ ಇದ್ದೇನೆಂದು ಗರ್ವಿಸುವುದು.

7. **ತಪೋ ಮದ :** ಆಧ್ಯಾತ್ಮಿಕವಾಗಿ ಚಿಂತನೆಯಲ್ಲಿರುತ್ತಾ ತಾನೇ ಧ್ಯಾನ ಸಾಧನೆ ಮಾಡುತ್ತಿದ್ದೆನೆಂದು, ತಾನೇ ಎಷ್ಟೋ ಬೆಳೆಯುತ್ತಿದ್ದೇನೆ. ಇತರರಿಗಿಂತ ತನ್ನ ಸಾಧನೆ ಅಧಿಕವಾಗಿ ಇರುವುದೆಂದು ಗರ್ವಿಸುವುದು.

8. **ಧನ ಮದ :** ನಾನು ಹಣವಿರುವವನು, ಧನವಂತನೆಂದು ಗರ್ವಿಸುವುದು.

ಪ್ರತಿಯೊಬ್ಬರೂ ಮೇಲಿನವುಗಳಲ್ಲಿ ಯಾವುದೋ ಒಂದು, ಇಲ್ಲದಿದ್ದರೆ, ಕೆಲವು ರೀತಿಯ ಗರ್ವಗಳಿಂದ ಜೀವಿಸುತ್ತಾರೆ. ಮೇಲೆ ಕಾಣಿಸದೇ ಹೋದರೂ ಒಳಗೊಳಗೇ ಅಹಂಕಾರದಿಂದ ಬಿರ್ರನೆ ಬೀಗುತ್ತಿರುತ್ತಾರೆ. ಹಾಗೆ ನಾನು ಎಂಬ ಅಹಂನಿಂದ ಬಿರ್ರನೆ ಬೀಗುವವರು, ಧ್ಯಾನ ಸಾಧನೆಯಲ್ಲಿ ಪುರೋಗತಿಯನ್ನು ಸಾಧಿಸಲಾರರು.

ಹಾಗೆ 'ನಾನು' ಎನ್ನುವ ಅಹಂಕಾರದ ಜೊತೆ. 'ನನ್ನದು' ಎಂಬ ಮಮಕಾರವು ಕೂಡಾ ಧ್ಯಾನ ಸಾಧನೆಗೆ, ಆಧ್ಯಾತ್ಮಿಕ ಪುರೋಗತಿಗೆ ಅಡ್ಡಿಯೇ. ಈ ಮಮಕಾರವನ್ನು ಈಷಾಣ ತ್ರಯಂ ಎನ್ನುತ್ತಾರೆ.

1. **ಧನೇಷಣ :** ಧನದ ಮೇಲೆ ಮಮಕಾರ.

2. **ಧಾರೇಷಣ :** ಹೆಂಡತಿಯ ಮೇಲೆ ಇಲ್ಲಾ ಗಂಡನ ಮೇಲೆ ಮಮಕಾರ.

3. **ಪುತ್ರೇಷಣ :** ಮಕ್ಕಳ ಮೇಲೆ ಮಮಕಾರ.

ಇಂತಹ ನನ್ನವು, ನನ್ನದು ಎಂಬ ಮಮಕಾರವು ಕೂಡಾ ಧ್ಯಾನಕ್ಕೆ ಅಡ್ಡಿಗಳೇ.

ಹಾಗೆಯೇ ಇನ್ನೂ 6 ರೀತಿಯ ಬಾಧೆಗಳೂ ಕೂಡಾ ಧ್ಯಾನಕ್ಕೆ ಅಡ್ಡಿಗಳೇ. ಇವುಗಳನ್ನು ಷಡೂರ್ಮಗಳು ಎನ್ನುತ್ತಾರೆ.

1. **ಹಸಿವು :** ಹಸಿವು ಕೂಡಾ ಅಡ್ಡಿಯೇ. ಅದಕ್ಕೆ ಬುದ್ಧನು ಮಧ್ಯೆ ಮಾರ್ಗವನ್ನು ಬೋಧಿಸಿದನು. ಅಂದರೆ ಹಸಿವಿನಿಂದ ಇರಬೇಡ, ಅತಿಯಾಗಿ ತಿನ್ನಬೇಡ. ಮಿತಾಹಾರವನ್ನು ತೆಗೆದುಕೊ ಎಂದಿದ್ದಾರೆ.

2. **ದಾಹ :** ದಾಹವೂ ಕೂಡಾ ಅಡ್ಡಿಯೇ. ಆದ್ದರಿಂದ ಧ್ಯಾನಕ್ಕೆ ಮೊದಲು ನಂತರ ಸ್ವಲ್ಪ ನೀರನ್ನು ಕುಡಿಯಬೇಕು. ಪೂರ್ವದಲ್ಲಿ ಋಷಿಗಳು ಕಮಂಡಲದಲ್ಲಿ ಕುಡಿಯುವ ನೀರನ್ನು ಇಟ್ಟುಕೊಳ್ಳುತ್ತಿದ್ದರು.

3. **ಶೋಕ :** ಜೀವನದಲ್ಲಾಗುವ ಸಮಸ್ಯೆಗಳು, ಸಮಸ್ಯೆಗಳಿಂದ ಉಂಟಾಗುವ ಬಾಧೆ ಕೂಡಾ ಧ್ಯಾನಕ್ಕೆ ಅಡ್ಡಿಯೆ.

4. **ಮೋಹ :** ಕೋರಿಕೊಂಡವುಗಳೆಲ್ಲವನ್ನು ಹೊಂದಬೇಕೆಂಬ ವಿಪರೀತವಾದ ಬಯಕೆಯನ್ನೇ ಮೋಹವೆನ್ನುತ್ತಾರೆ. ಇದೂ ಕೂಡಾ ಧ್ಯಾನಕ್ಕೆ ಅಡ್ಡಿಯೇ.

5. **ಜನನ :** ಜನ್ಮದಿಂದ ಇಂದ್ರಿಯ ಸುಖಗಳ ಮೇಲೆ ಬಯಕೆ ಉಂಟಾಗುತ್ತದೆ. ಅದು ಕೂಡಾ ಧ್ಯಾನಕ್ಕೆ ಅಡ್ಡಿಯೇ.

6. **ಮರಣ :** ಅಂದುಕೊಳ್ಳದೆ ಸಂಭವಿಸುವ ಮರಣ ಕೂಡಾ ಮಾಡುವ ಸಾಧನೆಗೆ ಅಡ್ಡಿಯೇ.

ಹಾಗೆಯೇ ನಮಗೆ ಇರುವ ಬಲಹೀನತೆಗಳು, ವ್ಯಸನಗಳು ಕೂಡಾ ಧ್ಯಾನಕ್ಕೆ ಅಡ್ಡಿಗಳೇ. ಇವುಗಳಲ್ಲಿ ಸಪ್ತ ವ್ಯಸನಗಳು ಮುಖ್ಯವಾದವು.

1) ಜೂಜಾಟ 2) ವ್ಯಭಿಚಾರ 3) ಮಧ್ಯಪಾನ 4) ಹಿಂಸೆ 5) ಪ್ರತಿ ಸಣ್ಣ ವಿಷಯಕ್ಕೆ ಶಿಕ್ಷಿಸುವ ಗುಣ 6) ಹಠ (ಮೊಂಡುತನ) 7) ದುರ್ವ್ಯಯ (ಹಣವನ್ನು ನಿಷ್ಪ್ರಯೋಜನವಾಗಿ ಖರ್ಚು ಮಾಡುವುದು) ಹಾಗೆಯೇ ಜೀವನದಲ್ಲಿ ನಮಗೆ ಕೆಲವು ಆಟಂಕಗಳು ಎದುರಾಗುತ್ತಾ ಇರುತ್ತವೆ. ಅವುಗಳನ್ನೇ ವಿಘ್ನತ್ರಯ ಎನ್ನುತ್ತಾರೆ.

1. **ಅಭಾವನ :** ಕತ್ತಲಲ್ಲಿ ಹೋಗುವವನಿಗೆ ಸರಿಯಾದ ದಾರಿ ತಿಳಿಯದೆ ಹೇಗೆ ಹೋಗುತ್ತಿರುತ್ತಾನೋ ಹಾಗೆಯೇ ತಾನೇ ಭಗವಂತನೆಂದು ತಿಳಿಯದೆ ಪ್ರಾಪಂಚಿಕ ವ್ಯವಹಾರಗಳೇ ಮುಖ್ಯವೆಂದು ಭಾವಿಸುತ್ತಾ ಅಜ್ಞಾನದಿಂದ ಜೀವಿಸುವುದೇ 'ಅಭಾವನ' ಎನ್ನುತ್ತಾರೆ. ಇದರಿಂದ ಧ್ಯಾನದ ಮೇಲೆ ಆಸಕ್ತಿ ಇರುವುದಿಲ್ಲ.

2. **ವಿಪರೀತ :** ಕತ್ತಲಲ್ಲಿ ಮರವನ್ನಾಗಲಿ, ಕಂಬವನ್ನಾಗಲಿ ನೋಡಿ, ದೆವ್ವವೆಂದೋ ಕಳ್ಳನೆಂದೋ ಭಾವಿಸಿದಂತೆ, ಈ ಪ್ರಾಪಂಚಿಕ, ಭಾವದಿಂದ ಇತರ ದೇವತೆಗಳನ್ನು ಬ್ರಹ್ಮನಂತೆ ಭಾವಿಸಿ ಪೂಜಿಸುವುದಕ್ಕೆ 'ವಿಪರೀತ'ವೆನ್ನುತ್ತಾರೆ. ಆದಕಾರಣ ಧ್ಯಾನದ ಮೇಲೆ ವಿಶ್ವಾಸವಿರದು.

3. **ಸಂಶಯ :** ಹಾಗೆ ಮರವನ್ನೂ ನೋಡಿ ದೆವ್ವವೆಂದು ಭಾವಿಸಿ ಭಯಪಡುವವನಿಗೆ ದಾರಿಯಲ್ಲಿ ಹೋಗುವನು ಅದು ದೆವ್ವವಲ್ಲ. ಮರವೆಂದು ಹೇಳಿದರೂ ಸಂಶಯ

ತೀರದೆ, ಇನ್ನೂ ಭಯ ಪಡುತ್ತಿದ್ದರೆ ಅವನಂತೆ ತಾನು ಪರಬ್ರಹ್ಮವೆಂದು ತಿಳಿಸಿದರೂ ಕೂಡಾ, ತಾನು ಮಾನವನೇ ದೇವರು ಬೇರೆ ಇರುತ್ತಾನೆ ಎಂದುಕೊಳ್ಳುತ್ತಾ, ತಾನು ಮಾನವನಾದ್ದರಿಂದ ಕಷ್ಟಗಳು ಬರುತ್ತವೆಯೆಂದುಕೊಳ್ಳುತ್ತಾ ದುಃಖಪಡುವುದನ್ನು 'ಸಂಶಯ'ವೆನ್ನುತ್ತಾರೆ. ಈ ಸಂಶಯದಿಂದಲೇ ಧ್ಯಾನದಲ್ಲಿ ಪುರೋಗತಿಯನ್ನು ಸಾಧಿಸಲಾರರು. ಆದ್ದರಿಂದ ಧ್ಯಾನದಲ್ಲಿ ಬರುವುದಿಲ್ಲ, ಧ್ಯಾನವನ್ನು ಮಾಡರು. ಆದ್ದರಿಂದ ಧ್ಯಾನ ಮಾಡುವವರಿಗೆ "ಅಹಂಬ್ರಹ್ಮಾಸ್ಮಿ" ಎನ್ನುವ ವೇದ ವಾಕ್ಯದಲ್ಲಿ ಸಂಶಯವು ಇರಬಾರದು.

ಹಾಗೆಯೇ ಇನ್ನೂ ಕೆಲವು ದೋಷಗಳಿಂದ ಕೂಡಾ ಧ್ಯಾನ ಸಾಧನೆಯಲ್ಲಿ ಪುರೋಗತಿ ಸಾಧಿಸಲಾರರು. ಅವುಗಳನ್ನೇ "ಪಂಚಮಲಗಳು" ಎನ್ನುತ್ತಾರೆ.

1. **ತಿರೋದಾನ ಮಲ :** ಯಾವಾಗಲೂ ಪಾಪದ ಕೆಲಸಗಳನ್ನು ಮಾಡಬೇಕೆನಿಸುವುದು, ಪಾಪಗಳನ್ನೇ ಮಾಡುತ್ತಿರುವುದು.
2. **ಮಾಯೆಯೇ ಮಲವು :** "ಪರಬ್ರಹ್ಮ"ನನ್ನು ಮರೆತು ಹೋಗಿ ಇತರ ದೇವತೆಗಳನ್ನು, ಅವರ ಮಂತ್ರಗಳನ್ನು ಸತ್ಯವೆಂದು ನಂಬುವುದು, ಅವುಗಳನ್ನು ಬೋಧಿಸುವುದು.
3. **ಕಾರ್ಮಿಕ ಮಲ :** ವೇದಾಂತ ವಿಷಯಗಳು ಹಿರಿಯರು ಬೋಧಿಸುತ್ತಿರುವಾಗ ಅವುಗಳನ್ನು ಸರಿಯಾಗಿ ಕೇಳಿದೆ ಅನಾಸಕ್ತಿಯಿಂದ ಇರುವುದು.
4. **ಅಣುವ ಮಲ :** "ಬ್ರಹ್ಮಜ್ಞಾನ"ವನ್ನು ಕುರಿತು ತಿಳಿದುಕೊಳ್ಳುವ ಅವಕಾಶ ಬಂದರೂ ಕೂಡಾ ಅದರ ಮೇಲೆ ಶ್ರದ್ಧೆಯನ್ನು ತೋರಿಸದಿರುವುದು.
5. **ಮಯಾಕ ಮಲ :** ಒಂದು ಬಾರಿಯಾದರೂ ಆ ಪರಮಾತ್ಮನನ್ನು ಧ್ಯಾನ ಮಾಡಬೇಕೆಂಬ ಬುದ್ಧಿ ಇಲ್ಲದಿರುವುದು.

ಆದ್ದರಿಂದ ಧ್ಯಾನ ಚೆನ್ನಾಗಿ ಆಗಬೇಕೆಂದರೂ, ಧ್ಯಾನದಲ್ಲಿ ಒಳ್ಳೆಯ ಸ್ಥಿತಿಗೆ ಬೆಳೆಯಬೇಕೆಂದರೂ ಮೇಲಿನ ಲೋಪಗಳೇನಾದರು ಇದ್ದರೆ ಅವುಗಳನ್ನು ಸರಿಪಡಿಸಿಕೊಳ್ಳಬೇಕು. ಲೋಪಗಳನ್ನಿಟ್ಟುಕೊಂಡು ಧ್ಯಾನ ಮಾಡಿದರೆ ಪುರೋಗತಿ ಸಾಧಿಸಲಾರಿರಿ. ಫಲಗಳು ನಾಮ ಮಾತ್ರವೇ ಇರುತ್ತವೆ. ಮೇಲಿನ ಲೋಪಗಳು, ಅಡ್ಡಿಗಳನ್ನು ಅಧಿಗಮಿಸಬೇಕೆಂದರೆ ಆಹಾರ ವಿಷಯದಲ್ಲಿ ಎಚ್ಚರದಿಂದ ಇರಬೇಕು. ಧ್ಯಾನ ಸಾಧನೆಯನ್ನು ನಂಬಿಕೆಯಿಂದ, ವಿಶ್ವಾಸದಿಂದ, ಭಗವಂತನ ಸಾಧನೆಯೆಂದು ಭಾವಿಸಿ, ಸೋಮಾರಿತನ ಮಾಡದೇ ಮಾಡಬೇಕು. ಹಾಗೇ ಸಾಧನೆ ಮಾಡಿದರೆ ಕೊನೆಗೆ ಆತ್ಮಾನುಭೂತಿ ಹೊಂದಬಲ್ಲೆವು. ಜೀವನವನ್ನು ಧನ್ಯ ಮಾಡಿಕೊಳ್ಳಬಲ್ಲೆವು. ಆದ್ದರಿಂದ ಛಲ ಬಿಡದಂತೆ ಧ್ಯಾನ ಮಾಡೋಣ.

# ಧ್ಯಾನ ಸಾಧನೆಯ ಮೂಲಕ ಮಾನವರಲ್ಲಾಗುವ ಪರಿವರ್ತನೆ

ಪ್ರಾರಂಭ ಸ್ಥಿತಿಯಲ್ಲಿ ಯಾವ ಮಾನವನಾಗಲಿ ವಿರುದ್ಧವಾಗಿ ವರ್ತಿಸುತ್ತಾನೆ. ಅಂದರೆ ಆತನ ಕೆಲಸಗಳು ವಿಕೃತವಾಗಿಯೇ ಇರುತ್ತದೆ. ಆದರೆ ಬುದ್ಧಿ ಉಪಯೋಗಿಸಿ ಧ್ಯಾನ ಸಾಧನೆ ಮಾಡಿದರೆ ವಿರುದ್ಧವಾದ ಕೆಲಸಗಳು ಪ್ರಕೃತಿಗೆ ಅನುಗುಣವಾಗಿ ಬದಲಾಗುತ್ತವೆ. ಅಷ್ಟೇ ಅಲ್ಲ, ಧ್ಯಾನ ಸಾಧನೆಯಲ್ಲಿ ವಿಶೇಷವಾಗಿ ಮಾಡಿದರೆ ಆತನ ಎಲ್ಲಾ ಕೆಲಸ ಪ್ರಕೃತಿಧರ್ಮವನ್ನು ಮೀರಿ ಇರುತ್ತದೆ. ಅದೇ ಧ್ಯಾನ ಸಾಧನೆಯಲ್ಲಿ ಪರಾಕಾಷ್ಠೆ. ಬಹಳಷ್ಟು ಜನ, ಎಷ್ಟು ಕಾಲ ಧ್ಯಾನವನ್ನು ಮಾಡಬೇಕು? ಎಂದು ಸಂದೇಹಪಡುತ್ತಾರೆ. ಆದರೆ ಯಾರಾದರಾಗಲಿ ಸರಿ, ಕೆಳಗೆ ಸೂಚಿಸಿದ ಸಂಸ್ಕೃತ ಸ್ಥಿತಿಗೆ ಬೆಳೆಯುವವರೆಗೆ ಧ್ಯಾನವನ್ನು ಮಾಡಬೇಕಾದದ್ದೇ. ಅದನ್ನು ಭಗವತ್ ಸ್ಥಿತಿ ಎನ್ನುತ್ತಾರೆ. ಎಂತಹವರಾಗಲಿ ಧ್ಯಾನವನ್ನು ಮಾಡಿದರೆ ಖಂಡಿತವಾಗಿ ಭಗವಂತನಾಗಿ ಬದಲಾಗುತ್ತಾರೆ. ಹಾಗೆ ಧ್ಯಾನ ಮಾಡುತ್ತಾ ತನ್ನನ್ನು ಗಮನಿಸಿಕೊಂಡರೆ ಅವರಲ್ಲಿಯ ಬದಲಾವಣೆ ಅವರಿಗೇ ತಿಳಿಯುತ್ತದೆ. ಅಂದರೆ ರಾಕ್ಷಸನನ್ನು ಮಾಧನವಾಗಿ ಬದಲಾಯಿಸಬಲ್ಲ ಸಾಧನವೇ ಧ್ಯಾನ. ಧ್ಯಾನವನ್ನು ಮಾಡಿದಷ್ಟು ಮಾನವರಲ್ಲಿ ಒಳ್ಳೆಯ ಪರಿವರ್ತನೆ ಖಂಡಿತವಾಗಿ ಉಂಟಾಗುತ್ತದೆ. ಯಾರಾದರಾಗಲಿ ಲೋಕ ಕಲ್ಯಾಣಕ್ಕೆ ಶ್ರಮಪಡುತ್ತಾರೆ. ಇದು ಪ್ರತಿಯೊಬ್ಬರು ಗಮನಿಸಬಹುದು. ಎಂತಹ ಬದಲಾವಣೆ ಬರುತ್ತದೆಂದು ಈ ಕೆಳಗಿನ ಪಟ್ಟಿಯನ್ನು ಗಮನಿಸೋಣ.

| | ವಿಕೃತಿ | ಪ್ರಕೃತಿ | ಸಂಸ್ಕೃತಿ |
|---|---|---|---|
| 1. | ಪ್ರಕೃತಿ ವಿರುದ್ಧದ್ದು | ಪ್ರಕೃತಿ ಧರ್ಮ | ಪ್ರಕೃತಿ ಧರ್ಮವನ್ನು ಮೀರಿದ್ದು |
| 2. | ಅಧಮ | ಉತ್ತಮ | ಉತ್ತಮೋತ್ತಮ |
| 3. | ಅಧರ್ಮ | ಧರ್ಮ | ಉತ್ತಮಧರ್ಮ |
| 4. | ಧ್ಯಾನ ಮಾಡದೇ ಇರುವುದು | ಧ್ಯಾನವನ್ನು ಮಾಡುವುದು | ಧ್ಯಾನದ ಪರಾಕಾಷ್ಠೆ |
| 5. | ಮಾಂಸಾಹಾರ | ಶಾಖಾಹಾರ | ಶ್ವಾಸಾಹಾರ |
| 6. | ಕೊಡದಂತೆ ತೆಗೆದುಕೊಳ್ಳುವುದು | ತೆಗೆದುಕೊಂಡವರಿಗೆ ಸರಿಹೋಗುವಷ್ಟು ಕೊಡುವುದು | ತೆಗದುಕೊಳ್ಳದೇ ಕೊಡುವುದು |
| 7. | ನನ್ನದು ನನ್ನದೇ, ನಿನ್ನದು ನಿನ್ನದೇ ಎಂಬ ಭಾವನೆ | ನನ್ನದು ನನ್ನದೇ, ನಿನ್ನದು ನಿನ್ನದೇ ಎಂಬ ಭಾವನೆ | ನಿನ್ನದು ಇಲ್ಲ, ನನ್ನದು ಇಲ್ಲ, ಎಲ್ಲಾ ಆ ಪರಬ್ರಹ್ಮವೆಂಬ ಭಾವನೆ |
| 8. | ಎಷ್ಟಿದ್ದರೂ ಇತರರಿಗೆ ಕೊಡದೇ ಇರುವುದು. | ಇರುವುದರಲ್ಲಿಯೇ ಸ್ವಲ್ಪ ಕೊಡುವುದು | ತನಗೆ ಇದೆಯೋ, ಇಲ್ಲವೋ ಎಂದು ನೊಡಿಕೊಳ್ಳದೆ ಕೊಡುವುದು. |
| 9. | ಅಪಕಾರವನ್ನು ಮಾಡುವುದು | ಉಪಕಾರವನ್ನು ಮಾಡುವುದು | ಅಪಕಾರವನ್ನು ಮಾಡಿದವರಿಗೆ ಉಪಕಾರವನ್ನು ಮಾಡುವುದು |

| | | | |
|---|---|---|---|
| 10. | ಹಿಂಸಿಸುವುದು | ಹಿಂಸೆ ಮಾಡದೇ ಇರುವುದು | ಹಿಂಸಿಸಿದವರನ್ನು ಕ್ಷಮಿಸುವುದು |
| 11. | ಮೋಸ ಮಾಡುವುದು | ಮೋಸಗೊಳಿಸದೇ ಇರುವುದು | ಮೋಸ ಮಾಡಿದವರಿಗೆ ಸಹಾಯ ಮಾಡುವುದು |
| 12. | ವಿಮರ್ಶಿಸುವುದು | ವಿಮರ್ಶಿಸದೇ ಇರುವುದು | ವಿಮರ್ಶಿಸಿದವರನ್ನು ಪ್ರಶಂಸಿಸುವುದು |
| 13. | ದ್ವೇಷಿಸುವುದು | ದ್ವೇಷಿಸದೇ ಇರುವುದು | ದ್ವೇಷಿಷಿದವರನ್ನೇ ಪ್ರೀತಿಸುವುದು |
| 14. | ತಾನು ಚೆನ್ನಾಗಿರಬೇಕು, ಇತರರು ಹಾಳಾಗಬೇಕೆಂದುಕೊಳ್ಳುವುದು | ತಾನೇ ಚೆನ್ನಾಗಿರಬೇಕೆಂದು ಕೊಳ್ಳುವುದು | ಲೋಕವೆಲ್ಲಾ ಚೆನ್ನಾಗಿರ ಬೇಕೆಂದುಕೊಳ್ಳುವುದು |
| 15. | ತನ್ನ ಸುಖಕ್ಕಾಗಿ ಇತರರಿಗೆ ಕೆಟ್ಟದ್ದನ್ನು ಮಾಡುವುದು | ತನ್ನ ಸುಖವನ್ನು ನೋಡಿಕೊಂಡು. ಇತರರಿಗೆ ಕೆಟ್ಟದ್ದನ್ನು ಮಾಡದಿರುವುದು | ತನ್ನ ಸುಖವನ್ನು ತ್ಯಾಗ ಮಾಡಿ, ಇತರರಿಗೆ ಒಳ್ಳೆಯದು ಮಾಡುವುದು |
| 16. | ಕಷ್ಟಪಡುವುದಕ್ಕೆ ಇಷ್ಟು ಪಡದಿರುವುದು | ಕಷ್ಟ ಪಡುವುದು | ರಕ್ತವನ್ನು ಸುರಿಸುವುದು |
| 17. | ತಮೋಗುಣ, ರಜೋಗುಣಗಳು | ಸಾತ್ವಿಕಗುಣ | ನಿರ್ಗುಣ |
| 18. | ಉದ್ಧರಿಸೆನ್ನುವುದು | ಉದ್ಧರಿಸಿಕೊಳ್ಳುವುದು | ನಾನು ಎನ್ನುವುದು ಇಲ್ಲವೆಂದುಕೊಳ್ಳುವುದು |

| | | | |
|---|---|---|---|
| 19. | ಎಷ್ಟು ಹೊತ್ತು ಹಿಂದಿನದರ ಕುರಿತು ಭವಿಷ್ಯತ್ತನ್ನು ಕುರಿತು ಆಲೋಚಿಸುತ್ತಾ ಆತಂಕವನ್ನು ಪಡುವುದು. | ಆತಂಕಗೊಳ್ಳದಿರುವುದು | ವರ್ತಮಾನದಲ್ಲಿ ಜೀವಿಸುವುದು |
| 20. | ಇತರರಲ್ಲಿಯ ಕೆಟ್ಟದ್ದನ್ನು ನೋಡುವುದು | ಇತರರಲ್ಲಿಯ ಕೆಟ್ಟದನ್ನು ನೋಡದಿರುವುದು | ಇತರರಲ್ಲಿಯ ಒಳ್ಳೆಯದನ್ನೇ ನೋಡುವುದು |
| 21. | ಅರಿಷಡ್ವರ್ಗಗಳಿಗೆ ದಾಸರಾಗುವುದು. | ಅರಿಷಡ್ವರ್ಗಗಳನ್ನು ಹಿಡಿತದಲ್ಲಿಟ್ಟುಕೊಳ್ಳುವುದು | ಅರಿಷಡ್ವರ್ಗಗಳನ್ನು ಜಯಿಸುವುದು |
| 22. | ಪಾಪಾತ್ಮ | ಪುಣ್ಯಾತ್ಮ | ಪರಮಾತ್ಮ |
| 23. | ಪಾಪಗಳನ್ನು ಮಾಡುವುದು | ಪುಣ್ಯವನ್ನು ಮಾಡುವುದು | ಪಾಪ ಪುಣ್ಯಗಳಿಗೆ ಅತೀತನಾಗಿ ಇರುವುದು |
| 24. | ಒಂದು ಕೆನ್ನೆಯ ಮೇಲೆ ಹೊಡೆದರೆ ಎದುರಿಗೆ ಇದ್ದವನ ಎರಡೂ ಕೆನ್ನೆಗಳಿಗೆ ಬಾರಿಸುವುದು | ಅವನ ಪಾಪಕ್ಕೆ ಅವನು ಹೋಗುತ್ತಾನೆ ಎಂದು ಸುಮ್ಮನಿರುವುದು | ಒಂದು ಕೆನ್ನೆಗೆ ಹೊಡೆದರೆ ಇನ್ನೊಂದು ಕೆನ್ನೆಯನ್ನು ತೋರಿಸುವುದು |
| 25. | ಶೀತೋಷ್ಣಗಳಿಗೆ, ಸುಖ–ದುಃಖಗಳಿಗೆ, ಮಾನ–ಅವಮಾನಗಳಿಗೆ, ಸೋಲು ಗೆಲುವುಗಳಿಗೆ ವಿಚಲಿತರಾಗುವುದು | ಸಹಿಸಿಕೊಳ್ಳುವುದು | ಸಮಸ್ಥಿತಿಯಲ್ಲಿರುವುದು |

| | | | |
|---|---|---|---|
| 26. | ಕಾಣಿಸುವಂತವೆಲ್ಲವೂ ಶಾಶ್ವತ ಎಂದುಕೊಳ್ಳುವುದು | ಶಾಶ್ವತವಾದವೋ, ಅಲ್ಲವೋ ಎಂದು ತಿಳಿಯದೇ ಹೋಗುವುದು | ಕಾಣಿಸುವುದು ಯಾವುದೂ ಶಾಶ್ವತ ಅಲ್ಲವೆಂದು ತಿಳಿಸುಕೊಳ್ಳುವುದು |
| 27. | ಇಲ್ಲದೆಲ್ಲವೂ ಇರುವಂತೆ, ಇರುವುದನ್ನು ಇಲ್ಲವೆನ್ನುವಂತೆ ಭಾವಿಸುವುದು | ಇಲ್ಲದ್ದು ಯಾವುದೋ, ಇರುವುದೇನು ಎಂದು ತಿಳಿದುಕೊಳ್ಳುವುದಕ್ಕೆ ಪ್ರಯತ್ನಿಸುವುದು | ಇರುವುದು ಇರುವಂತೆ, ಇಲ್ಲದ್ದು ಇಲ್ಲವೆನ್ನುವುದು ನೋಡುವುದು |
| 28. | ಭಗವಂತನಿಂದ ಇಷ್ಟಪಡುವುದು | ಭಗವಂತನನ್ನೇ ಇಷ್ಟಪಡುವುದು | ಭಗವಂತನು ಇಷ್ಟಪಡುವುದು |
| 29. | ದೋಚಿಕೊಳ್ಳುವುದು | ದೋಚಿಕೊಳ್ಳದೇ ಬಚ್ಚಿಟ್ಟುಕೊಳ್ಳುವುದು | ಬಚ್ಚಿಟ್ಟುಕೊಳ್ಳದೇ ಹಂಚುವುದು. |

# ಮಾಂಸಾಹಾರ

**ಕೆಲ ಮಹಾಪುರುಷರ ಅಭಿಪ್ರಾಯಗಳು!**

ಕಟುಕನಂತೆ ಹಿಂಸಾ ಪೂರಿತವಾದ ಕೆಲಸಗಳನ್ನು ಮಾಡುತ್ತಾ, ಅಂತಹ ಕ್ರೂರವಾದ ಆಲೋಚನೆಗಳಲ್ಲಿಯೇ ಮುಳುಗಿರುವ ವ್ಯಕ್ತಿ ದುಷ್ಟನು, ದುರಾಚಾರನು, ಷುಕ್ಕಲನು, ಹಂತಕನು, ಪರಮ ಪಾತಕನು ಮತ್ತು ದುಷ್ಟಬುದ್ಧಿಯುಳ್ಳವನಾಗಿ ಇರುತ್ತಾನೆ. ಇಂತಹ ನೀಚ ಪದ್ಧತಿಗಳಲ್ಲಿ ಹಣವನ್ನು ಸಂಪಾದಿಸುವವನು ಕೊನೆಗೆ ಖಂಡಿತವಾಗಿಯೂ ನರಕಕ್ಕೆ ಹೋಗುತ್ತಾನೆ. ಇಂತಹ ವರ್ತನೆಯುಳ್ಳವನು ತನ್ನ ಅಮೂಲ್ಯವಾದ ಮಾನವ ಜನ್ಮವನ್ನು ಮಣ್ಣಿನ ಕುಪ್ಪೆಯಲ್ಲಿ ಬಿಸಾಡಿಕೊಳ್ಳುತ್ತಾನೆ.

**–ಸಂತ ನಾಮದೇವ**

ಮಾಂಸವನ್ನು ತಿನ್ನುವವರ, ಮದ್ಯವನ್ನು ಸೇವಿಸುವವರ ಹೃದಯವು ಕಠೋರವಾಗುತ್ತದೆ. ಇಂತಹ ಕಠೋರ ಹೃದಯದಲ್ಲಿ ಪರಮಾತ್ಮನ ಪ್ರಕಾಶವು ಪ್ರಕಟಿತವಾಗದು.

**–ದಾದೂ ದಯಾಳ್**

ಈ ಶರೀರವನ್ನು ಪೋಷಿಸಿಕೊಳ್ಳುವುದಕ್ಕೆ ಇತರ ಪ್ರಾಣಿಗಳನ್ನು ವಧಿಸುವುದೇತಕ್ಕೆ? ಇರುವೆಯಲ್ಲಿ, ಆನೆಯಲ್ಲಿ, ಪ್ರಾಣಿಗಳಲ್ಲಿ, ಮಾನವನಲ್ಲಿ ಎಲ್ಲರಲ್ಲೂ ಇರುವುದು ಆ ಒಬ್ಬನಾದ ಪರಮಾತ್ಮನೇ.

**–ಮಲೂಕ್ ದಾಸ್**

ಒಂದು ಮೇಕೆ ಪರಮಾತ್ಮನ ದರ್ಬಾರಿನಲ್ಲಿ ನ್ಯಾಯಕ್ಕಾಗಿ ಮಾಡುವ ಫಿರ್ಯಾದು "ಓ, ಪ್ರಭು! ಮಾನವನು ನನ್ನ ಶಿರಸ್ಸನ್ನು ಕತ್ತರಿಸಿದ್ದಾನೆ. ಆತನ ಶಿರಸ್ಸನ್ನೂ ಕೂಡಾ ಕತ್ತರಿಸಿರಿ. ಬಡವರಿಗೆ, ಧನಿಕರಿಗೆ ಒಂದೇ ರೀತಿಯಾಗಿ ನ್ಯಾಯ ಒದಗಿಸಿರಿ" ಎಂದು ಮೇಕೆ ಪರಮಾತ್ಮನೊಡನೆ ಭಿನ್ನವಿಸಿಕೊಳ್ಳುತ್ತದೆ.

**–ವಾಜೇದ್ ಜಿ**

ಸಾಯಿಸಿದ ಪ್ರಾಣಿಯ ಮಾಂಸವನ್ನು ತಿನ್ನುವುದಕ್ಕೆ ಯೋಗ್ಯ ಹೇಗಾಗುತ್ತದೆ? ಪಾಪದ ಕೆಲಸಗಳನ್ನು ಮಾಡಿ, ಸ್ವರ್ಗವನ್ನೇಕೆ ಕಾಲಿನಿಂದ ಒದೆಯುತ್ತಿರುವೆ? ನಾಲಿಗೆಯ ರುಚಿಗಾಗಿ ಜನ್ಮವನ್ನು ಏಕೆ ನಾಶ ಮಾಡಿಕೊಳ್ಳುತ್ತಿರುವೆ?

**–ಪರ ಸಾಜಿ**

ಮಾಂಸವನ್ನು ತಿಂದು, ತಾಂಬೂಲ ನಮಲುತ್ತಾ, ಶರೀರಕ್ಕೆ ಅಲಂಕಾರಗಳನ್ನು ಮಾಡಿಕೊಂಡು, ಸೊಗಸಾಗಿ, ದುಂಡಾಗಿ ತಲೆಗೂದಲುಗಳನ್ನು ಸುತ್ತಿಕೊಂಡು, ಕಾಲಿಗೆ ವಿಶೇಷವಾದ ಚಪ್ಪಲಿಗಳನ್ನು ಹಾಕಿಕೊಂಡು, ದರ್ಪದಿಂದ ನಡೆಯುತ್ತೀಯ. ಆದರೆ ನೀನು ಮೃತ್ಯುವನ್ನು ಸೇರಿಕೊಳ್ಳುತ್ತಿರುವೆ ಎಂದು ಯಮನು ನಿನ್ನನ್ನು ಮೇಕೆಯನ್ನು ಸಾಯಿಸಿದಂತೆ ಚುಚ್ಚಿ ಸಾಯಿಸುತ್ತಾನೆಂದು ತಿಳಿದುಕೊ.

**–ನಾಯಿ ಬಲ್ಲೆಷಾಹಾ**

ಮುಲ್ಲಾ ಏಕೆ ಅರಚುತ್ತಾ 'ಬಾಂಗ್' ಕೊಡುತ್ತೀಯ. ಅಲ್ಲಾಗೆ ಕಿವುಡು ಇಲ್ಲ. 30 ದಿನಗಳು ಉಪವಾಸವಿದ್ದು, ಹಿಂಸೆ ಮಾಡಿ, ಸಾಯಿಸಿ, ಮಾಂಸವನ್ನು ತಿನ್ನುವೆ. ಮತ್ತೇ ಭಗವಂತನ ದರ್ಶನ ನಿನಗೆ ಹೇಗೆ ಆಗುತ್ತದೆ? ಮೂಲವಾಗಿರುವುದನ್ನು ನಿರ್ಲಕ್ಷಿಸಿ ಘೋರ ಪಾಪಗಳನ್ನು ಮೂಟೆ ಕಟ್ಟಿಕೊಳ್ಳುವೆ.

**–ಗರೀಬ್ ದಾಸ್ ಜಿ**

ಮಾನವನು ಎಂತಹ ಸಂದರ್ಭಗಳಲ್ಲೂ ಮಾಂಸವನ್ನು ತಿನ್ನುವುದು ಸರಿಯಲ್ಲ. ನಾವು ಪಶುಗಳಿಗಿಂತ ಉನ್ನತವಾದವರು. ಮಾಂಸವನ್ನು ತಿಂದು ನೀಚ ವರ್ಗಕ್ಕೆ ಸೇರಿದ ಜೀವಿಗಳಂತೆ ವರ್ತಿಸುವುದು ನಮಗೆ ಸರಿಯಾದದ್ದಲ್ಲ.

**–ಮಹಾತ್ಮ ಗಾಂಧೀ**

ಜೀವಿಗಳನ್ನು ಸಾಯಿಸುವವರು, ಜೀವಿಗಳನ್ನು ಹತ್ಯೆ ಮಾಡೆಂದು ಸಲಹೆಯನ್ನು ಕೊಡುವವರು, ಜೀವಿಗಳನ್ನು ಸಾಯಿಸಿ ಅಡುಗೆ ತಯಾರು ಮಾಡುವವರು, ಮಾಂಸವನ್ನು ತುಂಡು ಮಾಡುವವರು, ಮಾರುವವರು, ತಿನ್ನುವವರು, ಅಡುಗೆಯವರು, ತಿನ್ನಿಸುವವರು ಈ ಎಂಟು ರೀತಿಯವರು ಹತ್ಯೆಯಲ್ಲಿ ಭಾಗೀದಾರರೇ.

**–ಮನುಸ್ಮೃತಿ**

ಮೀನುಗಳನ್ನು ತಿನ್ನುತ್ತಾ, ಭಂಗಿ, ರುಧಿರ ಸೇದುತ್ತಾ, ಎಷ್ಟು ತೀರ್ಥಗಳನ್ನು ತಿರುಗಿದರೂ, ಎಷ್ಟು ವ್ರತಗಳನ್ನು ಆಚರಿಸಿದರೂ, ನಿಯಮಬದ್ಧವಾಗಿ ಜೀವಿಸಿದರೂ, ಅವರು ನರಕಕ್ಕೇ ಹೋಗುತ್ತಾರೆ.

**–ಕಬೀರ್**

ದಿನವೆಲ್ಲಾ ಉಪವಾಸವಿದ್ದು, ನಮಾಜು ಮಾಡಿ ಸಾಯಂಕಾಲ ಕೋಳಿಯನ್ನು ಸಾಯಿಸುವುದರಿಂದ ಮಹಮ್ಮದೀಯರು ಸ್ವರ್ಗಕ್ಕೆ ಹೋಗಲಾರರು. ಹಾಗೆಯೇ ತೀರ್ಥಯಾತ್ರೆಗಳನ್ನು, ವ್ರತಗಳನ್ನು ಮೊದಲಾದವುಗಳನ್ನು ಆಚರಿಸಿದರೂ ಕೂಡಾ ಪ್ರಾಣಿಹತ್ಯೆ ಮಾಡುವ ಹಿಂದೂಗಳು ಕೂಡಾ ಸದ್ಗತಿಯನ್ನು ಹೊಂದಲಾರರು. ಮುಸ್ಲಿಂರು ಪ್ರಾಣಿಗಳನ್ನು ಬಹಳ ಹೊತ್ತು ರಕ್ತ ಸೋರಿಸುತ್ತಾ ಕೊಯ್ಯುತ್ತಾರೆ. ಹಿಂದೂಗಳು ಒಂದು ಏಟಿಗೆ ವಧೆ ಮಾಡುತ್ತಾರೆ. ಆದರೆ ಎರಡೂ ಕೂಡಾ ಪಾಪದಿಂದ ಕೂಡಿದ ಕರ್ಮಗಳೇ. ಇಬ್ಬರ ಮನೆಗಳಿಗೂ ಬೆಂಕಿ ಹತ್ತಿಕೊಂಡಿದೆ. ಇಬ್ಬರೂ ನರಕಕ್ಕೆ ಹೋಗುವುದಕ್ಕೆ ಸಿದ್ಧವಾಗಿದ್ದಾರೆ.

**–ಕಬೀರ್**

ಮಣ್ಣಿನಿಂದ ದೇವಿ, ದೇವರುಗಳ ನಿರ್ಜೀವ ಪ್ರತಿಮೆಗಳನ್ನು ಮಾಡಿ ಅವುಗಳನ್ನು ಪೂಜಿಸುತ್ತಾ, ಅವುಗಳ ಎದುರಿಗೆ ಸಜೀವಿಗಳನ್ನು ಬಲಿ ಕೊಡುವವರಿಗೆ ಅಂತ್ಯ ಕಾಲದಲ್ಲಿ ಅತಿ ದುಃಖವು, ಯಾತನೆಗಳುಂಟಾಗುತ್ತವೆ.

**–ಕಬೀರ್**

ಎಲ್ಲರಲ್ಲೂ ಆ ಒಬ್ಬನಾದ ಪರಮಾತ್ಮನೇ ಇರುತ್ತಾನೆನ್ನುತ್ತಾ, ಮತ್ತೇ ಕೋಳಿಗಳನ್ನು ಪ್ರಾಣಿಗಳನ್ನು ಎಂದು ಸಾಯಿಸುವೆ. ಹಾಗೆ ಬಲವಂತದಿಂದ ಸಾಯಿಸಿ ತಿನ್ನುವವನು ಭಗವಂತನ ಮುಂದೆ ಕರ್ಮಗಳ ಲೆಕ್ಕವನ್ನು ಒಪ್ಪಿಸಬೇಕಾಗಿ ಬರುತ್ತದೆ. ಶಿಕ್ಷೆಗೆ ಒಳಗಾಗುತ್ತಾನೆ.

**–ಕಬೀರ್**



ನೀವು ಜಗತ್ತಿನಲ್ಲಿ ಎಲ್ಲಿ ಅಥವಾ ಯಾರನ್ನು ನೋಡಿದರೂ, ನೀವು ತೊಂದರೆಗಳು, ಸಮಸ್ಯೆಗಳು, ಸಂಕಟಗಳು ಮತ್ತು ಚಂಚಲತೆಯಿಂದ ದುಃಖಿತರಾಗುತ್ತೀರಿ. ಸುಳ್ಳಿನಲ್ಲಿ ಬದುಕುವುದೇ ಇದಕ್ಕೆ ಮುಖ್ಯ ಕಾರಣ. ಮನುಷ್ಯರು ಸತ್ಯವನ್ನು ತಿಳಿದು ಸತ್ಯದಲ್ಲಿ ಬದುಕಿದಾಗ ದುಃಖವು ತನ್ನಿಂದ ತಾನೇ ಮಾಯವಾಗುತ್ತದೆ. ಸತ್ಯವನ್ನು ತಿಳಿದುಕೊಳ್ಳುವುದು ಶಾಶ್ವತ ಸಂತೋಷಕ್ಕೆ ಕಾರಣವಾಗಬಹುದು.

ಅನೇಕ ಯೋಗಿಗಳು ಮತ್ತು ಯೋಗೀಶ್ವರರು ಸತ್ಯವನ್ನು ತಿಳಿದುಕೊಳ್ಳುವ ಮಾರ್ಗವನ್ನು ನಮಗೆ ತೋರಿಸಿದ್ದಾರೆ. ಈ "ಸತ್ಯದ ಹಾದಿ" ಇವರೆಲ್ಲರು ತೋರಿದ ದಾರಿಯನ್ನು ಓದುಗರು ಅಧ್ಯಯನ ಮಾಡಿ ಸತ್ಯವನ್ನು ಅರಿತು ತಮ್ಮ ಬದುಕು ಧನ್ಯವಾಗಲಿ ಎಂದು ಹಾರೈಸುತ್ತೇನೆ.........

ಬ್ರಹ್ಮರ್ಷಿ ತಟವರ್ತಿ ವೀರರಾಘವರಾವು

ರೂ 80/-




ಪಿರಮಿಡ್ ಸ್ಪಿರಿಚ್ಯುಯಲ್ ಸೊಸೈಟೀಸ್ ಮೂವ್‌ಮೆಂಟ್, ಇಂಡಿಯಾ
ಧ್ಯಾನದ ಬಗ್ಗೆ ಮತ್ತಷ್ಟು ಸಮಾಚಾರಕ್ಕಾಗಿ ಈ ಕೆಳಗಿನ ವೆಬ್‌ಸೈಟ್ ಸಂದರ್ಶಿಸಿ
https: //www.youtube.com/pmckannada • www.meditationeverywhere.org
• www.pssmovement.org

ಶ್ರೀರಾಮ ಪಬ್ಲಿಕೇಶನ್ಸ್
ಶ್ರೀರಾಮಧಾಮ ಧ್ಯಾನಕೇಂದ್ರ,
ನಾರಾಯಣಪ್ಪ ಗಾರ್ಡನ್, ವೈಟ್ ಫೀಲ್ಡ್, ಬೆಂಗಳೂರು - 560 066
ಸಂಪರ್ಕಿಸಿ : ಹೆಚ್.ಎನ್. ಶ್ರೀನಿವಾಸ, 9449695503
ವಿಜಯಲಕ್ಷ್ಮಿ ಎಸ್.ಎನ್. + 91 80500 82689